Mr. SPEAKER.—The hon'ble member is making a request which is not capable of being implemented. How can a resolution be passed in a Demand? Can be get a better opportunity than the Demand itself when the whole matter like labour and unemployment could be referred to?

BUDGET ESTIMATES FOR 1962-63—DEMANDS FOR GRANTS.

Demand No. 20: AGRICULTURE.

ಶ್ರೀ ಆರ್. ಮುನಿಸ್ವಾಮಯ್ಯ (ದೇವನಹಳ್ಳಿ).—ಸ್ವಾಮಿ, ಈಗ ಈ ವ್ಯವಸಾಯದ ಇಲಾಖೆಯಲ್ಲಿ ಅನೇಕ ದರ್ಜೆಯ ಹುದ್ದೆಗಳು ಬಹುದಿವಸಗಳಿಂದ ಖಾಲಿ ಬಿದ್ದು ಅವುಗಳನ್ನು ಈವರೆಗೂ ಭರ್ತಿ ಮಾಡಿರುವುದಿಲ್ಲ ಅಂತ ನಾವು ಕೇಳುತ್ತಿದ್ದೇವೆ. ಹಾಗೆ ಆ ಹುದ್ದೆಗಳಿಗೆ ಜನರನ್ನು ಭರ್ತಿ ಮಾಡದೆ ಇರುವುದರಿಂದ ಲಾಬೊರೇಟರಿ ಇತ್ಯಾದಿ ಬ್ರಾಂಚಿನಲ್ಲಿ ನಡೆಯಬೇಕಾಗಿದ್ದ ಕೆಲಸಗಳಿಗೆಲ್ಲ ತಡೆಯಾಗಿ ಸರ್ಕಾರದವರು ಈದಿವಸ ಸಾಕಷ್ಟು ತೃಪ್ತಿಕರವಾಗಿ ಈ ಇಲಾಖೆಯಲ್ಲಿ ನಡೆಯಬೇಕಾದ ಕೆಲಸಕಾರ್ಯಗಳನ್ನು ನಡಿಸಲಿಕ್ಕಾಗಿಲ್ಲವೆಂದು ನಾನು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಈ ವಿಚಾರವನ್ನು ಗಮನಕ್ಕೆ ತೆಗೆದುಕೊಂಡು ಆ ಖಾಲಿ ಬಿದ್ದಿರತಕ್ಕ ಸ್ಥಾನಗಳಿಗೆ ಒಳ್ಳೆಯ ನುರಿತ ಹಾಗೂ ಯೋಗ್ಯರಾದ, ಅರ್ಹತೆಯುಳ್ಳ ವ್ಯಕ್ತಿಗಳನ್ನು ನೇಮಕ ಮಾಡಿ ಈ ಇಲಾಖೆಯ ಕೆಲಸಕಾರ್ಯಗಳು ಜಾಗ್ರತೆ ನಡೆಯುವ ಹಾಗೆ ಏರ್ಪಾಡು ಮಾಡಬೇಕೆಂದು ನಾನೀಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಈ ದಿವಸ ನಮ್ಮ ವ್ಯವಸಾಯ ಖಾತೆಯ ಮಾನ್ಯ ಮಂತ್ರಿಗಳು ಈ ಇಲಾಖೆಯ ಬಗ್ಗೆ ಪೂರ್ಣ ಆಸಕ್ತಿ ವಹಿಸಿ, ದೇಶದ ಈಗಿನ ತುರ್ತುಪರಿಸ್ಥಿತಿಯಲ್ಲಿ ಜನರಿಗೆ ಅನೇಕ ರೀತಿಯಲ್ಲಿ ಸೇವೆ ಸಲ್ಲಿಸಬೇಕೆಂಬ ಉತ್ಸಾಹದಿಂದ ಇಲಾಖೆಯವರಿಗೆ ಕೆಲವು ವಿಶೇಷ ಸೂಚನೆಗಳನ್ನು ಸರ್ಕ್ಯುಲರ್ ಮೂಲಕ ಕಳುಹಿಸಿ ಅವರು ಜಾಗರೂಕತೆಯಿಂದ ಕೆಲಸ ಮಾಡುವಂತೆ ಸೂಕ್ತ ಏರ್ಪಾಡುಗಳನ್ನೇನೋ ಮಾಡಿದ್ದಾರೆ. ಆದರೆ ಈ ಇಲಾಖೆ ನಿದ್ರಾವಸ್ಥೆಯಲ್ಲಿದೆ. ಈ ನಿದ್ರಾವಸ್ಥೆಯಲ್ಲಿರತಕ್ಕ ಅಧಿಕಾರಿಗಳನ್ನು ಎಚ್ಚರಿಸಿ ಅವರು ಚೆನ್ನಾಗಿ ಕೆಲಸ ಮಾಡುವ ಹಾಗೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಈಗ ನಮ್ಮ ಬೆಂಗಳೂರಿನಲ್ಲಿರತಕ ಅಗ್ರಿಕಲ್ಚರಲ್ ಕಾಲೇಜು ಇನ್ನೂ ಶೈಶವಾವಸ್ಥೆಯಲ್ಲಿದ್ದು ಇದು ಭರತಖಂಡದ ಇತರ ರಾಜ್ಯಗಳಲ್ಲಿರುವ ಕಾಲೇಜುಗಳ ಮಟ್ಟಕ್ಕಿನ್ನೂ ಬರಲಿಲ್ಲವೆಂಬುದಾಗಿ ಜನರು ಹೇಳುತ್ತಿದ್ದಾರೆ. ಈ ನಮ್ಮ ಕಾಲೇಜನ್ನು ಇತರ ರಾಜ್ಯಗಳಲ್ಲಿರತಕ್ಕ ಕಾಲೇಜುಗಳ ಮಟ್ಟಕ್ಕೆ ಜಾಗ್ರತೆ ಬರುವಂತೆ ಏರ್ಪಾಡು ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಈ ವ್ಯವಸಾಯದ ಇಲಾಖೆಯಲ್ಲಿ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟನ್ನಿನ್ನೂ ತಯಾರು ಮಾಡಿಲ್ಲ—ಅದನ್ನು ಇನ್ನೂ ತೀರ್ಮಾನ ಮಾಡಿಲ್ಲ. ಇದರಿಂದ ಅಲ್ಲಿರತಕ್ಕ ಅಧಿಕಾರಿಗಳಲ್ಲೂ ಇನ್ನಿತರ ನೌಕರ ವರ್ಗದಲ್ಲೂ ನಿರುತ್ಸಾಹ ಉಂಟಾಗಿದೆ. ಹೀಗಾಗಿ ಈ ದಿವಸ ಈ ಇಲಾಖೆಯಲ್ಲಿ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಈ ತೊಂದರೆಯನ್ನು ಮಾನ್ಯ ಮುಖ್ಯ ಮಂತ್ರಿಗಳು, ಈ ಇಲಾಖೆಗೆ ಸಂಬಂಧಪಟ್ಟ ಮಂತ್ರಿಗಳೂ ಹಾಗೂ ಸೆಕ್ರೆಟರಿಯೇಟ್ಗೆ ಸಂಬಂಧಪಟ್ಟ ಅಧಿಕಾರಿಗಳೂ ಪರಿಹರಿಸಲು ಕೂಡಲೇ ಆ ಇಂಟರ್ ಸ್ಟೇಟ್ ಸೀನಿಯಾರಿಟಿ ಲಿಸ್ಟನ್ನು ತಯಾರಿಸಿ—ಆ ತೊಂದರೆಯನ್ನು ಪರಿಹರಿಸಬೇಕೆಂದು—ಆ ಇಲಾಖೆಯ ಅಧಿಕಾರಿಗಳೂ ಮತ್ತು ನೌಕರರೂ ತೃಪ್ತಿಕರವಾಗಿ ಕೆಲಸ ಮಾಡಲವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಶು ಸಂಗೋಪನಾ ಇಲಾಖೆಯ ಬಗ್ಗೆ ಒಂದು ಮಾತನ್ನು ಹೇಳುವುದಾದರೆ ಈಗಾಗಲೇ ಈ ಇಲಾಖೆ ಬಹಳಮಟ್ಟಿಗೆ ಉತ್ತಮಗೊಂಡಿರುತ್ತದೆಂಬುದನ್ನು ತಿಳಿಸಲು ಸಂತೋಷವಾಗುತ್ತದೆ. ಕಾಲೇಜುಗಳಲ್ಲಿ ಉತ್ತೀರ್ಣರಾಗಿ ಬಂದಿರತಕ್ಕ ಜನರು ಈ ಇಲಾಖೆಯಲ್ಲಿ ಬಹಳ ಉತ್ಸಾಹದಿಂದ—ಶ್ರದ್ಧೆಯಿಂದ ಕೆಲಸ ಮಾಡುತ್ತಿದ್ದಾರೆ. ಆದರೆ ಈ ಇಲಾಖೆಯಲ್ಲಿ ಕೆಲಸಗಳು ಸ್ಟಾಕ್ಮೆನ್‌ಗಳೂ ಕಾಂಪೌಂಡರುಗಳೂ ಇಲ್ಲದೆ, ಸರಿಯಾಗಿ ನಡೆಯುತ್ತಿಲ್ಲ. ಆದುದರಿಂದ ನಮಗೀಗ ಕೊರತೆಯಾಗಿರುವ ಈ ಸ್ಟಾಕ್‌ಮೆನ್‌ಗಳನ್ನು ತಯಾರಿಸಲು ಜಾಗ್ರತೆಯಾಗಿ ಒಂದು ಶಾಲೆಯನ್ನು ಸ್ಥಾಪನೆ ಮಾಡಿ, ತನ್ಮೂಲಕ ಈ ಇಲಾಖೆಯ ಕೆಲಸ ಕಾರ್ಯಗಳು ಸುಗಮವಾಗಿ ನಡೆಯುವಂತೆ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ದೇಶದಲ್ಲಿ ಹೆಚ್ಚಾಗಿ ಹಾಲು ಕೊಡತಕ್ಕ ಹಸುಗಳ ತಳಿಯನ್ನೂ ಸಹ ಅಭಿವೃದ್ಧಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಬೇಕಾದ ಉತ್ತಮ ತಳಿ ರಾಸುಗಳನ್ನು ನಮ್ಮ ದೇಶದ ಇತರ ರಾಜ್ಯಗಳಿಂದಾಗಲೀ

ಅಥವಾ ಪರದೇಶಗಳಿಂದಾಗಲಿ ತರಿಸಿ ಈ ಹಸುಗಳ ತಳಿಯನ್ನೇ ಉತ್ತಮಗೊಳಿಸಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಈ ಹಾಲಿನ ಸರಬರಾಯಿಗಾಗಿ ಅಲ್ಲಲ್ಲಿ ಸೊಸೈಟಿಗಳನ್ನು ಮಾಡಿದ್ದಾರೆ. ಈ ವಿಚಾರದಲ್ಲಿ ಮಾನ್ಯ ಎಂ. ವಿ. ಕೃಷ್ಣಪ್ಪನವರು ಹೆಚ್ಚಿನ ಪ್ರೋತ್ಸಾಹ ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಆದರೆ ಈ ಪಶುವೈದ್ಯ ಇಲಾಖೆಯಲ್ಲಿ ಆಗಲೇ ಕೆಲವು ಮಾನ್ಯ ಸದಸ್ಯರು ಸೂಚಿಸಿರುವಂತೆ ಅಧಿಕಾರಿಗಳಲ್ಲಿ ಹೊಂದಾವಣಿಕೆಯಿಲ್ಲ. ಒಬ್ಬರ ಮೇಲೊಬ್ಬರು ಚಾಡಿ ಹೇಳಿಕೊಂಡು, ದೂಷಣೆಗಳನ್ನು ಮಾಡುತ್ತ ಕಾಲ ಕಳೆಯುತ್ತಿದ್ದಾರೆ. ಈ ಕಾರಣದಿಂದ ಮಂತ್ರಿಗಳು ಈ ಇಲಾಖೆಯ ಬಗ್ಗೆ ವೈಯುಕ್ತಿಕವಾಗಿ ಆಸಕ್ತಿ ವಹಿಸಿದ್ದರೂ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿಲ್ಲ. ಈ ವಿಚಾರಕ್ಕೆ ಮಾನ್ಯ ಮಂತ್ರಿಗಳು ಮುಖ್ಯ ಗಮನ ಕೊಟ್ಟು ಈ ಇಲಾಖೆಯಲ್ಲಿ ಕೆಲಸ ಕಾರ್ಯಗಳು ಸರಿಯಾಗಿ ನಡೆದು ಈ ಇಲಾಖೆ ಅಭಿವೃದ್ಧಿಗೆ ಬರುವಂತೆ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಮೀನು ಕೈಗಾರಿಕೆಯ ವಿಷಯದಲ್ಲಿ ಅನೇಕ ಸ್ನೇಹಿತರು ಮಾತನಾಡಿದ್ದಾರೆ. ಒಳನಾಡಿನಲ್ಲಿ ಕೆರೆ ಕುಂಟೆಗಳಲ್ಲಿ ಮೀನನ್ನು ಬೆಳೆಸುವುದಕ್ಕೆ ಏರ್ಪಾಡು ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಮತ್ತು ಕೆರೆ, ಕೊಳಗಳಲ್ಲಿ ಮೀನನ್ನು ಹರಾಜು ಹಾಕುವುದರ ಮೂಲಕ ಮಾರಬಹುದು. ಮೀನನ್ನು ಸಾಕುವುದಕ್ಕೆ ಮತ್ತು ಹರಾಜುಹಾಕಿ ಮಾರುವುದಕ್ಕೆ ಗ್ರಾಮಾ ಪಂಚಾಯಿತಿಗಳಿಗೆ ಬಿಟ್ಟು ಕೊಟ್ಟರೆ ಅದರಿಂದ ಜನರಿಗೆ ಪುಷ್ಟಿದಾಯಕವಾದ ಆಹಾರ ಸಿಕ್ಕುವುದಲ್ಲದೆ ಪಂಚಾಯಿತಿಗಳಿಗೆ ಹಣ ಸಹ ಒದಗುತ್ತದೆ.

ಅರಣ್ಯ ಇಲಾಖೆಯಲ್ಲಿ ಹೆಚ್ಚು ಕಳ್ಳ ಸಾಗಾಣಿಕೆ ನಡೆಯದಿರುವಂತೆ ಮಾಡಿರುವುದಕ್ಕಾಗಿ ಸಂಬಂಧಪಟ್ಟ ಮಂತ್ರಿಗಳನ್ನು ಅಭಿನಂದಿಸುತ್ತೇನೆ. ಇನ್ನು ಅರಣ್ಯಗಳನ್ನು ಹೆಚ್ಚಿಸಬೇಕಾಗಿದೆ. ಅನೇಕ ಕಡೆ ಕಾರಣಾಂತರದಿಂದ ಇದ್ದ ಕಾಡನ್ನೆಲ್ಲ ಕಡಮೆ ಮಾಡಿದ್ದಾರೆ. ಕಾಡನ್ನು ಹೆಚ್ಚಾಗಿ ಬೆಳೆಸಲು ನರ್ಸರಿಗಳನ್ನು ಹೆಚ್ಚಿಸಿ, ಹೆಚ್ಚು ಸಸಿಗಳನ್ನು ಬೆಳೆಸಬೇಕು. ಎಲ್ಲ ಜಿಲ್ಲೆಗಳಲ್ಲಿಯೂ ಸಾಕಾದಷ್ಟು ಅರಣ್ಯವಿರುವಂತೆ ಏರ್ಪಾಡು ಮಾಡಬೇಕು. ಈ ಇಲಾಖೆಯಲ್ಲಿ ನಹ ರಾಜ್ಯ ಮತ್ತು ಅಂತರ ರಾಜ್ಯ ಸೀನಿಯಾರಿಟಿಪಟ್ಟಿ ಪೂರ್ಣವಾಗದೆ ಅತೃಪ್ತಿಯಾಗಿದೆ. ಅದನ್ನು ಕೂಡ ಪರಿಹರಿಸಬೇಕು. ಅರಣ್ಯಗಳು ಸರ್ಕಾರದ್ದು, ಅದನ್ನು ರಕ್ಷಣೆ ಮಾಡುವವರೆ ಬೇರೆ ಇದ್ದಾರೆಂಬ ಭಾವನೆ ಜನಗಳಲ್ಲಿ ಬಂದಿದೆ. ನಮ್ಮ ಊರು, ನಮ್ಮ ಪಾಠಶಾಲೆ, ನಮ್ಮ ಕೆರೆ ಎಂದು ಹೇಳುವುದನ್ನು ನಾವು ಕೇಳಿದ್ದೇವೆ. ಆದರೆ ಈ ಅರಣ್ಯ ನಮ್ಮದು, ನಮಗೆ ಸೇರಿದ್ದು ಎನ್ನುವ ಜನ ಕಾಣಲಿಲ್ಲ. ಆ ಭಾವನೆ ಜನರಲ್ಲಿ ಉಂಟಾಗುವಂತೆ ಪ್ರಚಾರವನ್ನು ನಡೆಸಬೇಕು. ಅರಣ್ಯದ ಸುತ್ತಲೂ ಇರತಕ್ಕ ಗ್ರಾಮಸ್ಥರನ್ನು ಸೇರಿಸಿ ಒಂದು ಸಮಿತಿಮಾಡಿ ಅದಕ್ಕೆ ಅರಣ್ಯಗಳ ಉಸ್ತುವಾರಿ ಕೆಲಸವನ್ನು ವಹಿಸಿ ಅರಣ್ಯಗಳಿಂದ ಕಳ್ಳ ಸಾಗಾಣಿಕೆ ಆಗದಿರುವಂತೆ ಮಾಡಬೇಕೆಂದು ಹೇಳುತ್ತೇನೆ.

ಗ್ರಾಮಾಭಿವೃದ್ಧಿಯ ವಿಚಾರವನ್ನು ತೆಗೆದುಕೊಂಡರೆ ಅಲ್ಲಿಯ ಅಧಿಕಾರಿಗಳ, ಹೊಸದಾಗಿ ಬಂದಿರತಕ್ಕ ಅಧಿಕಾರಿಗಳ, ವಂಶಪಾರಂಪರ್ಯವಾಗಿ ಇದ್ದು ಹೋಗತಕ್ಕ ಅಧಿಕಾರಿಗಳ ಕಾತ್ಸಾರದಿಂದ ಗ್ರಾಮಾಭಿವೃದ್ಧಿಗೆ ಬಹಳ ಅಡ್ಡಿಯಾಗಿದೆ. ಆದುದರಿಂದ ಗ್ರಾಮಪಂಚಾಯತಿಗೆ ನೇಮಿಸಬೇಕಾದ ಅಧಿಕಾರಿಗಳನ್ನು ಜಾಗ್ರತೆ ನೇಮಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಸಹಕಾರ ಸಂಘಗಳು ನಮ್ಮ ದೇಶದಲ್ಲಿ 15 ಸಾವಿರಇವೆ ಎಂದು ಕೇಳಿದ್ದೇನೆ. ಅವುಗಳಲ್ಲಿ ಕೆಲವು ಚೆನ್ನಾಗಿ ಕೆಲಸ ಮಾಡುತ್ತಿವೆ. ಇನ್ನು ಕೆಲವು ಕಡೆ ಡೈರೆಕ್ಟರುಗಳು ಹಣ ತಿಂದುಹಾಕಿರುವುದರಿಂದ ಜನಗಳಿಗೆ ಸೊಸೈಟಿಗಳಲ್ಲಿ ಷೇರು ಬಂಡವಾಳ ಹಾಕಿದರೆ ಏನಾಗುತ್ತದೆಯೋ ಎನ್ನುವ ಅನುಮಾನ ಹೆಚ್ಚಾಗಿದೆ. ಇದನ್ನೆಲ್ಲ ಸರಿ ಪಡಿಸಲು ತುರ್ತು ಕೆಲಸಗಳನ್ನು ತೆಗೆದುಕೊಳ್ಳಬೇಕು.

Scheduled Castes House Building Societies ಎಂದು ಸರ್ಕಾರದವರೇ ಪ್ರಾರಂಭ ಮಾಡಿದ್ದಾರೆ. ಇಲ್ಲಿ ಕಾನೂನಿಗೆ ವಿರೋಧವಾಗಿ ಕೆಲಸಮಾಡಿದ್ದಾರೆ. ಈ ಸೊಸೈಟಿಗಳಿಗೆ ತಾಲ್ಲೂಕ್ ಬೋರ್ಡ್ ಅಧ್ಯಕ್ಷರಾಗಿರುವವರು ಅಧ್ಯಕ್ಷರಾಗಿರಬೇಕೆಂದು ಆರ್ಡರ್ ಮಾಡಿದ್ದಾರೆ. ಇದು ಕಾನೂನಿಗೆ ವಿರೋಧವಾಗಿದೆ. ಇದನ್ನು ಜಾಗ್ರತೆ ತಪ್ಪಿಸಿ ಆಯಾ ಸೊಸೈಟಿಗಳ ಷೇರು ಹೋಲ್ಡರುಗಳೇ ಅಧ್ಯಕ್ಷರನ್ನು ಚುನಾಯಿಸಬೇಕು ಎಂದು ಒಂದು ಆರ್ಡರ್ ಹೊರಡಿಸಬೇಕು. ಈ ಸೊಸೈಟಿಗಳಲ್ಲಿ ಷೇರ್ ಹೋಲ್ಡರುಗಳಿಂದ ಚುನಾಯಿತರಾದ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು office beares ಇದ್ದರೆ ಒಳ್ಳೆಯದು. ಹರಿಜನರ ಸೊಸೈಟಿಗಳಿಗೆ ಅಧಕ್ಷರಾಗತಕ್ಕ ಅರ್ಹತೆ ಇರುವವರು ಅವರಲ್ಲಿ ಯಾರೂ ಇಲ್ಲವೇನೋ ಎನ್ನುವ ಅನುಮಾನ ವುಂಟಾಗಿದೆ. ಹರಿಜನರಿಗೆ ಒಂದು ರೀತಿಯ ಅವಮಾನ ಮಾಡಿದಹಾಗೆ ಕಾಣಿಸುತ್ತದೆ. ಸಹಕಾರ ಶಾಖೆಯ ಮಂತ್ರಿಗಳು, ಮತ್ತು ಸಮಾಜ ಕಲ್ಯಾಣ ಶಾಖೆಯ ಮಂತಿಗಳು, ಹರಿಜನರೇ ಆಗಿರತಕ್ಕ ಮಾನ್ಯ ಶ್ರೀ ಬಿ. ರಾಚಯ್ಯನವರೂ ಇದನ್ನು ಜಾಗ್ರತೆ ಪರಿಶೀಲಿಸಿ ಅವಮಾನವನ್ನು ಪರಿಹರಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

(ಶ್ರೀ ಆರ್. ಮುನಿಸ್ವಾಮಯ್ಯ)

ನಮ್ಮ ದೇಶದಲ್ಲಿ ಅನೇಕ ಸೊಸೈಟಿಗಳಲ್ಲಿ ಸರ್ಕಾರದವರು ಬಂಡವಾಳವನ್ನು ಹಾಕಿದ್ದಾರೆ. ಇಂಥ ಸೊಸೈಟಿಗಳಿಗೆ ಡೈರೆಕ್ಟರುಗಳನ್ನು ನಾಮಕರಣ ಮಾಡುತ್ತಾರೆ. ಅದಕ್ಕೆ ಹರಿಜನರನ್ನು ಸಹ ನಾಮಕರಣ ಮಾಡಬೇಕೆಂದು ಸಲಹೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—Before I call upon Sri Siddaiah Kasimath to speak, I would like to know how the debate ought to be regulated. Yesterday it was mentioned that 2 hours would be required by Ministers for reply.

Sri M. V. KRISHNAPPA (Minister for Revenue).—There are 4 Ministers who have to reply. We require atleast 3 hours.

Mr. SPEAKER.—Then the reply would begin at 4.O'clock, The debate will go on till 4-P.M. I will also make it clear that after the reply is over there would be no clarifications asked or given.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮುಖ್ಯವಾದ ಪಾಯಿಂಟ್ಸ್ ಗುರುತು ಹಾಕಿಕೊಂಡು precise ಆಗಿ ಉತ್ತರ ಕೊಡಲಿ ಸ್ವಾಮಿ. ಭಾಷಣ ಮಾಡುವವರು ಇನ್ನೂ ಇದ್ದಾರೆ.

Mr. SPEAKER.—How am I to know what reply would be given? I know there is demand to speak. That is why I am trying to give maximum accommodation.

Sri SANJEEVANATHA AIKALA (Suratkal).—Since the reply would be stereotyped, why should the Ministers be given 3 hours. It is to much.

Mr. SPEAKER.—Sri Sanjeevanatha Aikala is always original. Why does he anticipate that it would be stereotyped? In any case, the reply will begin at 4 O'clock and there would be no clarifications. Whatever, members want to raise, let them do it during the debate itself and not ask for clarifications later.

†ಶ್ರೀ ಸಿದ್ದಯ್ಯ ಕಾಶೀಮಠ (ಶಿರಹಟ್ಟಿ).—ಅಧ್ಯಕ್ಷರೇ, ರಾಜ್ಯದ ಮಾನ್ಯ ವ್ಯವಸಾಯ ಮಂತ್ರಿಗಳು ಈ ಸಭೆಯ ಮುಂದೆ ಇಟ್ಟಿರುವ ವ್ಯವಸಾಯ, ಪಶು ಸಂಗೋಪನ, ಅರಣ್ಯಗಳು, ಗ್ರಾಮಾಭಿವೃದ್ಧಿ, C. D. ಮತ್ತು N.E.S. ಬ್ಲಾಕುಗಳು, ಸಹಕಾರ ಇವುಗಳ ಬಗ್ಗೆ ಕೆಲವೊಂದು ಸಲಹೆಗಳನ್ನು ಮಾಡ ಬೇಕೆಂದು ಅಪೇಕ್ಷಿಸುತ್ತೇನೆ.

ಸರ್ಕಾರ ರೈತರಿಗೆ ಸಹಾಯ ಮಾಡಬೇಕೆಂದು ಸಾಕಷ್ಟು ಯೋಜನೆಗಳನ್ನು ಮಾಡಿ ಅದಕ್ಕೆ ಬೇಕಾಗುವಷ್ಟು ದುಡ್ಡನ್ನು ಸಹ ಇಟ್ಟಿರುತ್ತಾರೆ. ಆದರೆ ಇವೊತ್ತು ಸರ್ಕಾರದಿಂದ ದುಡ್ಡನ್ನು ಉಪಯೋಗ ಮಾಡತಕ್ಕಂಥ agencies ಏನಿವೆ, C.D. Blocks ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳು ಕೆಲಸವನ್ನು ನಿರ್ದಿಷ್ಟವಾಗಿ ಮಾಡದೇ ಇರುವುದರಿಂದ ಸರ್ಕಾರಕ್ಕೆ ಮೇಲಿಂದ ಮೇಲೆ ಅಪವಾದ ಬರುವುದು. ಸರ್ಕಾರ ಹೆಚ್ಚಿಗೆ ಆಹಾರ ಉತ್ಪಾದನೆ ಮಾಡಬೇಕೆಂದು ಅಲ್ಲಲ್ಲಿ ಕೆರೆಗಳನ್ನೂ ದೊಡ್ಡ ನೀರಾವರಿ ಪ್ರಾಜೆಕ್ಟ್‌ಗಳನ್ನೂ ಅಷ್ಟೇ ಅಲ್ಲದೆ ರೈತರ ಸ್ವಂತಕ್ಕಾಗಿ ಬಾವಿಗಳನ್ನು ತೋಡಿಕೊಳ್ಳುವುದಕ್ಕೆ ಹಣವನ್ನು ಒದಗಿಸಿ ಅದರ ಮುಖಾಂತರವಾಗಿ ನೀರಾವರಿಯನ್ನು ಹೆಚ್ಚುಮಾಡಿ ಆಹಾರವನ್ನು ಹೆಚ್ಚು ಉತ್ಪಾದನೆ ಮಾಡಬೇಕೆಂಬ ಉದ್ದೇಶದಿಂದ ಇವೊತ್ತಿನ ದಿವಸ ಸಹಾಯ ಮಾಡುತ್ತಿದ್ದಾರೆ.

1-30 P.M.

ಇನ್ನು ರೈತರಿಗೆ ಇರತಕ್ಕ ಕಷ್ಟಗಳಲ್ಲಿ ಒಂದನ್ನು ಹೇಳಬೇಕು ಎಂದರೆ ಅವರಿಗೇನೂ ಇರಲಿಕ್ಕೆ ಪಟ್ಟಣದಲ್ಲಿದ್ದಂತೆ ಮನೆ ಬೇಕಾಗಿಲ್ಲ, ತೊಡಲಿಕ್ಕೆ ಉತ್ತಮವಾದ ಬಟ್ಟೆ ಏನೂ ಬೇಕಾಗಿಲ್ಲ. ಅವರಿಗೆ seasonal ಆಗಿ ಉಳುವುದಕ್ಕೆ ಒಳ್ಳೆಯ ನೇಗಿಲು, ವಗೈರೆ ಸಲಕರಣೆಗಳನ್ನು ಒದಗಿಸಿಕೊಡತಕ್ಕದ್ದು ಆದ್ಯಕರ್ತವ್ಯ, ನಮ್ಮ ರೈತರಿಗಾಗಿ ಹಾಸನದಲ್ಲಿ agricultural implements ತಯಾರು ಮಾಡುತ್ತಾರೆ. ಅವುಗಳು ಮುಖ್ಯವಾಗಿ ನಮ್ಮ ಮುಂಬೈ ಕರ್ನಾಟಕದಲ್ಲಿ ವಿಶೇಷ ಉಪಯೋಗಕ್ಕೆ ಬಾರದಂತೆ ಆಗಿರುತ್ತವೆ. ಇದಕ್ಕಾಗಿ ಆ ಕಾರ್ಖಾನೆಯಲ್ಲಿರುವಂಥ ಒಬ್ಬ ತಜ್ಞರನ್ನು ಆ ಭಾಗಕ್ಕೆ

ಕಳುಹಿಸಿ ಅಲ್ಲಿ ಯಾವ ಮಾದರಿಯ ಗುದ್ದಲಿ, ಸಲಿಕೆ, ಕೊಡಲಿ, ಕುರಚಿಗಿ, ಮುಂತಾದ ಸಾಮಗ್ರಿಗಳನ್ನು ಉಪಯೋಗಿಸುತ್ತಾರೆಂದು ತಿಳಿದುಕೊಂಡು ಆ ತೆರನಾಗಿ ಮಾಡಿಕಳಿಸಿದರೆ, ಅವುಗಳನ್ನು ಹೆಚ್ಚು ಪುರೋಟ ಮಾಡಲಿಕ್ಕೆ ಪ್ರಯತ್ನಮಾಡಿದರೆ ಅದರಿಂದ ಸಹಾಯವಾಗುತ್ತದೆಂದು ಈ ಸಮಯದಲ್ಲಿ ಹೇಳುತ್ತೇನೆ.

ಇನ್ನು ರೈತರಿಗೆ ಸಕಾಲದಲ್ಲಿ ಬೀಜ ಕೊಡತಕ್ಕದ್ದು ಬಹಳ ಮುಖ್ಯವಾದುದು. ಈಗಾಗಲೇ ನಮ್ಮ ಸ್ನೇಹಿತರು ಸಾಕಷ್ಟು ಈ ಬೀಜದ ಬಗ್ಗೆ ಹೇಳಿದ್ದಾರೆ. ಬೀಜ ಹಂಚುವಿಕೆಯನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಮುಖಾಂತರ ಅಲ್ಲಲ್ಲಿರುವ ಎಲ್ಲಾ ತಾಲ್ಲೂಕುಗಳ ಬ್ಲಾಕುಗಳ ಮೂಲಕ ಹಂಚಬೇಕೆಂದು ಮಾಡಿದ್ದಾರೆ. ಈ ಬೀಜಗಳ ಬಗ್ಗೆ ಈಗಾಗಲೇ ಸಾಕಷ್ಟು ತಕರಾರುಗಳು ಸರಕಾರಕ್ಕೆ ಬಂದಿವೆ ನಮ್ಮ ಭಾಗದಲ್ಲೂ ಜೋಳದ ಬೀಜ ಕೊಟ್ಟಾಗ ಬಹಳವಾಗಿ ಅದರ ಬಗ್ಗೆ ಪ್ರಚಾರ ಮಾಡಿ ರೈತರಿಗೆ ತಿಳಿಸುತ್ತಿದ್ದಾರೆ. ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬ್ಲಾಕುಗಳ ಮೂಲಕವಾಗಿಯೂ ಜನಕ್ಕೆ ತಿಳುವಳಿಕೆ ಕೊಡಲು ಪ್ರಚಾರ ಮಾಡುವುದೇನೋ ಸರಿ. ಆದರೆ ಅವರು ಹೇಳಿದಂತೆ ಬೀಜಗಳನ್ನು ತೆಗೆದುಕೊಂಡು ಉಪಯೋಗಿಸಿದರೂ ಸರಿಯಾದ ಬೆಳೆಯಾಗದೇ ನಾಪೀಕು ಆಗಿ ಇದರ ದೆಸೆಯಿಂದ ಬಹಳ ಕಷ್ಟದ ಪರಿಸ್ಥಿತಿ ಬಂದೊದಗಿದೆ. ಪ್ರತಿ ವರ್ಷವೂ ಈ ಬೀಜಗಳನ್ನು ಹಂಚುವಾಗ ನೋಡಿ ಸರಯಾದ ಉತ್ತಮ ತರವಾದ ಬೀಜಗಳನ್ನು ಹಂಚಿದರೆ, ಅದರಿಂದ ಒಳ್ಳೆಯ ಬೆಳೆಯನ್ನು ತರಲು ಅನುಕೂಲವಾಗುತ್ತದೆ. ಈಗೇನೋ ಮೇಲಿಂದ ಮೇಲೆ ಪೇಪರುಗಳಲ್ಲಿ, ಪ್ರಚಾರ ಶಾಖೆಯ ಮುಖಾಂತರ ವ್ಯವಸಾಯಕ್ಕೆ ಸಂಬಂಧಪಟ್ಟಂತೆ ಯಾವ ರೀತಿಯಾಗಿ ಬೀಜ ಉಪಯೋಗಿಸಬೇಕು, ಗೊಬ್ಬರ ಹೇಗೆ ಹಾಕಬೇಕು ಎನ್ನುವುದನ್ನು ತಿಳಿಸಿ ಬೆಳೆಯನ್ನು ಹೆಚ್ಚಿಗೆ ಮಾಡಿಕೊಳ್ಳಬಹುದು ಎಂದು ಸಲಹೆ ಕೊಡುತ್ತಿರುತ್ತಾರೆ. ರೇಡಿಯೋಗಳಲ್ಲಿ ಕೂಡ ಪ್ರಚಾರ ಮಾಡಿ ಜನಗಳಿಗೆ ತಿಳಿಯುವಂತೆ ಮಾಡುತ್ತಿದ್ದಾರೆ. ಹೀಗೆ ಉತ್ತಮವಾದ ಪ್ರಚಾರ ಮಾಡುವುದರಿಂದ ದೇಶದ ಜನ ಹೆಚ್ಚು ಬೆಳೆಯಲಿಕ್ಕೆ ಸಾಧ್ಯವಾದೀತು ಎಂದು ಮಾಡುತ್ತಿರುವುದೇನೋ ಉತ್ತಮವಾದುದು. ಇದರಿಂದ ಜನತೆಗೂ ಸಹಾಯಕರವಾಗಿರುತ್ತೆ.

ನಿನ್ನೆ ದಿವಸ ಈ ಸಭೆಯ ಮಾನ್ಯ ಸದಸ್ಯರಾದ ಶ್ರೀಮತಿ ಬಸವ ರಾಜೇಶ್ವರಿಯವರು ಅಣ್ಣಿಗೇರಿ ರೀಸರ್ಚ್ ಫಾರಂನಲ್ಲಿ "ಅಮೃತ" ಎನ್ನುವ ಗೋಧಿ ಬೀಜ ತಂದು ಉಪಯೋಗಿಸಿ ಬಹಳ ಉತ್ತಮವಾದ ಬೆಳೆ ಬೆಳೆದಿದ್ದೇವೆಂದು ಹೇಳಿದರು. ಅವರ ಊರು ಈ ಫಾರಂಗೆ ಸುಮಾರು ಇನ್ನೂರು ಮೈಲಿಗಳ ದೂರದಲ್ಲಿದೆ. ಆದರೆ ನನ್ನ ಊರು ಈ ಫಾರಮ್ಮಿಗೆ ಕೇವಲ ಐವತ್ತು ಮೈಲಿಗಳ ದೂರದಲ್ಲೇ ಇದೆ. ನಮ್ಮ ಭಾಗದಲ್ಲಿ ಈ "ಅಮೃತ" ಗೋಧಿ ಬೀಜವನ್ನು ಉಪಯೋಗಿಸಿ ಬೆಳೆ ತೆಗೆದಾಗ ಇದಕ್ಕೆ ಒಂದು ತರದ ಭಂಡಾರ ರೋಗ ತಗಲಿ ಬೆಳೆ ಹಾಳಾದವು. ಈ ವಿಚಾರವನ್ನು ವ್ಯವಸಾಯದ ಶಾಖೆಯ ಅಧಿಕಾರಿಗಳಿಗೂ ತಿಳಿಸಿದ್ದೇನೆ. ಇದಕ್ಕೆ ನಾನು ಸಲಹೆ ಮಾಡುವುದು ಪ್ರತಿಯೊಂದು ತಾಲ್ಲೂಕಿನಲ್ಲೂ ಒಂದೊಂದು ಸೀಡ್ ಫಾರಂ ಇರುವಂತೆ ಮಾಡಿ ಅಲ್ಲಿ ಬೆಳೆಯುವವರಿಗೆ ಅನುಕೂಲವಾಗುವಂತೆ ಉತ್ತಮವಾದ ಬೆಳೆಯನ್ನು ಮಾಡಲು ಪ್ರಾಯೋಗಿಕವಾಗಿ ಸಂಶೋಧನೆ ಮಾಡಿ ನಡೆಸಿದರೆ ಜನರಲ್ಲೂ ಆಸಕ್ತಿ ಹೆಚ್ಚಿ ಉತ್ತಮ ತರವಾದ ಬೆಳೆಯನ್ನು ಮಾಡಲಿಕ್ಕೆ ಅನುಕೂಲವಾಗುತ್ತದೆ. ಆದಕಾರಣ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಬ್ಲಾಕುಗಳಿರುವಂತೆ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಒಂದೊಂದು ಸೀಡ್ ಫಾರಂ ಇರುವಂತೆ ಏರ್ಪಾಡು ಮಾಡಿದರೆ ಇದರಿಂದ ಎಷ್ಟೋ ಜನಕ್ಕೆ ಸಹಾಯ ಮಾಡಿದಂತಾಗುತ್ತದೆ.

ನಮ್ಮ ಧಾರವಾಡ ಜಿಲ್ಲಾ ಭಾಗಗಳಲ್ಲಿ ಜೋಳದ ಬೆಳೆಗೆ ಒಂದು ತರಹ ಚಿಟ್ಟೆಗಳು ಬಂದು ಬೆಳೆ ಹಾಳಾಗುತ್ತಿದೆ. ಸುಮಾರು ಆರೆಂಟು ವರ್ಷಗಳಿಂದಲೂ ಜೋಳದ ಪೀಕು ಬಾರದೆ ನಾಶವಾಗಿ ಈ ಭಾಗಗಳು ಬರಗಾಲಕ್ಕೆ ತುತ್ತಾಗುತ್ತಿವೆ. ಹೋದ ವರ್ಷ D.D.T. Meeting ನಮ್ಮಲ್ಲಿ ನಡೆದಾಗ ಈ ಚಿಟ್ಟೆಹುಳವನ್ನು ನಾಶಪಡಿಸಲು ಅಲ್ಲಿಯ ಮೆಡಿಕಲ್ ಆಫೀಸರು 22 ಪೌಂಡುಗಳಷ್ಟು ಡಿ.ಡಿ.ಟಿ. ಪೌಡರು ಹಾಕಬೇಕು ಅದರ ಜೊತೆಗೆ ಶೇಕಡಾ ಐವತ್ತರಷ್ಟು "ಗೆಮಾಕ್ಸಿನ್" ಎನ್ನುವ ಪೌಡರನ್ನು ಹಾಕಿದರೆ, ಈ ಹುಳುಗಳು ಹಾಳಾಗುತ್ತವೆ ಎಂದು ಹೇಳಿದರು, ಅವರು ಹೇಳಿದಂತೆ ಈ ಪುಡಿಗಳನ್ನು ಉಪಯೋಗಿಸಿದರೂ ಕೂಡ ಈ ಚಿಟ್ಟೆ ಹುಳಗಳು ಈ ಪ್ರಯೋಗದಿಂದ ಸಾಯದೆ ಹಾಗೇ ಉಳಿದುವು. ಈ ರೀತಿ ಪ್ರಯೋಗ ನಡೆಸಿದ ಮೇಲೆ ವ್ಯವಸಾಯದ ಅಧಿಕಾರಿಗಳಿಗೆ ನಾನು ಲಿಖಿತ ಮೂಲಕ ತಿಳಿಸಿದರೆ ಅದಕ್ಕೆ ಅವರು ಯಾವ ರೀತಿ ಉತ್ತರ ಕೊಟ್ಟರು ಎಂದರೆ, ಪೌಡರುಗಳನ್ನು ಉಪಯೋಗಿಸುವಾಗ ಬೆಳೆಯಾಗುವ ಪೈರಿನ ಪ್ರತಿಯೊಂದು ಎಲೆಯ ಮೇಲೂ ಈ ಪೌಡರು ಬೀಳುವಂತೆ ಚೆಲ್ಲದರೆ ಈ ಹುಳುಗಳು ನಾಶವಾಗುತ್ತೆ ಎಂದು ಹೇಳುತ್ತ ಸರಿಯಾದ ಸಮಂಜಸವಾದ ಉತ್ತರ ಕೊಡಲಿಲ್ಲ. ಹೀಗೆ ಪ್ರತಿಯೊಂದು ಜೋಳದಗರಿಯ ಮೇಲೂ ಇಂತಹ ಔಷಧಿಗಳನ್ನು ಚಲ್ಲುವುದು ಎಷ್ಟು ಅಸಮಂಜಸವಾಗಿ ಕಾಣುತ್ತೆ ಎನ್ನುವುದನ್ನು ತಾವೇ ತಿಳಿದುಕೊಳ್ಳಬಹುದು. ಈ ಚಿಟ್ಟೆ ಹುಳುಗಳ ಹಾವಳಿ ಸುಮಾರು ಮೂರು ನಾಲ್ಕು ಸಾವಿರದಷ್ಟು ಹುಳುಗಳು ಬಂದು, ಹಾವೇರಿ,

(ಶ್ರೀ ಸಿದ್ದಯ್ಯ ಕಾಶಿಮಠ)

ಶಿರಹಟ್ಟಿ ಈ ಊರುಗಳಲ್ಲಿ ಜೋಳದ ಬೆಳೆ ನಾಶಮಾಡಿ ಹಾಳು ಮಾಡುತ್ತಿವೆ. ಅದಕ್ಕಾಗಿ ಈ ಚಿಟ್ಟೆ ಹುಳಗಳ ಹಾವಳಿ ತಪ್ಪಿಸಲು ಸರಿಯಾದ ಔಷಧಿಗಳನ್ನು ಕಂಡುಹಿಡಿಯಬೇಕೆಂದು ಸಲಹೆ ಮಾಡು ತ್ತೇನೆ. ಹೋದವರ್ಷ ಕೂಡ ಇದೇ ವಿಚಾರ ನಾನು ವ್ಯವಸಾಯದ ಅಧಿಕಾರಿಗಳಲ್ಲಿ ಹೇಳುವಾಗ ಅವರು ಹೆಲಿಕಾಪ್ಟರಿನಲ್ಲಿ ತಂದು ಇದಕ್ಕೆ ನಾಶಮಾಡುವ ಪೌಡರುಗಳನ್ನು ಈ ಹಳ್ಳಿಯ ಜಮೀನು ಗಳಲ್ಲಿ ಹಾಕಿ ಹುಳುಗಳನ್ನು ನಾಶಮಾಡುತ್ತೇವೆಂದು ಹೇಳಿದರು. ಇಲ್ಲಿಯವರೆಗೆ ಹೆಲಿಕಾಪ್ಟರೂ ಇಲ್ಲ ಬೇರೆಯಾವ ರೀತಿಯಿಂದಲೂ ತಡೆಗಟ್ಟಲಿಲ್ಲ. ಈ ರೀತಿ ಮೇಲಿಂದ ಮೇಲೆ ರೋಗಕ್ಕೆ ತುತ್ತಾ ಗುತ್ತಿರುವ ಈ ಬೆಳೆಗಳಿಗೆ ಸರಿಯಾದ ಚಿಕಿತ್ಸೆ ಮಾಡಲು ಪ್ರಯತ್ನಿಸಬೇಕು. ಸರಿಯಾದ ಮೆಡಿಸಿನ್ ಕಂಡುಹಿಡಿಯಬೇಕು. ಹತ್ತು ವರ್ಷಗಳ ಹಿಂದೆ ತಯಾರಿಸಿದ ಮೆಡಿಸನ್ನು ಇಂದು ಉಪಯೋಗಿಸಿದರೆ ಅದರಿಂದ ಒಳ್ಳೆಯದಾಗುವುದಿಲ್ಲ ಎಂದು ಈ ಸಮಯದಲ್ಲಿ ಹೇಳುತ್ತೇನೆ.

ಹಾವೇರಿ ಭಾಗದಲ್ಲಿ ವರದಾ ನದಿಯ ನೆರೆಯ ಹಾವಳಿ ಹೆಚ್ಚಾಗುತ್ತಿದೆ. ಈ ನದಿಯ ನೀರು ಬಂದು ಹತ್ತಿರವಿದ್ದ ಜಮೀನನ್ನೆಲ್ಲಾ ಕೊರೆದು ಎಷ್ಟೋ ಜನರ ಮನೆಗಳನ್ನು ಹಾಳುಮಾಡಿದೆ. ಇದರಿಂದ ಅಲ್ಲಿನ ರೈತರು ಉಳಿಯುವ ಸ್ಥಿತಿಯಿಲ್ಲ. ಇದರ ಬಗ್ಗೆ ಸೌಕರ್ಯಗಳನ್ನು ಕೊಟ್ಟಿಲ್ಲ. ಇಲ್ಲಿದ್ದ ಮಣ್ಣಿನ ಮನೆಗಳೂ ನೀರಿನ ಪಾಲಾಗಿವೆ. ಇಲ್ಲಿಯ ಜನರ ಪರಿಸ್ಥಿತಿ ಬಹಳ ವಿಷಾದವಾಗಿದೆ. ನೆರೆಯ ಹಾವಳಿಯಿಂದ ಕಷ್ಟಪಡುತ್ತಿರುವ ಜನಕ್ಕೆ ಬೇರೆ ಕಡೆ ಜಮೀನನ್ನು ಕೊಟ್ಟು ಸಹಾಯ ಮಾಡಬೇಕು. ಕೆಲವು ಭಾಗದಲ್ಲಿ ಜಿಂಕುಶೀಟುಗಳನ್ನೇನೋ ಕೊಡುತ್ತಿದ್ದಾರೆ. ಇಲ್ಲಿ ಕೆಲವು ಕಡೆ ಮಣ್ಣಿನ ಹೆಂಚಿನ ಮನೆಗಳನ್ನು ಕೊಟ್ಟಿದ್ದರು. ಅವು ಕೂಡ ನೆರೆ ಹಾವಳಿಯಿಂದ ಪೂರ್ಣವಾಗಿ ನಾಶವಾಗಿವೆ. ಸರಕಾರ ಈಗಲಾದರೂ ಸ್ವಲ್ಪ ಗಮನಕೊಟ್ಟು ಮನೆಗಳಿಲ್ಲದ ಈ ಜನಕ್ಕಾಗಿ ಸ್ವಲ್ಪ ಜಿಂಕುಶೀಟುಗಳು ಮತ್ತು ಮರದ ಸಾಮಾನುಗಳನ್ನು ಕೊಟ್ಟು ಸಹಾಯ ಮಾಡಬೇಕಾದುದು ಅಗತ್ಯ. ನಮ್ಮ ಭಾಗದ ಹಾವೇರಿ, ಕಿತ್ತೂರು, ಚನ್ನೂರು, ಈ ಊರುಗಳಲ್ಲಿ ಈ ನೆರೆ ಹಾವಳಿ ಹೆಚ್ಚಾಗಿದೆ. ಇಲ್ಲಿದ್ದ ಮನೆಗಳೆಲ್ಲ ನೆಲಸಮವಾಗಿವೆ. ಇಲ್ಲಿರುವ ಜನರು ಅವರ ಸಂಸಾರದವರಿ ಗಾಗಲೀ ದನಕರುಗಳನ್ನು ಕಟ್ಟಲಿಕ್ಕಾಗಲೀ ಸರಿಯಾದ ವ್ಯವಸ್ಥೆ ಇಲ್ಲದೆ ಕಷ್ಟಕ್ಕೆ ಸಿಕ್ಕಿದ್ದಾರೆ. ಇಂತಹ ಜನಕ್ಕೆ ಆದಷ್ಟು ತೀವ್ರವಾಗಿ ಸಹಾಯ ಮಾಡದೇ ಇದ್ದರೆ ತುಂಬಾ ತೊಂದರೆಯಾಗುತ್ತದೆ. ಮನೆ ಇಲ್ಲದವರಿಗೆ ಕೆಲವು ಭಾಗಗಳಲ್ಲಿ ಮುನ್ನೂರು, ನಾನೂರು ರೂಪಾಯಿಗಳ ಸಹಾಯವನ್ನು ಕೊಡು ವಂತೆ ಇಲ್ಲಿ ಮನೆ ಕಳೆದುಕೊಂಡ ಜನಕ್ಕೂ ಕೊಟ್ಟರೆ ಇವರೂ ಸ್ವಲ್ಪ ಉಳಿಯಲಿಕ್ಕೆ ಸಾಧ್ಯವಾಗು ತ್ತದೆ. ಸಿಮೆಂಟು, ಕಬ್ಬಿಣವಂತೂ ಈ ಭಾಗದ ರೈತರಿಗೆ ಸಿಗುತ್ತಿಲ್ಲ. ಧಾರವಾಡ ಜಿಲ್ಲೆಯಲ್ಲಿ ಕಳೆದ ಮೂರು ತಿಂಗಳಿಂದಲೂ ಯಾವ ರೀತಿಯಾದ ಸಿಮೆಂಟು, ಜಿಂಕುಶೀಟಾಗಲಿ, ತಗಡಾಗಲೀ, ಕಬ್ಬಿಣವಾಗಲೀ ದೊರಕುತ್ತಿಲ್ಲ. ಮುಖ್ಯವಾಗಿ ಈ ಭಾಗಕ್ಕೆ ಕೆಲವು ಜಿಂಕುಶೀಟುಗಳನ್ನು, ಚಕ್ಕಡಿ, ಹಲಗೆಗಳನ್ನು ಕಳುಹಿಸಬೇಕು. ಆದರೆ ಕೆಲವು ವೇಳೆ ಚಕ್ಕಡಿ ಹಲಗೆಗಳು unsize ಆಗಿಬರುತ್ತವೆ. ಇದನ್ನೆಲ್ಲಾ ಸರಿಪಡಿಸಿ ನಮ್ಮ ಭಾಗದ ಹಳ್ಳಿಗಳಿಗೆ ಈ ಸಾಮಾನುಗಳನ್ನು ತೀವ್ರವಾಗಿ ಕಳುಹಿಸಿ ಸಹಾಯ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ನೀರಾವರಿ ಬಾವಿಗಳ ಬಗ್ಗೆ ಹೇಳಬೇಕಾದರೆ, ಇದು ಒಂದು ಚಲೋ ಆದ ಯೋಜನೆ. ಸರ್ಕಾರ ದವರು ಇದನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆಗಳ ಮೂಲಕ ಕಾರ್ಯಗತ ಮಾಡಬೇಕೆಂದು ಮಾಡಿದ್ದಾರೆ. ಮೊನ್ನೆ ಶಿಗ್ಗಾವಿ ತಾಲ್ಲೂಕಾದಲ್ಲಿ ಅಲ್ಲಿ ಜನರೇ ಮುಂದೆ ಬಂದು ಅಲ್ಲಿರುವ ಎನ್.ಇ.ಎಸ್. ಅಧಿಕಾರಿಗಳೂ ತಹಸೀಲ್ದಾರರು ಬಿ.ಡಿ.ಓ. ಹೀಗೆ ಅಸಿಸ್ಟೆಂಟು ಕಮಿಷನರು ಎಲ್ಲರೂ ಕೂಡಿಕೊಂಡು ಏಳು ತಿಂಗಳು ಅವಧಿಯಲ್ಲಿ ಸುಮಾರು 300 ಬಾವಿಗಳನ್ನು ತೆಗೆಯಬೇಕೆಂದು ಪ್ರಯತ್ನ ಮಾಡಿದ್ದರು. ಅದಕ್ಕೆ ಏಳೇಳು ದಿವಸಗಳಲ್ಲೇ ಮಂಜೂರಾತಿಯೂ ಸಿಕ್ಕಿ ಅಲ್ಲಿಯ ಜನರಿಗೆ ಬಾವಿ ತೆಗೆಯಲು ಸಹಾಯ ಮಾಡುತ್ತಿದ್ದಾರೆ. ಇದೇ ರೀತಿ ಪ್ರತಿಯೊಂದು ತಾಲ್ಲೂಕಾದಲ್ಲಿ ಮಾಡಿ ದರೆ ಬಹಳ ಉತ್ತಮವಾಗಿರುತ್ತದೆ. ನನ್ನ ತಾಲ್ಲೂಕಾದಲ್ಲೂ ಈಗ್ಗೆ ಏಳು ತಿಂಗಳಿನಿಂದಲೂ ಸುಮಾರು 140 ಬಾವಿಗಳನ್ನು ತೆಗೆಸಬೇಕೆಂದು ಪ್ರಯತ್ನ ನಡೆಸಿದ್ದೇವೆ. ಇದಕ್ಕೆ ಪ್ರತಿಯೊಬ್ಬರೂ ಆಸಕ್ತಿವಹಿಸಿ ಕೆಲಸ ಮಾಡಿದರೆ ದೇಶದಲ್ಲಿ ಹೆಚ್ಚಿನ ಬೆಳೆಬಂದು ಆಹಾರವು ಉತ್ಪತ್ತಿಯಾಗುತ್ತದೆ. ಸಹಕಾರ ಭಾವನೆಯಿಂದ ಎಲ್ಲರೂ ಒಟ್ಟಿಗೆ ಕೆಲಸ ಮಾಡುತ್ತ ಹೋದರೆ ಈ ದೇಶದ ವ್ಯವಸಾಯವೂ ಅಭಿವೃದ್ಧಿಯಾಗುತ್ತದೆ.

ಅನಿಮಲ್ ಹಸ್‌ಬೆಂಡ್ರಿ ವಿಚಾರ. ನಾನು ಈ ಮಾಹೆ 13ನೇ ತಾರೀಖು ನಮ್ಮ ಮಾನ್ಯ ಸ್ಪೀಕರ್‌ರವರ ಗಮನಕ್ಕೆ ಇದರ ವಿಚಾರದ ಬಗ್ಗೆ ಹೇಳಿದಾಗ ಬಡ್ಜೆಟ್ಟಿನಲ್ಲಿ ನಾನು ಮಾತನಾಡು ವಾಗ ಇದರ ಬಗ್ಗೆ ಹೇಳಬಹುದು ಎಂದು ಅಪ್ಪಣೆ ಕೊಟ್ಟರು.

ಹೆಸರುಘಟ್ಟ ಫಾರಂನಲ್ಲಿ Indo-American Aid Programme ಪ್ರಕಾರ ಇಲ್ಲಿಗೆ ಒಂದು ನೂರು ಜರ್ಸಿ ದನಗಳನ್ನು ತಂದರು. ಇದರ ಪೈಕಿ ಕೆಲವು ದನಗಳಿಗೆ ರಿಂಡರ್‌ಪೆಸ್ಟ್ ಎನ್ನುವ ರೋಗ ತಗುಲಿ ಇದು ಇತರ ದನಗಳಿಗೂ ಹರಡಿ ಈಗಾಗಲೇ ಏಳೆಂಟು ದನಗಳು ಸತ್ತು ಹೋದವು. ಇದೇ ರೀತಿ ಇತರ 50-60 ದನಗಳಿಗೆ ಪಕ್ಕೆಯಲ್ಲಿ ಈ ರೋಗ ತಗುಲಿ ಸಾಯುವುದರಲ್ಲಿವೆ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಳ್ಳುತ್ತಾರೆಂದು ನಾನು ಕೇಳಬೇಕೆಂದಿದ್ದಾಗ ಅವಕಾಶ ಸಿಗಲಿಲ್ಲ. ಹಿಂದೆ 1944ನೇ ಇಸವಿಯಲ್ಲಿ ಈ ತರಹ ರೋಗ ಬಂದು ಎಷ್ಟೋ ದನಕರುಗಳು ಹಾಳಾದ ಸಂಗತಿ ತಮಗೆಲ್ಲರಿಗೂ ಗೊತ್ತೇ ಇದೆ. ಆಗ ಎಷ್ಟು ಜನರಿಗೆ ಇದರಿಂದ ಕಾಳಜಿಯಾಗಿತ್ತು ಎನ್ನುವುದೂ ತಿಳಿದಿದ್ದರಿಂದ, ನಾನು ಪರಿಸ್ಥಿತಿ ವಿಷಮಿಸಬಾರದೆಂದು 13ನೇ ತಾರೀಖಿನ ದಿನವೇ ಇಲ್ಲಿ ಹೇಳಲು ಅವಕಾಶವಾಗದೆ ನಿಧಾನವಾಯಿತು. ನಾನು ಈಚೆಗೆ 5-6 ದಿನಗಳಲ್ಲಿ ಈ ದನಗಳನ್ನು ನೋಡಬೇಕೆಂದು ಹೋಗಿದ್ದೆ. ಅಲ್ಲಿಂದ ನೋಡಿಕೊಂಡು ಬಂದು ಇದರ ಬಗ್ಗೆ ತಕ್ಕ ಕ್ರಮತೆಗೆದು ಕೊಳ್ಳಬೇಕೆಂದು ಡೈರೆಕ್ಟರಿಗೆ ಫೋನು ಮಾಡಿದರೆ ಅವರು ಟೂರು ಹೋಗಿದ್ದಾರೆಂದು ತಿಳಿಯಿತು. 14ನೇ ತಾರೀಖು ಪುನಃ ಫೋನು ಮಾಡಿದರೂ ಡೈರೆಕ್ಟರು ಇನ್ನೂ ಟೂರಿನಿಂದ ಬಂದಿಲ್ಲ ಎಂದು ತಿಳಿಯಿತು. Rinderpest Disease ನ್ನು ತಡೆಗಟ್ಟಲು ಸರಿಯಾದ ರೀಸರ್ಚು ಫಾರಂ ಕೂಡ ಇಲ್ಲ. ಇವೊತ್ತಿನ ದಿನ ಮುಖ್ಯವಾಗಿ ಜವಾಬುದಾರಿ ಹೊತ್ತ ಅಧಿಕಾರಿಗಳೂ ಸರಿಯಾಗಿ ಕೆಲಸ ಮಾಡದೇ ಇದ್ದರೆ ಎಷ್ಟು ಸಮಂಜಸವಾಗಿರುತ್ತದೆ, ತಾವೇ ಯೋಚನೆ ಮಾಡಬೇಕೆಂದು ಇಲ್ಲಿ ನಾನು ಹೇಳಬೇಕಾಗಿದೆ.

ಸರ್ಕಾರದ ದುಡ್ಡು ಹೋದರೆ ಹೋಗಲಿ. ಆದರೆ ಹಳ್ಳಿಗಳಲ್ಲಿ ಜನರು ಗಾಬರಿಯಾಗಿದ್ದಾರೆ. ಈ ರೋಗ ಅಕ್ಕಪಕ್ಕದ ಹಳ್ಳಿಗಳಲ್ಲಿ ಹಬ್ಬಿ ಎಲ್ಲಿ ತೊಂದರೆಯಾಗುತ್ತದೋ ಎಂಬ ಭಯ ಬಂದಿದೆ. ಡೈರೆಕ್ಟರ್ ಅವರು 13 ನೇ ತಾರೀಖಿನ ಹಿಂದು ಪೇಪರಿನಲ್ಲಿ ಒಂದು ಸ್ಟೇಟ್‌ಮೆಂಟು ಕೊಟ್ಟು ರಿಂಡರ್ ಪೆಸ್ಟ್ ಡಿಸೀಜ್ ಅದುದು ಸತ್ಯ ಎಂದು ಹೇಳಿದ್ದಾರೆ.

> "It was stated that vaccine from the Indian Veterinary Research Institute, Bareilly, was mild in character."

ಇನ್‌ಸ್ಟಿಟ್ಯೂಟ್ ಮೇಲೆ ತಪ್ಪು ಹಾಕಿದ್ದಾರೆ. ಅದನ್ನು ತರುವಾಗ್ಗೆ ಇಲ್ಲಿ ಮುಂಜಾಗ್ರತೆ ವಹಿಸಬೇಕಾಗಿತ್ತು. ಔಷಧಿ ಸರಿಯಾಗಿಲ್ಲ ಎಂದು ಹೇಳುವುದು ಸರಿಯಿಲ್ಲ. ಇಲ್ಲಿ ಅದನ್ನು ಪರೀಕ್ಷಿಸಲು ಲೈವ್‌ಸ್ಟಾಕ್ ಎಕ್ಸ್‌ಪರ್ಟು ಇರಲಿಲ್ಲವೆ ? ಈಗಾಗಲೇ ಹತ್ತು ಜರ್ಸಿ ದನಗಳು ಸತ್ತು ಹೋಗಿವೆ. ಇದಕ್ಕೆ ಯಾರು ಜವಾಬ್ದಾರರು ? ಈ ಜರ್ಸಿ ದನಗಳನ್ನು ತರುವುದಕ್ಕೆ ಎರಡು ಲಕ್ಷ ರೂಪಾಯಿ ಖರ್ಚಾಗಿದೆ. ಒಂದೊಂದು ದನಕ್ಕೆ 4,000 ರೂಪಾಯಿ ಬೆಲೆಯಾಗುತ್ತದೆ. ಅಂದರೆ 4,000 ರೂಪಾಯಿ ಹಾನಿಯಾಗಿದೆ. ಇದನ್ನು ತಡೆಗಟ್ಟಲು ಜವಾಬ್ದಾರರಾಗಿದ್ದವರು ಕ್ರಮ ಕೈಕೊಳ್ಳಲಿಲ್ಲವೆ ! ರೋಗ ತಡೆಗಟ್ಟಲು ಮುಂಜಾಗ್ರತೆ ವಹಿಸಬೇಕಾಗಿತ್ತು.

ಶ್ರೀ ಎಂ. ವಿ. ಕೃಷ್ಣಪ್ಪ.—ರೋಗ ಬರಲಿಲ್ಲ, ರೋಗ ಬರಬಾರದು ಎಂದು ಮುಂಜಾಗ್ರತೆ ವಹಿಸಲು ವ್ಯಾಕ್ಸಿನೇಶನ್ ಮಾಡಿತು. ಸಿಂಪ್ಟಂಮ್ಸ್ ಬರಲಿಲ್ಲ. ಸಿಂಪ್ಟಮ್ಸ್ ಬರಬೇಕಾಗಿತ್ತು ರೋಗ ಸಹ ಬರಲಿಲ್ಲ. ತರುವಾಗ್ಯೆ ಏರೋಪ್ಲೇನ್‌ನಲ್ಲಿ ಕೂಡ ಎರಡು ದನಗಳು ಸತ್ತು ಹೋದುವು.

ಶ್ರೀ ಸಿದ್ದಯ್ಯ ಕಾಶೀಮಠ.—ಇದನ್ನು ತಡೆಗಟ್ಟಲು ಮೊದಲಿನಿಂದ ಏಕೆ ಕ್ರಮ ತೆಗೆದು ಕೊಳ್ಳಲಿಲ್ಲ ? ಡೈರೆಕ್ಟರ್ ಅವರು ಎಷ್ಟು ಬೇಜವಾಬ್ದಾರಿಯಿಂದ ಟೂರ್ ಮೇಲೆ ಹೋಗಿದ್ದರು ಎಂಬುದನ್ನು ಸರ್ಕಾರ ವಿಚಾರ ಮಾಡಬೇಕು. ಪಶುಸಂಗೋಪನೆ ಇಲಾಖೆಯಲ್ಲಿ ಆಸಕ್ತಿ ವಹಿಸಿ ಮಂತ್ರಿಗಳು ಪರದೇಶಕ್ಕೆ ಹೋಗಿ ಒಳ್ಳೆ ತಳಿ ತಂದು ಇಲ್ಲಿ ಅಭಿವೃದ್ಧಿ ಮಾಡಬೇಕೆಂಬ ಹವ್ಯಾಸ ಇಟ್ಟು ಕೊಂಡಿದ್ದಾರೆ. ಆದರೆ ಅವರು ಈ ಗುರಿ ಮುಟ್ಟುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬ ಸಂಶಯ ಏರುತ್ತದೆ. ಪ್ರತಿ ಹತ್ತು ಹಳ್ಳಿಗಳಿಗೆ ಒಂದು ಪಶು ರಕ್ಷಣಾ ಕೇಂದ್ರ ತೆಗೆದರೆ ಅನುಕೂಲವಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ಶಿರಹಟ್ಟಿ ಮತ್ತು ಬೆಳ್ಳಟ್ಟಿಯಲ್ಲಿ ಎರಡು ಕೇಂದ್ರಗಳಿವೆ. ಹಿಂದ ಕ್ಕೊಮ್ಮೆ 17 ತಿಂಗಳುಗಳವರೆಗೆ ಪ್ಯೂನ್‌ಗಳಿಗೆ ಪಗಾರ ಕೊಟ್ಟಿದ್ದಿಲ್ಲ. ಈಗ 8 ತಿಂಗಳುಗಳಿಂದ ಅಲ್ಲಿಯ ಪ್ಯೂನ್‌ಗಳಿಗೆ ಪಗಾರ ಕೊಟ್ಟಿಲ್ಲ. ಇವರು 40-50 ರೂಪಾಯಿ ಸಂಬಳ ತೆಗೆದುಕೊಳ್ಳುವ ಬಡ ನೌಕರರು. ಅವರಿಗೆ ತೊಂದರೆಯಾಗಿದೆ ಆದುದರಿಂದ ತಡ ಮಾಡದೆ ಕೂಡಲೇ ಅವರಿಗೆ ಪಗಾರ ಕೊಡಿಸಬೇಕು.

ಇನ್ನು ಕೋ-ಆಪರೇಟಿವ್ ಆಕ್ಟ್ ಬಗ್ಗೆ ಒಂದು ಸಲಹೆ ಮಾಡಲು ಇಚ್ಛಿಸುತ್ತೇನೆ. 14ನೇ ರೂಲ್‌ನಲ್ಲಿ ಅರ್ಜಿ ಹಾಕುವುದಕ್ಕೆ ಒಂದು ತಿಂಗಳು ಅವಧಿ, ಸ್ಕ್ರೂಟಿನಿ ಮಾಡಲು ನಾಲ್ಕು ದಿವಸ ಅವಧಿ ಇರಬೇಕೆಂದು ಇದೆ. ಆದರೆ ಅರ್ಜಿಗಳನ್ನು withdraw ಮಾಡುವುದಕ್ಕೆ date ಇದರಲ್ಲಿಲ್ಲ. ಈ ರೂಲ್ಸ್‌ನಲ್ಲಿ withdraw ಮಾಡುವ date ಹಾಕಬೇಕು ಎಂದು ಹೇಳುತ್ತೇನೆ.

(ಶ್ರೀ ಸಿದ್ದಯ್ಯ ಕಾಶಿಮಠ)

ಇನ್ನೊಂದು ವಿಷಯ ಗ್ರಾಮ ಪಂಚಾಯಿತಿಗಳಲ್ಲಿ ಸೇವಾ ಸಹಕಾರ ಸಂಘಗಳು ಇರಬೇಕೆಂದು ಹೇಳುತ್ತಾರೆ. ಇವುಗಳಿಗೆ ನಿಬಂಧನೆ ಹಾಕಿ ರಿಜಿಸ್ಟರ್ ಮಾಡಬೇಕೆಂದು ಇರುವುದು ಯೋಗ್ಯವಾಗಿದೆ. ಈ ಸೇವಾ ಸಹಕಾರಿ ಸಂಘಗಳಲ್ಲಿ 200 ಜನ ಸದಸ್ಯರು ಮತ್ತು 5,000 ರೂಪಾಯಿ ಷೇರ್ ಬಂಡವಾಳ ಇರಬೇಕೆಂದು ಮಾಡಿ ಪ್ರತಿಯೊಂದು ಸೊಸೈಟಿಗೆ ವಹಿಸಿ ಕೊಡಬೇಕು ಅಂದರೆ ಒಳ್ಳೆಯದಾಗುತ್ತದೆ.

ಶ್ರೀ ಡಿ. ಎಂ. ಸಿದ್ದಯ್ಯ (ಬಿಳಿಗೆರೆ).—ಮಾನ್ಯ ಸಭಾಪತಿಗಳೇ, ಸಭೆಯ ಮುಂದೆ ಮಂಡಿಸಿರುವ ವ್ಯವಸಾಯ ಇಲಾಖೆ ಬೇಡಿಕೆಗಳಿಗೆ ಸಮರ್ಥನೆ ಕೊಡುತ್ತಾ ಪಶುಸಂಗೋಪನೆ, ಅರಣ್ಯ, ಗ್ರಾಮಾಭಿವೃದ್ಧಿ, ರಾಷ್ಟ್ರೀಯ ವಿಸ್ತರಣಾ ಯೋಜನೆ, ಸಹಕಾರ ಮುಂತಾದ ಬೇಡಿಕೆಗಳನ್ನು ಸಂಪೂರ್ಣವಾಗಿ ಒಪ್ಪಿ ಅವುಗಳಿಗೆ ಬೆಂಬಲ ಕೊಡುತ್ತಾ ಅತಿ ಮುಖ್ಯವಾದ ವ್ಯವಸಾಯ ಇಲಾಖೆಯ ಬಗ್ಗೆ ಮಾತನಾಡಲು ಇಚ್ಛಿಸುತ್ತೇನೆ. ನಮ್ಮ ದೇಶದಲ್ಲಿ ವ್ಯವಸಾಯ ಬಹಳ ಪ್ರಾಮುಖ್ಯವಾದುದು. ನಮ್ಮ ದೇಶದಲ್ಲಿ ಶೇಕಡ 80 ರಷ್ಟು ಜನ ಹಳ್ಳಿಗಳಲ್ಲಿ ವಾಸಿಸುತ್ತಾರೆ. ವ್ಯವಸಾಯ ಅವರ ಮುಖ್ಯ ಕಸಬು ಆಗಿದೆ. ಸಾವಿರಾರು ವರ್ಷಗಳಿಂದ ಹಳ್ಳಿಗಳಲ್ಲಿ ಇದು ಜಾರಿಗೆ ಬಂದಿದೆ. ವ್ಯವಸಾಯ ಇಲಾಖೆ ಅನೇಕ ವರ್ಷಗಳಿಂದ ಸಂಶೋಧನೆ ನಡೆಸಿದೆ. ಆಧುನಿಕ ರೀತಿಯಲ್ಲಿ ವ್ಯವಸಾಯ ಮಾಡಲು ಸಾಕಷ್ಟು ಬಿತ್ತನೆ ಬೀಜ, ವ್ಯವಸಾಯ ಸಾಮಗ್ರಿಗಳು, ಒಳ್ಳೇ ಗೊಬ್ಬರ ಒದಗಿಸುವುದಕ್ಕೆ ಪ್ರಯತ್ನ ನಡೆದಿದೆ. ಆದರೆ ವ್ಯವಸಾಯ ಇಲಾಖೆಯು ಎಷ್ಟರ ಮಟ್ಟಿಗೆ ಸಹಾಯ ಮಾಡಬೇಕೋ ಅಷ್ಟರ ಮಟ್ಟಿಗೆ ಸಹಾಯ ಮಾಡಿಲ್ಲ ಎಂದು ತಿಳಿಸತಕ್ಕಂಥಾದ್ದು ನಮ್ಮ ಕರ್ತವ್ಯವಾಗಿದೆ. ನೂರಕ್ಕೆ ಐದರಷ್ಟು ರೈತರು ಬಿತ್ತನೆ ಬೀಜವನ್ನು ಸೊಸೈಟಿಯಿಂದಾಗಲಿ, ವ್ಯವಸಾಯ ಇಲಾಖೆಯಿಂದಾಗಲಿ ಪಡೆದಿಲ್ಲ ಎಂದು ಸ್ಪಷ್ಟವಾಗಿ ತಿಳಿಸುತ್ತೇನೆ. ಸಾಧಾರಣವಾಗಿ ರೈತನಿಗೆ ಬೇಕಾಗುವಬೀಜ ಮಳೆಗಾಲ ಬರುವುದಕ್ಕೆ ಮುಂಚೆ ಸಕಾಲದಲ್ಲಿ ಒದಗಿಸಬೇಕು. ಸಕಾಲದಲ್ಲಿ ರೈತನು ಉಪಯೋಗಿಸಿದರೆ ಲಾಭ ಪಡೆಯುತ್ತಾನೆ. ಸಾಗುವಳಿ ಮಾಡಲು ಒಳ್ಳೇ ಗೊಬ್ಬರ ಸಿಕ್ಕುತ್ತಿಲ್ಲ. ಚೀಣೀ ಆಕ್ರಮಣದ ನಂತರ ಹೆಚ್ಚು ಆಹಾರ ಉತ್ಪಾದನೆ ಮಾಡಬೇಕೆಂಬ ಧೋರಣೆ ವ್ಯವಸಾಯ ಇಲಾಖೆಯಲ್ಲಿ ಬಂದಹಾಗೆ ಇದೆ. ರೈತನ ತೊಂದರೆ ನಿವಾರಣೆಮಾಡಿ ರೈತನಿಗೆ ಸಹಾಯ ಒದಗಿಸಿ ಕೊಟ್ಟು ಹೆಚ್ಚಾಗಿ ಅನುಕೂಲಮಾಡಿ ಕೊಡುವ ಕಾರ್ಯವಾಗಬೇಕು. ಒಟ್ಟಿನಲ್ಲಿ ಇಂದು ದೇಶದಲ್ಲಿ ಹೆಚ್ಚು ಆಹಾರ ಉತ್ಪಾದನೆಯಾಗಬೇಕಾಗಿದೆ. ಸಾವಿರಾರು ವರ್ಷಗಳಿಂದ ಹಳೇ ಪದ್ಧತಿಯನ್ನು ರೈತನು ಅನುಸರಿಸಿ ಕೊಂಡು ಬರುವುದರಿಂದ ಆಹಾರ ಉತ್ಪಾದನೆ ಹೆಚ್ಚಾಗುವುದಿಲ್ಲ. ಅತ್ಯಾಧುನಿಕ ಸಲಕರಣೆ ಉಪಯೋಗಿಸಿ ಒಳ್ಳೇ ಬಿತ್ತನೆ ಬೀಜ, ಗೊಬ್ಬರ ಉಪಯೋಗಿಸಿದರೆ ವ್ಯವಸಾಯ ಸ್ವಯಂಪೂರ್ಣವಾಗುವುದರಲ್ಲಿ ಸಂಶಯವಿಲ್ಲ. ವ್ಯವಸಾಯ ಇಲಾಖೆಯಲ್ಲಿಯೂ ಕೂಡ ಆಧುನಿಕ ರೀತಿಯಲ್ಲಿ ಪರಿವರ್ತನೆಯಾಗಬೇಕಾದುದು ಅಗತ್ಯ ಈ ಇಲಾಖೆಯಲ್ಲಿ ಸಂಶೋಧನೆಗಾಗಿ 60-70 ಲಕ್ಷ ರೂಪಾಯಿ ಖರ್ಚುಮಾಡಲಾಗುತ್ತಿದೆ. ನಮ್ಮ ರಾಜ್ಯದಲ್ಲಿ 27 ರಿಸರ್ಚ್ ಸೆಂಟರ್ಸ್ ಇವೆ. ಆಧುನಿಕ ರೀತಿಯಲ್ಲಿ ಸಂಶೋಧನೆ ನಡೆಸುತ್ತಿದ್ದೀರಿ. ಈ ಸಂಶೋಧನೆ ಮೂಲಕ ದೊರೆಯುವ ಅನುಭವವನ್ನು ರೈತನಿಗೆ ಪ್ರಾಕ್ಟಿಕಲ್ಲಾಗಿ ವಿವರವಾಗಿ ತಿಳಿಸಿ ಪ್ರಯೋಜನ ಹೊಂದುವಹಾಗೆ ಮಾಡಬೇಕು. ತಜ್ಞರು ಎಷ್ಟರ ಮಟ್ಟಿಗೆ ತಿಳುವಳಿಕೆ ಕೊಡುತ್ತಾರೋ ಅಷ್ಟರ ಮಟ್ಟಿಗೆ ಪ್ರಯೋಜನ ಹೊಂದುವ ರೀತಿಯಲ್ಲಿ ಮಾಡತಕ್ಕಂಥಾದ್ದು ಅಗತ್ಯವಾದ ವಿಚಾರ.

ಆದರೆ ವ್ಯವಸಾಯ ಇಲಾಖೆಯಿಂದ ಏನು ಕೆಲಸವಾಗಿದೆಯೆಂದರೆ ಕಾಂಟೂರ್ ಬಂಡಿಗೋಸ್ಕರ 10 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇದು ಒಂದು ಚೆನ್ನಾಗಿ ನಡೆದಿದೆ. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ 20 ಲಕ್ಷ ಎಕರೆ ರೇಕ್ಲಮೇಷನ್ ನಡೆದಿದೆ. ಎರಡನೆಯ ಪಂಚವಾರ್ಷಿಕ ಯೋಜನೆಯಲ್ಲಿ 40 ಲಕ್ಷ ಎಕರೆ ರೆಕ್ಲಮೇಷನ್ ನಡೆದಿದೆ. 40 ಬುಲ್ಡೋಜರುಗಳು, 40 ಟ್ರ್ಯಾಕ್ಟರುಗಳು ಇವುಗಳ ಉಪಯೋಗದಿಂದ ಲ್ಯಾಂಡ್ ರೆಕ್ಲಮೇಷನ್ ಯಶಸ್ವಿಯಾಗಿ ನಡೆದಿದೆ. ಟ್ರ್ಯಾಕ್ಟರುಗಳು ಮತ್ತು ಬುಲ್ಡೋಜರುಗಳಿಂದ ಜನತೆ ಎಷ್ಟರ ಮಟ್ಟಿನ ಪ್ರಯೋಜನವನ್ನು ಹೊಂದಬೇಕೋ ಅಷ್ಟರಮಟ್ಟಿನ ಪ್ರಯೋಜನವನ್ನು ಹೊಂದುವುದಕ್ಕೆ ಸಾಧ್ಯವಾಗಿಲ್ಲ ಮತ್ತು ಅವುಗಳು ಒಳ್ಳೆಯ ಕಂಡೀಷನ್‌ನಲ್ಲಿ ಇಲ್ಲ. ಇಲಾಖೆಯ ಮುಖಾಂತರ ಈ ಟ್ರ್ಯಾಕ್ಟರುಗಳು ಮತ್ತು ಬುಲ್ಡೋಜರ್‌ಗಳನ್ನು ಜನಗಳಿಗೆ ಒದಗಿಸುವ ವ್ಯವಸ್ಥೆಯಿಂದ ತಕ್ಕ ಮಟ್ಟಿಗೆ ಇವುಗಳ ಉಪಯೋಗ ನಡೆದರೂ ಸಹ ಇವುಗಳ ಜವಾಬ್ದಾರಿಯನ್ನು ಸಹಕಾರ ಸಂಘಗಳಿಗೆ ವಹಿಸಿದ ಪಕ್ಷದಲ್ಲಿ ಅವುಗಳಿಂದ ಹೆಚ್ಚಿನ ಕೆಲಸವಾಗುತ್ತದೆ, ಎನ್ನುವುದನ್ನು ನಾನು ಸರ್ಕಾರಕ್ಕೆ ಸಲಹೆ ಮಾಡಲಿಚ್ಛಿಸುತ್ತೇನೆ.

ಈಗ ಬಹಳ ಪ್ರಾಮುಖ್ಯವಾಗಿ ವ್ಯವಸಾಯದ ಕಾಲೇಜುಗಳು ಹೆಬ್ಬಾಳ ಮತ್ತು ಧಾರವಾಡದಲ್ಲಿ ಇವೆ. ಈ ಒಂದು ವಿದ್ಯಾಭ್ಯಾಸವನ್ನು ಮಾಡುವುದರ ಜೊತೆಗೆ ಹೆಚ್ಚಿನ ಸಂಶೋಧನೆಯನ್ನು

ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ಸಿ.ಡಿ. ಬ್ಲಾಕ್, ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಯು ಜಾರಿಗೆ ಬಂದಮೇಲೆ ಅದು ವ್ಯವಸಾಯದ ಇಲಾಖೆಗೆ ಓವರ್ ಲ್ಯಾಪ್ಡ್ ಆಗಿದೆ. ಇದರಿಂದ ಸ್ವಲ್ಪ ಜನಗಳಿಗೆ ಒಂದು ರೀತಿಯ ಕನ್ಫ್ಯೂಜನ್ ಆಗಿದೆ ಎನ್ನುವುದನ್ನು ನಾನು ಹೇಳು ವುದಕ್ಕೆ ಇಚ್ಛಿಸುತ್ತೇನೆ. ಸಿ.ಡಿ. ಬ್ಲಾಕುಗಳು ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ವ್ಯವಸಾಯದ ಒಂದು ಪ್ರ್ಯಾಕ್ಟಿಕಲ್ ವರ್ಕ್ ಮಾಡುತ್ತಾ ಇರುವುದರಿಂದ ವ್ಯವಸಾಯದ ಇಲಾಖೆಗೆ ಸಂಬಂಧಪಟ್ಟ ವಿದ್ಯಾಭ್ಯಾಸವನ್ನು ಮಾಡುವುದರ ಜೊತೆಗೆ ಹೆಚ್ಚಿನ ಸಂಶೋಧನೆಯನ್ನು ಮಾಡಿ ಫೀಲ್ಡ್ ಕೆಲಸ ಮಾಡುವುದಕ್ಕೆ ಅವಕಾಶವನ್ನು ಒದಗಿಸಿಕೊಟ್ಟು ಒಂದು ಸಾಮರಸ್ಯವನ್ನು ಉಂಟು ಮಾಡಿದರೆ ವ್ಯವಸಾಯದ ಇಲಾಖೆ ಇನ್ನೂ ಹೆಚ್ಚಿನ ಫಲಪ್ರದವಾದ ಕೆಲಸವನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆಂದು ನಾನು ಸರ್ಕಾರಕ್ಕೆ ತಿಳಿಸಲಿಚ್ಛಿಸುತ್ತೇನೆ. ವ್ಯವಸಾಯ ಇಲಾಖೆಯಲ್ಲಿ ಹೆಚ್ಚಿನ ಪಾತ್ರವನ್ನು ವಹಿಸಬೇಕು. ಹೆಚ್ಚಿನ ಉತ್ಪಾದನೆಯನ್ನು ಮಾಡಬೇಕು. ನಮ್ಮ ದೇಶದಲ್ಲಿ 100ಕ್ಕೆ 80 ಜನ ಈ ಕಸಬನ್ನು ಅವಲಂಬಿಸಿರುವುದರಿಂದ ಆ ಜನಗಳ ಜೀವನದ ಮಟ್ಟ ಉತ್ತಮವಾಗ ಬೇಕಾಗಿದೆ. ಪ್ರಜಾಪ್ರಭುತ್ವದಲ್ಲಿ ನಾಗರೀಕ ಪ್ರಜೆಗಳು ಸುಖ ಸಂತೋಷದಿಂದ ಬಾಳಬೇಕಾದರೆ ಈ ವ್ಯವಸಾಯ ಇಲಾಖೆ ಹೆಚ್ಚಿನ ಕೆಲಸವನ್ನು ಮಾಡಬೇಕು. ಈ ಇಲಾಖೆಯಲ್ಲಿ ಹೆಚ್ಚು ಹಣವನ್ನು ಖರ್ಚುಮಾಡಿದರೂ ಸಹ ಅದು ಸಾರ್ಥಕವಾಗಬೇಕು. ಯಾವ ಇಲಾಖೆ ಸಂಶೋಧನಾ ಕೆಲಸವನ್ನು ನಡೆಸುತ್ತಿದೆಯೋ ಅದು ಫೀಲ್ಡ್ ಕೆಲಸವನ್ನು ಮಾಡತಕ್ಕ ಮನುಷ್ಯನ ಅನುಕೂಲಕ್ಕೆ ಆಗುವಂತೆ ಇರ ಬೇಕು. ಸಂಶೋಧನೆಯ ಫಲ ಬಿತ್ತನೆ ಮಾಡುವ ಕೆಲಸಕ್ಕೆ ಅನುಕೂಲವಾಗಿ ಉತ್ತಮವಾಗಿ ದಿನೇ ದಿನೇ ಪ್ರಗತಿದಾಯಕವಾದ ಬೆಳೆಯನ್ನು ಬೆಳೆಯುವುದಕ್ಕೆ ವ್ಯವಸಾಯ ಇಲಾಖೆಯವರು ಅನುಕೂಲ ಮಾಡಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನು ಗೋಸಂಪತ್ತಿನ ವಿಚಾರದಲ್ಲಿ ಹೇಳುವುದಾದರೆ ಯಾವ ದೇಶದಲ್ಲೇ ಆಗಲೀ ವ್ಯವಸಾಯ ಅಭಿವೃದ್ಧಿಯಾಗಬೇಕಾದರೆ ಗೋಸಂಪತ್ತು ಚೆನ್ನಾಗಿರಬೇಕು. ಈಗ ನಮ್ಮ ದೇಶದಲ್ಲಿ ಗೋಸಂಪತ್ತು ಪರಿಪೂರ್ಣವಾಗಿದೆ ಎಂದು ನಾವು ಭಾವಿಸುವುದಕ್ಕಾಗುವುದಿಲ್ಲ. ನಮ್ಮ ದೇಶ ಸಹಸ್ರಾರು ವರ್ಷ ಗಳಿಂದ ಗೋಸಂಪತ್ತನ್ನು ಪಡೆದುಕೊಂಡು ಬಂದಿದೆ. ಗೋಸಂಪತ್ತು ಎಂದರೆ ಮುಖ್ಯವಾಗಿ ಒಳ್ಳೆಯತಳಿ ಎತ್ತುಗಳನ್ನು, ಹಸುಗಳನ್ನು, ಕುರಿ ಮೇಕೆಗಳನ್ನು ಇಟ್ಟುಕೊಂಡರೆ ವ್ಯವಸಾಯ ಗಾರನಿಗೆ ಸಹಾಯವಾಗುತ್ತದೆ. ಅವು ಒಳ್ಳೆಯ ಗೊಬ್ಬರವನ್ನು ಮತ್ತು ಹಾಲನ್ನೂ ಕೊಡುತ್ತವೆ. ಆದ್ದರಿಂದ ಗೋಸಂಪತ್ತು ಅಭಿವೃದ್ಧಿಯಾಗಬೇಕು. ಹಾಲು ಜನಗಳಿಗೆ ಮುಖ್ಯವಾದ ಆಹಾರ ವಾಗಿರುವುದರಿಂದ ಬೆಂಗಳೂರಿನಲ್ಲಿ ಕ್ಷೀರ ಸಮೃದ್ಧಿಕ್ಷೇತ್ರವನ್ನು ಸರ್ಕಾರದವರು ಚೆನ್ನಾಗಿ ನಡೆಸಿ ದ್ದಾರೆ. ಒಂದು ಲಕ್ಷ ಪ್ರಜಾಸಂಖ್ಯೆ ಇರುವ ಎಲ್ಲಾ ಕಡೆಗೂ ಮಿಲ್ಕ್ ಡೈರಿ ಸೆಂಟರುಗಳನ್ನು ಮಾಡ ಬೇಕೆಂಬ ಯೋಚನೆ ಸರ್ಕಾರದಲ್ಲಿದೆ. ಈ ಇಲಾಖೆಯನ್ನು ವಹಿಸಿಕೊಂಡಿರುವ ಮಾನ್ಯ ಮಂತ್ರಿಗಳಾದ ಶ್ರೀ ಮಾನ್ ಎಂ. ವಿ. ಕೃಷ್ಣಪ್ಪನವರು ಕೇಂದ್ರ ಸರ್ಕಾರದಲ್ಲಿ ಅನೇಕ ವರ್ಷಗಳು ವ್ಯವಸಾಯ ಇಲಾಖೆ ಮತ್ತು ಅನಿಮಲ್ ಹಸ್ಬೆಂಡರಿ ಇಲಾಖೆಗಳನ್ನು ವಹಿಸಿಕೊಂಡು ಕೆಲಸಮಾಡಿ ಅನುಭವವನ್ನು ಪಡೆದಿದ್ದಾರೆ. ಮತ್ತು ಪಾಶ್ಚಿಮಾತ್ಯ ದೇಶಕ್ಕೆ ಹೋಗಿ ಒಳ್ಳೆಯ ತಳಿಯನ್ನು ಬೆಳೆಸುವುದು ಮುಂತಾದ ಅನುಭವವನ್ನು ಪಡೆದುಕೊಂಡು ಬಂದಿದ್ದಾರೆ. ಅವರು ಬಹಳ ಉತ್ಸಾಹಶಾಲಿಗಳು. ಅವರಿಗೆ ರೈತನ ವಿಷಯದಲ್ಲಿ ತುಂಬಾ ವಿಶ್ವಾಸವಿದೆ. ಗೋಸಂಪತ್ತನ್ನು ನಮ್ಮ ದೇಶಕ್ಕೆ ಅನುಗುಣ ವಾಗಿ ಅಭಿವೃದ್ಧಿ ಮಾಡಬೇಕಾಗಿದ್ದರೆ ಪಾಶ್ಚಿಮಾತ್ಯ ದೇಶದ ಅನುಭವವನ್ನು ಉಪಯೋಗಿಸಿಕೊಂಡು ಅಭಿವೃದ್ಧಿಯನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ನಮ್ಮ ದೇಶದಲ್ಲಿರತಕ್ಕ ಒಟ್ಟು 516 ವೆಟರ್ನರಿ ಆಸ್ಪತ್ರೆಗಳ ಪೈಕಿ 144 ಆಸ್ಪತ್ರೆಗಳಲ್ಲಿ ಮಾತ್ರ ಶಸ್ತ್ರ ಚಿಕಿತ್ಸೆಯ ಅನುಭವವಿರತಕ್ಕ ಡಾಕ್ಟರುಗಳಿದ್ದಾರೆ. ಇನ್ನು ಉಳಿದಂಥಾ ಆಸ್ಪತ್ರೆಗಳಲ್ಲಿ ಸ್ಟಾಕ್‌ಮೆನ್‌ಗಳೇ ಆ ಕೆಲಸವನ್ನು ಮಾಡು ತ್ತಿದ್ದಾರೆ. ಶ್ರೀಮಾನ್ ಎ. ಜಿ. ರಾಮಚಂದ್ರರಾಯರ ಕಮಿಟಿ ರಿಪೋರ್ಟಿನಲ್ಲಿ ವೆಟರ್ನರಿ ಆಸ್ಪತ್ರೆ ಗಳನ್ನು ಹೆಚ್ಚಿಸಬೇಕು, ಶಸ್ತ್ರ ಚಿಕಿತ್ಸೆ ಮಾಡುವ ಸಾಮಾನುಗಳು ಮತ್ತು ಒಳ್ಳೆಯ ಅನುಭವವಿರುವ ಡಾಕ್ಟರುಗಳು ಇರಬೇಕೆಂದು ಹೇಳಿದ್ದಾರೆ. ಹೆಚ್ಚು ಜಾನುವಾರುಗಳಿಗೆ ಖಾಯಿಲೆ ಆಗುವುದರಿಂದ ಅವುಗಳನ್ನು ನೋಡಿಕೊಳ್ಳುವುದಕ್ಕೆ ವೆಟರ್ನರಿ ಆಸ್ಪತ್ರೆಗಳಿರಬೇಕು ಮತ್ತು ಅವು ಚೆನ್ನಾಗಿ ಕೆಲಸ ಮಾಡಬೇಕು.

ಇನ್ನು ಸಾಮುದಾಯಿಕ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳು. ಈ ವಿಷಯದಲ್ಲಿ ಬಹುಮುಖ್ಯವಾದದ್ದು ಏನೆಂದರೆ ಪ್ರತಿ ಹಳ್ಳಿಗೂ ಕೂಡ ಕುಡಿಯುವ ನೀರಿನ ಬಾವಿಯನ್ನು ಒದಗಿಸ ಬೇಕು. ಈ ವರ್ಷದ ಬಡ್ಜೆಟ್ ಭಾಷಣದಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳು "Drinking water is a primary necessity of life. With a view to tackle the problem on any emergency basis, a survey was undertaken of the present position which revealed that there are 5,200 villages in the State which do not have

(ಶ್ರೀ ಡಿ. ಎಂ. ಸಿದ್ದಯ್ಯ)

even a single well capable of yielding potable water." ಎಂದು ಹೇಳಿದ್ದಾರೆ ನಮ್ಮ ದೇಶದಲ್ಲಿ ಸುಮಾರು 5,200 ಹಳ್ಳಿಗಳಲ್ಲಿ ಕುಡಿಯುವ ನೀರಿನ ಒಂದು ಬಾವಿಯೂ ಇಲ್ಲ ಎಂದು. ಮಾನ್ಯ ಹಣಕಾಸಿನ ಸಚಿವರು ಒಪ್ಪಿಕೊಂಡಿದ್ದಾರೆ. ಇಂಥಾ ಪರಿಸ್ಥಿತಿ ನಮ್ಮ ದೇಶದಲ್ಲಿರುವಾಗ ಹಳ್ಳಿಗಳ ಉದ್ಧಾರಕ್ಕಾಗಿ ಕೆಲಸ ಮಾಡುವಂಥಾದ್ದು ಪ್ರಾಮುಖ್ಯ. ಹಳ್ಳಿಗಳಲ್ಲಿರತಕ್ಕ ಜನರಿಗೆ ಕುಡಿಯುವ ನೀರು ಒದಗದೇ ಇದ್ದರೆ ಉಳಿದ ಪ್ರಗತಿಯನ್ನು ಹೇಗೆ ಸಾಧಿಸಿದೆ ಎನ್ನುವಂಥಾದ್ದನ್ನು ನಾವು ಯೋಚನೆಮಾಡಬೇಕಾದ್ದೆ. ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಕೆಲಸಗಳು ಇದುವರೆಗೆ 51 ಕೆಲಸಗಳು ಪೂರ್ಣವಾಗಿವೆ. ಕುಡಿಯುವ ನೀರನ್ನು ಒದಗಿಸುವ ವಿಚಾರದಲ್ಲಿ ಕೇಂದ್ರ ಸರ್ಕಾರದವರ ನೆರವು ಇದೆ. ಪೈಪುಮೂಲಕ ಜನಗಳಿಗೆ ನೀರನ್ನು ಒದಗಿಸತಕ್ಕದ್ದು ಮತ್ತು ಹಳ್ಳಿಗಳಲ್ಲಿ ಚರಂಡಿ ವ್ಯವಸ್ಥೆ ಮಾಡತಕ್ಕದ್ದು ಇವೆಲ್ಲವೂ ದುರವಸ್ಥೆಯ ಸ್ಥಿತಿಯಲ್ಲಿವೆ. ನಾವು ಸ್ವರಾಜ್ಯವನ್ನು ಸಂಪಾದನೆ ಮಾಡಿ 15 ವರ್ಷಗಳಾದುವು. ನಾವು ಪ್ರಜಾಪ್ರಭುತ್ವದ ಸರ್ಕಾರವನ್ನು ನಡೆಸಿಕೊಂಡು ಬಂದಿದ್ದೇವೆ. ಮುಖ್ಯವಾಗಿ ಹಳ್ಳಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಚರಂಡಿ ವ್ಯವಸ್ಥೆ, ಸ್ಕೂಲು, ಪಂಚಾಯಿತಿ ಹಾಲು, ನಾಲ್ಕೈದು ಹಳ್ಳಿಗಳನ್ನು ಸೇರಿಸಿ 15 ಸಾವಿರ ಪ್ರಜಾಸಂಖ್ಯೆ ಇರುವ ಜಾಗಕ್ಕೆ ಒಂದು ಆಸ್ಪತ್ರೆ ಇವುಗಳನ್ನು ಅತ್ಯವಶ್ಯಕವಾಗಿ ಮಾಡಲೇಬೇಕು. ಇವುಗಳನ್ನು ಮಾಡದೇ ಹೋದರೆ ಹಳ್ಳಿಗಳ ಪುನರುದ್ಧಾರವನ್ನು ಸಾಧಿಸುವುದು ಸಾಧ್ಯವಿಲ್ಲ. ಪ್ರಜಾಪ್ರಭುತ್ವಕ್ಕಾಗಿ ಕಾಂಗ್ರೆಸ್ ಮಹಾಸಂಸ್ಥೆ ದುಡಿದು ಸ್ವಾತಂತ್ರ್ಯವನ್ನು ಸಂಪಾದನೆಮಾಡಿತು. ಯಾವ ಒಂದು ಸಮತಾವಾದ ಸಮಾಜವನ್ನು ಸ್ಥಾಪನೆಮಾಡಿ ದೇಶದಲ್ಲಿ ಸುಖಸಂಪತ್ತನ್ನು ರಚನೆ ಮಾಡುತ್ತೇವೆಂದು ಕಾಂಗ್ರೆಸ್ ಸಂಸ್ಥೆಯವರು ಪಣತೊಟ್ಟಿದ್ದರೋ ಅದು ಸಾರ್ಥಕವಾಗಬೇಕಾದರೆ ಸರ್ಕಾರದವರ ದೃಷ್ಟಿ ಹಳ್ಳಿಗಳಕಡೆ ಹರಿಯಬೇಕು. ನಮ್ಮ ಸರ್ಕಾರದವರು ಹಳ್ಳಿಗಾಡಿನಲ್ಲಿರತಕ್ಕ ಜನಗಳಿಗೆ ಪ್ರಜಾಪ್ರಭುತ್ವ ಸರ್ಕಾರದ ಸುಖವನ್ನು ಅನುಭವಿಸುವುದಕ್ಕೆ ಅರ್ಹರಾಗುವಂತೆ ಮಾಡಬೇಕು. ಹಳ್ಳಿಗಾಡಿನಲ್ಲಿರತಕ್ಕ ಜನಗಳಿಗೆ ಸುಖಸೌಲಭ್ಯಗಳನ್ನು ಒದಗಿಸಿ ಅವರ ಜೀವನಮಟ್ಟ ಉತ್ತಮವಾಗುವಂತೆ ನಮ್ಮ ಸರ್ಕಾರದವರು ಮಾಡಬೇಕು. ಸಾಮುದಾಯಕ ಯೋಜನೆಗಳು, ರಾಷ್ಟ್ರೀಯ ವಿಸ್ತರಣಾ ಯೋಜನೆಗಳು 1963ನೇ ಇಸವಿಯಲ್ಲಿ ದೇಶಾದ್ಯಂತ ಜಾರಿಗೆ ಬರುತ್ತವೆ.

ಸಾಮುದಾಯಕ ಯೋಜನೆಗಳು ನಿಜವಾಗಿಯೂ ಕೂಡ ಹಳ್ಳಿಯ ಜನಗಳ ಜೀವನವನ್ನು ಮಾರ್ಪಡಿಸಿ, ಯೋಜನೆಗಳ ಹೆಗ್ಗುರಿ ಮತ್ತು ಆದರ್ಶಗಳು ಸಾಧನೆಯಾಗುವಂತೆ ಕೆಲಸ ಮಾಡಬೇಕು. ಸಿ. ಡಿ. ಆಫೀಸರುಗಳೇ ಆಗಲಿ, ಗ್ರಾಮ ಸೇವಕರುಗಳೇ ಆಗಲಿ, ಜನಗಳ ಜೊತೆ ಬೆರತು ಅವರ ಆಶೋತ್ತರಗಳನ್ನು ಅರ್ಥ ಮಾಡಿಕೊಂಡು, ಅವರ ವಿಶ್ವಾಸವನ್ನುಗಳಿಸಿ ಅವರಿಂದ ಈ ಒಂದು ಸಾಮುದಾಯಕ ಯೋಜನೆಗೆ ನೆರವು ಪಡೆದು ಈ ಮಹತ್ಕಾರ್ಯದಲ್ಲಿ ತೊಡಗುವುದಕ್ಕೆ ಅಶಕ್ತರಾಗಿದ್ದಾರೆಂದು ಹೇಳಲು ಇಚ್ಛೆಪಡುತ್ತೇನೆ. ನಿನ್ನೆ ದಿವಸ ನಮ್ಮ ಚಾಮರಾಜನಗರ ಎನ್.ಇ.ಎಸ್. ಬ್ಲಾಕನ್ನು ನಮ್ಮ ಮೈಸೂರಿನ ಡೆಪ್ಯುಟಿ ಕಮಿಷನರು ಇನ್ಸ್‌ಪೆಕ್ಟ್ ಮಾಡಿ ಎರಡನೇ ಬ್ಲಾಕಿನಲ್ಲಿ ಏನೂ ಕೆಲಸವಾಗಿಲ್ಲ, ಸುಮ್ಮನೆ ಜೀಪುಗಳು ಓಡಾಡುತ್ತಿವೆ ಎಂದು ಪೇಪರಿಗೆ ಒಂದು ವರದಿ ಕೊಟ್ಟಿದ್ದಾರೆ. ಒಂದನೇ ಬ್ಲಾಕಿನಲ್ಲಿ ಸುಮಾರಾಗಿ ಕೆಲಸವಾಗಿದೆ; ಆದರೆ ಈ ಎರಡನೇದರಲ್ಲಿ ಜೀಪುಗಳ ಓಡಾಟವನ್ನು ನೋಡಿ ಅವು ಎಲ್ಲಿಗೆ ಹೋಗುತ್ತವೆ, ಏಕೆ ಹೋಗುತ್ತವೆ ಎಂದು ಪ್ರಶ್ನಿಸಿ ಜನಗಳು ಆಶ್ಚರ್ಯ ಪಡುತ್ತಾರೆ. ಡೆಪ್ಯುಟಿ ಕಮಿಷನರೆ ಪತ್ರಿಕಾ ಪ್ರತಿನಿಧಿಗಳಿಗೆ ಈ ರೀತಿ ಹೇಳಬೇಕಾದರೆ, ಈ ಸಿ. ಡಿ. ಮತ್ತು ಸಾಮುದಾಯಕ ಯೋಜನೆಗಳು ಎಷ್ಟರ ಮಟ್ಟಿಗೆ ಕೆಲಸ ಮಾಡುತ್ತಿವೆಯೆಂದು ನಾವು ಊಹಿಸಿಕೊಳ್ಳಬಹುದು. ಸರ್ಕಾರದವರು ಪುನರ್ವಿಮರ್ಶೆ ಮಾಡಿ ಎಲ್ಲೆಲ್ಲಿ ಏನು ದೋಷವಿದೆಯೋ ಅದನ್ನು ಸರಿಪಡಿಸಬೇಕು. ನಮ್ಮ ಕೇಂದ್ರ ಸರ್ಕಾರದ ಮಂತ್ರಿಗಳಾದ ಶ್ರೀ ಡೇ ಅವರು ಹಗಲು ಸಂಜೆ ಈ ಸಾಮುದಾಯಕ ಯೋಜನೆಗಳ ವಿಷಯದಲ್ಲಿ ಎಷ್ಟರ ಮಟ್ಟಿಗೆ ಉತ್ಸಾಹಶಾಲಿಗಳಾಗಿದ್ದಾರೆಂದರೆ, ಹಿಂದುಸ್ಥಾನದಲ್ಲಿ ಕೇವಲ ಅತ್ಯಲ್ಪ ಕಾಲದಲ್ಲಿ ಕ್ರಾಂತಿಕಾರಕವಾದ ಒಂದು ರೀತಿಯಲ್ಲಿ ಬದಲಾವಣೆ ಮಾಡಿ, ನಮ್ಮ ದೇಶದ ಜನಗಳೆಲ್ಲರೂ ಕೂಡ ಸುಖಿಗಳಾಗಬೇಕು ಎಂದು ಆಸೆಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ. ಈ ಸಾಮುದಾಯಕ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಗಳಿಗೆ ಕೇಂದ್ರ ಸರ್ಕಾರದವರು ಬೇಕಾದಷ್ಟು ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಸಿದ್ಧರಿದ್ದಾರೆ. ನಮ್ಮ ಸರ್ಕಾರದವರು ಕೂಡ ರಾಜ್ಯದ ಎಲ್ಲಾ ಕಡೆಯಲ್ಲಿಯೂ ಸಾಮುದಾಯಕ ಯೋಜನೆಗಳನ್ನು ಜನಗಳಿಗೆ ಪ್ರಯೋಜನವಾಗಲಿ ಎಂದು ಜಾರಿಗೆ ತಂದಿದ್ದಾರೆ. ಈ ಹಣ ಕೊಟ್ಟದ್ದು ಸಾರ್ಥಕವಾಗುತ್ತಿದೆಯೇ, ಹಳ್ಳಿಗಾಡಿನ ಜನಗಳಿಗೆ ಈ ಸಾಮುದಾಯಕ ಯೋಜನೆ ಹಾಗೂ ಈ ಒಂದು ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ ಎಷ್ಟರ ಮಟ್ಟಿಗೆ ಪ್ರತಿಫಲ ದೊರಕುತ್ತಿದೆ. ಎಷ್ಟರ

ಮಟ್ಟಿಗೆ ದೊರಕಬೇಕೋ ಅಷ್ಟು ದೊರಕುತ್ತಿದೆಯೋ ಅನ್ನತಕ್ಕಂಥಾದ್ದನ್ನು ಸರ್ಕಾರದವರು ಆಮೂಲಾಗ್ರವಾಗಿ ವಿಮರ್ಶೆ ಮಾಡಿ, ಇವುಗಳು ಹಳ್ಳಿಗಾಡಿನವರಿಗೆ ಅನುಕೂಲವಾಗುವ ರೀತಿಯಲ್ಲಿ ವಿನಿಯೋಗವಾಗಿ ಕೊಟ್ಟ ಹಣ ಸಾರ್ಥಕವಾಗಿದೆಯೋ ಎನ್ನುವುದನ್ನು ನೋಡಬೇಕೆಂದು ಸೂಚನೆ ಕೊಡುತ್ತೇನೆ.

2-00 P.M.

ನಾಲ್ಕನೆಯದಾಗಿ ಈ ಸಹಕಾರ ಸಂಘದ ವಿಷಯದಲ್ಲಿ ಒಂದು ಮಾತು ಹೇಳದಿದ್ದ ಪಕ್ಷದಲ್ಲಿ ಕರ್ತವ್ಯಲೋಪವಾಗುತ್ತದೆ. ಈ ಸಹಕಾರ ಸಂಘಗಳು ಇನ್ನೂ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡಬೇಕು. ಪ್ರತಿಯೊಂದು ಪಂಚಾಯಿತಿಗೂ ಒಂದು ಕನ್‌ಸ್ಯೂಮರ್ ಸೊಸೈಟಿ ಅವಶ್ಯಕವಾಗಿ ಬೇಕು. ಇದನ್ನು ಅನೇಕ ಕಡೆಗಳಲ್ಲಿ ಕೊಡದಿರುವುದರಿಂದ ರೈತರು ಹಾಳಾಗುತ್ತಿದ್ದಾರೆ. ನಮ್ಮ ದೇಶ ಉದ್ಧಾರವಾಗಬೇಕಾದರೆ ಸಹಕಾರ ತತ್ವದಲ್ಲಿ ಅನೇಕ ಕಾರ್ಯಗಳು ಜನರ ಹಿತದೃಷ್ಟಿಯಿಂದ ನಡೆಯಬೇಕು. ಸಹಕಾರ ತತ್ವ ಎಷ್ಟರ ಮಟ್ಟಿಗೆ ಬೆಳೆದರೆ ಅಷ್ಟರ ಮಟ್ಟಿಗೆ ಹಳ್ಳಿ ಜೀವನ ಅಭಿವೃದ್ಧಿಯಾಗುವುದಕ್ಕೆ ಅನುಕೂಲವಾಗುತ್ತದೆ.

ಕೊನೆಯದಾಗಿ, ಮಾನ್ಯ ಅಧ್ಯಕ್ಷರ ಅಪ್ಪಣೆ ಪಡೆದು, ಅರಣ್ಯದ ವಿಷಯ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಶ್ರೀಮಾನ್ ರಾಚಯ್ಯನವರು ಈ ಇಲಾಖೆಯ ಮಂತ್ರಿಯಾದ ಮೇಲೆ ಈ ಇಲಾಖೆ ಚುರುಕಾಗಿ ಕೆಲಸ ಮಾಡುತ್ತಿದೆ. ಅನೇಕ ಕೆಲಸ ಕಾರ್ಯಗಳನ್ನು ಸಾಧಿಸಿದ್ದಾರೆ. ಗಂಧದ ಮರ ಸಾಗಾಣಿಕೆಯಾಗುತ್ತಿದ್ದುದನ್ನು ಪತ್ತೆ ಮಾಡಿ ಸರ್ಕಾರಕ್ಕೆ ಬೇಕಾದಷ್ಟು ಹಣ ಉಳಿಸಿಕೊಟ್ಟಿದ್ದಾರೆ. ನಿನ್ನೆ ತಾನೆ ಶಿವಮೊಗ್ಗದಿಂದ ಗಂಧದ ಮರ ಕದ್ದು ರವಾನೆಯಾಗುತ್ತಿದ್ದುದನ್ನು ಪತ್ತೆ ಮಾಡಿದ್ದಾರೆಂದು ಪೇಪರಿನಲ್ಲಿ ವರದಿಯಾಗಿದೆ. ಇಷ್ಟೇ ಅಲ್ಲ. ಸೌದೆಗೋಸ್ಕರ ಫಾರೆಸ್ಟ್ ಕಡಿದು, ಫಾರೆಸ್ಟ್ ಹಾಳಾಗಿರುವುದನ್ನು, ಹೊಸ ಸಸಿಗಳನ್ನು ನೆಡಿಸಿ, ಅಂದರೆ ಅಫಾರೆಸ್ಟೇಷನ್ ಮೂಲಕ, ಅಭಿವೃದ್ಧಿ ಪಡಿಸಬೇಕು. ಗಂಧದ ಮರವನ್ನು ಎಷ್ಟರ ಮಟ್ಟಿಗೆ ಕದ್ದು ಹೊರಗಡೆ ಕಳುಹಿಸಿ, ನಮ್ಮ ರಾಜ್ಯದ ಅರಣ್ಯ ಸಂಪತ್ತು ಹೇಗೆ ದುರುಪಯೋಗವಾಗುತ್ತಿದೆ ಎನ್ನುವುದನ್ನು ಎ. ಜಿ. ರಾಮಚಂದ್ರರಾವ್ ಕಮಿಟಿಯವರು ಚೆನ್ನಾಗಿ ವರದಿ ಮಾಡಿದ್ದು 23 ಕೋಟಿ ರೂಪಾಯಿಯಷ್ಟು ಗಂಧದ ಮರ ಹೊರಗಡೆ ಸಾಗಾಣಿಕೆಯಾಗುತ್ತಿದೆ. ನಮ್ಮ ದೇಶಕ್ಕೆ ಎಷ್ಟು ಗಂಧದಮರ ಸಿಗಬೇಕೋ ಅಷ್ಟು ಸಿಗದೆ, 50 ಪರ್ಸೆಂಟಿನಷ್ಟು ಕದ್ದು ಹೊರಗಡೆ ಹೋಗಿ ದುರುಪಯೋಗವಾಗುತ್ತಿದೆ. ಇದಕ್ಕೆ ದೊಡ್ಡ ವ್ಯವಸ್ಥಿತವಾದ ಕಳ್ಳರ ಗುಂಪಿದೆ; ಅದನ್ನು ಹಿಡಿಯಬೇಕಾದರೆ ಸರ್ಕಾರದವರು ಹೆಚ್ಚು ಸಾಮರ್ಥ್ಯತೆ ವಹಿಸಬೇಕು. ಕೇವಲ isolated stray cases ಹಿಡಿದರೆ ಸಾರ್ಥಕವಾಗುವುದಿಲ್ಲ. ಪತ್ತೆ ಹಚ್ಚುವ ಕಾರ್ಯವನ್ನು ಸುವ್ಯವಸ್ಥಿತ ರೀತಿಯಲ್ಲಿ ಏರ್ಪಾಡು ಮಾಡಬೇಕು. ಅದನ್ನು ತಮ್ಮ ವರದಿಯಲ್ಲಿ ಎ. ಜಿ. ಆರ್. ಕಮಿಟಿಯವರು ಸ್ಪಷ್ಟ ಪಡಿಸಿದ್ದಾರೆ. ಅವರು ಹೇಳಿರುವುದನ್ನು ಒಂದೆರಡು ಮಾತುಗಳೊಳಗೆ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅವರು ಹೇಳಿರುವುದು ಈ ರೀತಿ ಇದೆ :

> "Even a head-load of it fetches Rs. 400 to Rs. 500. On the official estimate the quantity of sandalwood oil produced by privately-run stills outside the State is now about 50 per cent of the quantity produced in the State Sandal Wood Oil Factory. But as the quantity of sandal wood found outside the State is inconsiderable, it is obvious that private distillers are using for the most part of wood that is smuggled out of State. Not only the State's Sandal Wood Oil Factories are handicapped for lack of wood but they have to face competition from private distillers who use wood smuggled from the State. This is adding insult to injury. Sandal wood smuggling has indeed become a racket with perhaps a back ground of powerfull vested interests. If the State revenue is to be safeguarded, effective action to check and prevent large-scale smuggling of sandal wood and teak also should be taken. Isolated attempts at catching smugglers hardly touches the fringe of the problem."

(ಶ್ರೀ ಡಿ. ಎಂ. ಸಿದ್ದಪ್ಪಯ್ಯ)

ಹೀಗೆ 20-23 ಕೋಟಿ ರೂಪಾಯಿನಷ್ಟು ಗಂಧದಮರ ಹೊರಗಡೆಗೆ ಕದ್ದು ಸಾಗಾಣಿಕೆಯಾಗಿ, ನಮ್ಮ ರಾಜ್ಯದ ಅರಣ್ಯದ ಉತ್ಪಾದನೆಗೆ ಒಂದು ದೊಡ್ಡ ಕಾಂಪಿಟಿಷನ್ ನಡೆಸುತ್ತಿದ್ದಾರೆ. ಅನೇಕ vested interests ಈ ದುಷ್ಟ ಚಟುವಟಿಕೆ ಹಿಂದುಗಡೆ ನಿಂತು ಕೆಲಸ ಮಾಡುತ್ತಾ ಇವೆ. ಅದರ ದೆಸೆಯಿಂದ, ಸಾರ್ಥಕವಾಗತಕ್ಕ ರೀತಿಯಲ್ಲಿ ಬಂದೋಬಸ್ತ್ ಮಾಡಬೇಕಾಗಿದೆ. ನಮ್ಮ ಸರ್ಕಾರದವರು ಮದ್ರಾಸ್ ಮತ್ತು ಕೇರಳ ಸರ್ಕಾರಗಳ ಜೊತೆಗೆ ಸಹಕರಿಸಿಕೊಂಡು ಖದೀಮರಾದ ಈ ಕಳ್ಳರುಗಳನ್ನು ಹಿಡಿದು, ಕೋಟ್ಯಾಂತರ ರೂಪಾಯಿ ಸೂರೆ ಹೋಗುತ್ತಿರುವ ಅರಣ್ಯ ಸಂಪತ್ತನ್ನು ಉಳಿಸಿ, ನಮ್ಮ ರಾಜ್ಯವನ್ನು ಹೆಚ್ಚು ಸಮೃದ್ಧಿ ಮಾಡಬೇಕು.

ಕೊನೆಯದಾಗಿ ಇಲಾಖೆ ಇಲಾಖೆಗಳು ಒಂದಕ್ಕೊಂದಕ್ಕೆ ಹಾಸು ಹೊಕ್ಕಾಗಿ, ಹೊಂದಿಕೊಂಡು, ರೈತ ಜನಾಂಗಕ್ಕೆ, ಹಳ್ಳಿಗಾಡಿನ ಜನಾಂಗಕ್ಕೆ ನೆರವಾಗಿ, ಅವರ ಅಭ್ಯುದಯಕ್ಕೆ, ಏಳಿಗೆಗೆ ಅತ್ಯಗತ್ಯವಾದ ಕೆಲಸ ಕಾರ್ಯಗಳನ್ನು ಮಾಡಿಕೊಡಬೇಕೆಂದು ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ. ಜನ ಜೀವನ ಸುಗಮವಾಗಲಿ ಎಂಬ ಧ್ಯೇಯದಿಂದ ಸರ್ಕಾರ ದುಡಿಯಲಿ ಎಂದು ಹೇಳಿ, ಈ ಬೇಡಿಕೆಯನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ.

[MR. CHAIRMAN (SMT. BASAVARAJESWARI) in the Chair].

† ಶ್ರೀ ವೀರಭದ್ರಪ್ಪ ಈರಪ್ಪ (ಎಲ್‌ಬುರ್ಗ).—ಸಭಾಪತಿಗಳೆ, ನಾನು ಈ ಸಭೆಯಮುಂದೆ ಮಾನ್ಯ ಮಂತ್ರಿಯವರು ಮಂಡಿಸಿದ ಬೇಡಿಕೆಗಳ ಬಗ್ಗೆ ನಡೆದ ಚರ್ಚೆಯಲ್ಲಿ, ನಾನೂ ಕೂಡ ಕೆಲವು ಮಾತುಗಳನ್ನು ಮಾತನಾಡಬೇಕೆಂದಿದ್ದೇನೆ.

ಮಹಾಸ್ವಾಮಿ, ನಾನು ರಾಯಚೂರು ಜಿಲ್ಲೆಯಿಂದ ಬಂದಿದ್ದರಿಂದ ಅಲ್ಲಿಯ ಪರಿಸ್ಥಿತಿಗಳನ್ನಷ್ಟೇ ಈ ಸಭೆಯ ಮುಂದೆ ಇಡುತ್ತೇನೆ. ನಮ್ಮ ರಾಯಚೂರು ಜಿಲ್ಲೆ ಹೆಚ್ಚು ಬೆಳೆಯುವಂಥ ಪ್ರದೇಶವಾಗಿದ್ದು, ಅಲ್ಲಿ ಹತ್ತಿ, ಜೋಳ, ಗೋಧಿ, ನವಣೆ, ಕಬ್ಬು, ಭತ್ತ, ಮೊದಲಾದ ಬೆಳೆಗಳಿವೆ. ಆದರೆ ಸರ್ಕಾರದಿಂದ ಅವುಗಳಿಗೆ ಸರಿಯಾದ ಅನುಕೂಲತೆಗಳನ್ನು ಒದಗಿಸಿಕೊಡದಿರುವುದರಿಂದ, ರೈತರಿಗೆ ಎಷ್ಟು ಹೆಚ್ಚಿನ ಬೆಳೆಯನ್ನು ಬೆಳೆಯಲು ಸಾಧ್ಯವೋ ಅಷ್ಟನ್ನು ಬೆಳೆಯಲು ಸಾಧ್ಯವಾಗದಂತಾಗಿದೆ. ಈ ದಿವಸ ಅಲ್ಲಿ ನೆಲ್ಲು ಬೆಳೆಯುವ ರೈತರಿಗೆ ಹೆಚ್ಚಿನ ಸಹಾಯ ಬೇಕಾಗಿದೆ, ರೈತರಿಗೆ ಬೀಜ, ಗೊಬ್ಬರ ಮತ್ತು ಒಕ್ಕಲುತನದ ಉಪಕರಣಗಳನ್ನು ಸರಿಯಾಗಿ ಒದಗಿಸದೆ ಇರುವುದರಿಂದ ಅವರು ಸಾಕಷ್ಟು ಹೆಚ್ಚು ಬೆಳೆ ಬೆಳೆಯಲು ಅನಾನುಕೂಲತೆ ಉಂಟಾಗಿದೆ. ದಯಮಾಡಿ ಸರ್ಕಾರದವರು ರೈತರಿಗೆ ಬೇಕಾಗುವ ಬೀಜ, ಗೊಬ್ಬರ ಮತ್ತು ಒಕ್ಕಲುತನದ ಉಪಕರಣಗಳನ್ನು ಸರಿಯಾಗಿ ಒದಗಿಸುವಂತೆ ನೋಡಿಕೊಳ್ಳಬೇಕೆಂದು ಅವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ.

ಮಹಾಸ್ವಾಮಿ, ಇನ್ನೊಂದು ಮಹತ್ತರವಾದ ವಿಷಯ ನಮ್ಮಲ್ಲಿ ಹೆಚ್ಚಾಗಿ ಹತ್ತಿ ಬೆಳೆ ಬೆಳೆಯುತ್ತದೆ. ಕೇಂದ್ರ ಸರ್ಕಾರದವರು 1923ನೇ ಇಸವಿಯಲ್ಲಿ Cotton Control Act ಅಂತ ಹೇಳಿ ಮಾಡಿ, ಅದನ್ನು ಸರ್ವೆ ಮಾಡಿದರು. ಸರ್ವೆ ಮಾಡಿದ ಕಾಲಕ್ಕೆ ನಮ್ಮ ರಾಯಚೂರು ಜಿಲ್ಲೆಯ ಕೊಪ್ಪಳ್, ಯಲ್‌ಬುರ್ಗ ಮತ್ತು ಕುಷ್ಟಗಿ ಈ ಮೂರು ತಾಲ್ಲೂಕುಗಳು ಹೆಚ್ಚು ಹತ್ತಿ ಬೆಳೆಯುವ ಪ್ರದೇಶಗಳು ಎಂದು ಪರಿಗಣಿಸಿ, ಈ ಪ್ರದೇಶದಲ್ಲಿ ಬೆಳೆದ ಹತ್ತಿಯನ್ನು ಗದಗ್ ಮಾರ್ಕೆಟಿನಲ್ಲಿ ಮಾರಾಟ ಮಾಡುವುದಕ್ಕೆ ಯಾವ ತರಹದ ಅಭ್ಯಂತರವೂ ಇಲ್ಲ ಎಂದು ಮಾರಾಟ ಮಾಡಲು ಲೈಸೆನ್ಸ್ ಕೊಡುವುದಕ್ಕೆ ಪ್ರಾರಂಭ ಮಾಡಿದರು. ಹೆಚ್ಚು ಗಂಟು ಹತ್ತಿ ಅಲ್ಲಿ ಬೆಳೆಯುತ್ತದೆ. ಸಾಧಾರಣವಾಗಿ ಈ ಪದ್ಧತಿ ಸುಮಾರು ಹತ್ತು ವರ್ಷಗಳಿಂದ ಅಲ್ಲಿ ಬಳಕೆಯಲ್ಲಿದ್ದು ಗದಗ್‌ನಲ್ಲಿ ಮಾರಾಟ ಮಾಡಿ ರೈತರು ಲಾಭ ಹೊಂದುತ್ತಿದ್ದರು. ಇತ್ತೀಚೆಗೆ ಯಾವುದೋ ಒಂದು ಕಾರಣದಿಂದ—ಒಕ್ಕಲುತನದ ಅಧಿಕಾರಿಗಳ ತಪ್ಪಿನಿಂದಲೋ, ಕಳ್ಳ ವ್ಯಾಪಾರಸ್ಥರ ಒಂದು ತಪ್ಪಿನ ಪರಿಣಾಮದಿಂದಲೋ, ಈ ಮಾಲು ಗದಗ್ ಮಾರ್ಕೆಟ್ಟಿಗೆ ಹೋಗಬಾರದು ಎಂದು ಒಂದು ಪ್ರತಿಬಂಧಕ ಮಾಡಿದ್ದಾರೆ. ಇದರಿಂದ ನಮ್ಮ ಮೂರು ತಾಲ್ಲೂಕಿನ ರೈತರಿಗೆ ಸಾಧರಣವಾಗಿ ಪ್ರತಿ ವರ್ಷ 10 ಲಕ್ಷ ರೂಪಾಯಿನಷ್ಟು ಹಾನಿಯಾಗುತ್ತಿದೆ. ಆದರೆ ಇದರಿಂದ ಕೆಳ ಮಟ್ಟದ ಸರ್ಕಾರಿ ನೌಕರುದಾರರಿಗೆ ಕಳ್ಳ ವ್ಯಾಪಾರ ಮಾಡತಕ್ಕವರಿಗೆ ಮಾತ್ರ ಲಾಭ ಮಾಡಿಕೊಡುತ್ತಿದ್ದಾರೆ. ಕೇಂದ್ರ ಸರ್ಕಾರದವರಲ್ಲಿ ಈ ಬಗ್ಗೆ ಮನವಿ ಮಾಡಿಕೊಂಡೆವು. ಅವರು ಈ ವಿಷಯ ರಾಜ್ಯ ಸರ್ಕಾರಕ್ಕೆ ವಿಶೇಷವಾಗಿ ಸಂಬಂಧಿಸಿದ್ದು, ಕೇಂದ್ರ ಯಾವ ತರಹ ಪ್ರತಿಬಂಧಕವನ್ನು ಹಾಕುವುದಿಲ್ಲ, ಸರ್ವೆ ಮಾಡಿದ ರಾಜ್ಯ ಸರ್ಕಾರಕ್ಕೆ ತಿಳಿಸಿ ಎಂದು ಹೇಳಿದರು.

ಈಗ ಸರ್ಕಾರಕ್ಕೆ ಸುಮಾರು ಐದಾರು ವರ್ಷಗಳಿಂದ ರೈತರು ಅನೇಕ ರೀತಿಯಿಂದ ಮನವಿ ಮಾಡಿಕೊಂಡಿದ್ದಾರೆ. ಅಂದ ಮೇಲೆ ಇನ್ನೂ ಈಗ ಪರಿಶೀಲನೆ ಮಾಡುತ್ತೇವೆ, ವಿಚಾರ ಮಾಡುತ್ತೇವೆಂಬುದಾಗಿ ಹೇಳಿಕೊಂಡು ದಿವಸಗಳನ್ನು ಕಳೆಯುವುದರಲ್ಲಿದ್ದಾರೆ. ಸಾಧಾರಣವಾಗಿ 6 ತಿಂಗಳುಗಳ ಹಿಂದೆಯೇ ಸರ್ಕಾರದಿಂದ ಅವುಗಳ ಬಗ್ಗೆ ಇತ್ತೀಚೆಗೆ ಒಂದು ರೀತಿ ರೂಲ್ಸ್ ಮಾಡಿದ್ದೇವೆಂಬುದಾಗಿ ಒಂದು ಪತ್ರ ಬಂದಿದೆ. ಈಗ ಮಾನ್‌ಸೂನ್ ಬಂದಿರುವುದರಿಂದ ರೈತರು ಹತ್ತಿ ಬೆಳೆಯನ್ನು ತೆಗೆದುಕೊಳ್ಳಲು ಕಳ್ಳತನದಿಂದ ಹೋಗುತ್ತಾರೆ. ಇದರ ಪರಿಣಾಮ ಇತರರ ಮೇಲೆ ಆಗುವುದರಿಂದ ಈಗ ಅದನ್ನು ತೀವ್ರಗತಿಯಿಂದ ತೆಗೆಯುವುದಕ್ಕೆ ಪ್ರಯತ್ನ ಮಾಡಿದರೆ 10 ಲಕ್ಷ ರೂಪಾಯಿಗಳು ಹಾನಿಯಾಗುತ್ತದೆ. ಅದಲ್ಲದೆ ಸರ್ಕಾರದವರು ರೈತರಿಗೆ ಈ ಬೆಳೆಯನ್ನು ಉಳಿಸಿದಂತಾಗುತ್ತದೆಂದು ನಾನು ಸರ್ಕಾರಕ್ಕೆ ಪ್ರಾರ್ಥನೆ ಮಾಡುತ್ತೇನೆ.

ಇನ್ನೊಂದು ವಿಷಯ ನಾನು ಸಹಕಾರ ಸಂಘಗಳ ಬಗ್ಗೆ ಕೆಲವೊಂದು ಮಾತುಗಳನ್ನು ಹೇಳಬೇಕಾಗಿದೆ. ಸಹಕಾರ ಸಂಘಗಳಲ್ಲಿ ಏನು ಜನ ಬರುತ್ತಾರೋ ಅವರು ಕೇವಲ ಕೆಲವೊಂದು ಕ್ಷೇತ್ರದವರು ಮಾತ್ರವೆಂದು ಹೇಳಬಹುದು. ಈಗ ಇದು ಒಂದು ಧರ್ಮ ಛತ್ರ ಆಗಿಹೋಗಿದೆ. ಏಕೆಂದರೆ ಈ ಕ್ಷೇತ್ರದಲ್ಲಿ ಯಾರೋ ದುಡ್ಡು ಕೊಡಿಸುತ್ತಾರೆ, ಯಾರೋ ಕಾರುಬಾರು ಮಾಡುತ್ತಾರೆ. ಅಲ್ಲಿ ಒಬ್ಬನ ಮೇಲೊಬ್ಬ ಆಡಳಿತ ಮಾಡಲಿಕ್ಕೆ ಹೋಗುತ್ತಾರೆ. ಎಲ್ಲರೂ ಒಬ್ಬ ಮುಖ್ಯಸ್ಥನು ಹೇಳುವ ಹಾಗೆ ಕೇಳತಕ್ಕ ಒಂದು ನೀತಿ ನಿಯಮವೇ ಇಲ್ಲ. ಇದರಿಂದ ಅನೇಕ ಸಂಸ್ಥೆಗಳಲ್ಲಿ ಇವುಗಳ ಆಡಳಿತ ಕೆಟ್ಟುಹೋಗಿರುವುದರಿಂದ ಅನೇಕರು ಇದರ ಹಣವನ್ನು ಅಪಹರಣ ಮಾಡುತ್ತಿದ್ದಾರೆ. ನಮ್ಮ ಸರ್ಕಾರದವರೂ ಸಹ ಇಂಥಾದ್ದಕ್ಕೆ ಹೆಚ್ಚು ಗಮನಕೊಡದೆ ಮೇಲಿಂದ ಮೇಲೆ ಇಲ್ಲಿಯೂ ಅನಾಹುತಗಳು ಆಗುತ್ತಿವೆ. ಸರ್ಕಾರದವರು ಇದಕ್ಕಾಗಿ ಸೂಕ್ತ ಕ್ರಮಗಳನ್ನು ಈಗಲೇ ಕೈಕೊಳ್ಳಬೇಕು. ಈ ಸಂಸ್ಥೆಗಳಿಗೆ ಬರತಕ್ಕ ಜನರಲ್ಲಿ ಕೆಲವು ಮಂದಿಯನ್ನು ಸರ್ಕಾರದವರು ನಾಮಿನೇಷನ್ ಮಾಡುವಾಗ ತಮಗೆ ಬೇಕಾದವರಿಗೆ ಶಿಫಾರಸ್ಸು ಮಾಡಿ ನೇಮಕ ಮಾಡುತ್ತಾರೆ. ಇದರಿಂದ ಆಡಳಿತದಲ್ಲಿ ಹೆಚ್ಚಿನ ಲೋಪದೋಷಗಳು, ವೈಮನಸ್ಯ ಭಾವನೆಯುಂಟಾಗುತ್ತದೆ. ಸರ್ಕಾರದಿಂದ ಕೊಡತಕ್ಕ ಗ್ರಾಂಟು, ಇತ್ಯಾದಿ ದುರುಪಯೋಗವಾಗಿ ದುರಾಡಳಿತಕ್ಕೆ ಎಡೆ ಮಾಡಿಕೊಟ್ಟಂತಾಗುತ್ತದೆ. ಸಂಘದ ಹಣವನ್ನು ವಿಶೇಷವಾಗಿ ಅಪಹರಣ ಮಾಡುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ನಾಮಿನೇಷನ್ ಪದ್ಧತಿಯನ್ನು ಸಂಪೂರ್ಣವಾಗಿ ತೆಗೆಯಬೇಕು. ಪೂರ್ತಿಯಾಗಿ ಚುನಾವಣೆ ನಡೆಯಿಸುವುದಕ್ಕೆ ಏರ್ಪಾಡು ಮಾಡಬೇಕು. ಕಾರ್ಯಕಾರಿ ಮಂಡಲಿಯಲ್ಲಿ ತಮಗೆ ಸಂಬಂಧಪಟ್ಟವರನ್ನೇ ನಾಮಿನೇಷನ್ ಮಾಡದೆ ಅದಕ್ಕೆ ಸಂಬಂಧಪಟ್ಟವರನ್ನು ಯೋಗ್ಯ ಶಿಕ್ಷಕರನ್ನಾಗಿ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಪಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಮೂರನೆಯದಾಗಿ ಹಳ್ಳಿಗಳ ವಿಷಯ, ನಮ್ಮ ತಾಲ್ಲೂಕು ಆಡಳಿತ ಹಿಂದಿನ ಕಾಲದಲ್ಲಿ ಒಬ್ಬ ಜಹಗೀರುದಾರನ ಆಡಳಿತದಲ್ಲಿತ್ತು. ಆಗಲೇ ಕುಡಿಯುವ ನೀರಿನ ವ್ಯವಸ್ಥೆಯಂತು ಇಲ್ಲ. ಈಗ ತಾಲ್ಲೂಕ್ ಬೋರ್ಡ್ ರಚನೆಯಾದ ಮೇಲೆ ಅಲ್ಲೊಂದು ಇಲ್ಲೊಂದು ಬಾವಿಗಳನ್ನು ನಿರ್ಮಾಣ ಮಾಡುತ್ತಿದ್ದಾರೆ. ಈರೀತಿ ಮಾಡಿದರೆ ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 200-300 ವರ್ಷಗಳಲ್ಲಿ ನೀರಿನ ಬಾವಿಗಳು ನಿರ್ಮಾಣವಾಗಬಹುದೆಂದು ನಾನು ಭಾವಿಸುತ್ತೇನೆ. ಕಳೆದ ವರ್ಷ ತಾಲ್ಲೂಕಿನ ಜನರು ಸುಮಾರು ಐದಾರು ಮೈಲಿಗಳಿಂದ ನೀರನ್ನು ತರುತ್ತಿದ್ದರು. ಆ ವಿಷಯ ಮರಾ ಮತ್ತು ಇಲಾಖಾ ಮಂತ್ರಿಗಳಿಗೆ ಚೆನ್ನಾಗಿ ಗೊತ್ತಿದೆ. ಅನೇಕ ವೇಳೆ ಈ ಸಭೆಯಲ್ಲಿ ನಾನು ಮಾತನಾಡುವಾಗಲೂ ಈ ವಿಷಯವನ್ನು ಹೇಳಿದ್ದೇನೆ. ಆದರೆ ಈ ವಿಷಯ ಸರ್ಕಾರಕ್ಕೆ ಚೆನ್ನಾಗಿ ಮನವರಿಕೆಯಾಗಿದ್ದರೂ ಕೂಡ ಅದಕ್ಕೆ ಬೇಕಾದ ನಿವಾರಣೋಪಾಯಗಳನ್ನು ಕಂಡುಹಿಡಿದು ಆ ಕಾರ್ಯವನ್ನು ಯಶಸ್ವಿಗೊಳಿಸಲು ಪ್ರಯತ್ನ ಪಟ್ಟಿಲ್ಲವೆಂಬುದಾಗಿ ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಆದ್ದರಿಂದ ದಯಮಾಡಿ ಈಗಲಾದರೂ ಎಲ್ಲಾ ಗ್ರಾಮಾಂತರ ಪ್ರದೇಶಗಳಲ್ಲಿ ನೀರಿನ ತೊಂದರೆಯನ್ನು ನಿವಾರಿಸುವುದಕ್ಕೆ ಸರ್ಕಾರದವರು ತೀವ್ರಗತಿಯಿಂದ ಪ್ರಯತ್ನ ಮಾಡಬೇಕೆಂದು ನಾನು ಮತ್ತೊಮ್ಮೆ ಸರ್ಕಾರದವರಿಗೆ ಪ್ರಾರ್ಥನೆ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ತಾವರೆ ಫಕೀರಪ್ಪ ಸಿದ್ದಪ್ಪ (ಸಿಗ್ಗಾಂ).—ಮಾನ್ಯ ಸಭಾಪತಿಗಳೇ, ಈ ದಿನ ಒಕ್ಕಲುತನ, ಅರಣ್ಯ ಅಭಿವೃದ್ಧಿ ಕಾರ್ಯಗಳ ಬಗ್ಗೆ ಬಂದಿರತಕ್ಕ ಬೇಡಿಕೆಯನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಅದಕ್ಕೆ ಬೆಂಬಲ ಕೊಡುತ್ತಾ ಸರ್ಕಾರದ ಮುಂದೆ ನನ್ನ ಒಂದೆರಡು ಸೂಚನೆಗಳನ್ನು ಮಂಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಅನೇಕ ಮಾನ್ಯ ಸದಸ್ಯರು ತಮ್ಮ ಸೂಚನೆಗಳನ್ನು ಈ ಸಭೆಯ ಮುಂದೆ ಇಡುವಾಗ ಸರ್ಕಾರದಿಂದ ಆಗದೆ ಬಿಟ್ಟಿರತಕ್ಕ ಕೆಲಸವನ್ನು ಅಥವಾ ಅವರಲ್ಲಿ ಇದ್ದಂಥ ನ್ಯೂನತೆಗಳನ್ನು ಎತ್ತಿ ತೋರಿಸುವುದರ ಕಡೆಗೆ ತಮ್ಮ ಹೆಚ್ಚಿನ ಲಕ್ಷ್ಯವನ್ನು ಇವತ್ತು ಕೊಡುತ್ತಿದ್ದಾರೆಯೇ ಹೊರ್ತು ಮತ್ತೇನೂ ಇಲ್ಲ. ಅದರ ಜೊತೆಗೆ ಈ ಸರ್ಕಾರದಿಂದ ಆಗಿರತಕ್ಕ ಒಳ್ಳೆಯ ಕಾರ್ಯಗಳು ಏನು ಎಂಬುದನ್ನು ತಿಳಿದು ಆ ಬಗ್ಗೆ ನಮ್ಮ ವಿಶ್ವಾಸವನ್ನು ವ್ಯಕ್ತಪಡಿಸುವುದು ನಮ್ಮ ಪಾಲಿನ ಕರ್ತವ್ಯವೆಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಸರ್ಕಾರ

(ಶ್ರೀ ತಾವರೆ ಫಕೀರಪ್ಪ ಸಿದ್ದಪ್ಪ)

ನಡೆಸತಕ್ಕ ಈ ದೊಡ್ಡ ಸಿಬ್ಬಂದಿ ವರ್ಗವೇನಿದೆ ಅವರ ಮೇಲೆ ಇದರ ಹೆಚ್ಚಿನ ಹೊಣೆ ಇದೆಯೆಂಬುದನ್ನು ನಾವು ಮರೆಯಬಾರದು. ಅವರು ಮಾಡತಕ್ಕ ಒಳ್ಳೆಯ ಕೆಲಸಗಳನ್ನು ನಾವು ತೆರೆದ ಮನಸ್ಸಿನಿಂದ ನೋಡಬೇಕು. ಒಳ್ಳೆಯ ಮಾತಿಗೆ ಹೊಗಳುವಂತಹವರೂ ಇದ್ದಾರೆ, ಕೆಟ್ಟ ಮಾತಿಗೆ ತೆಗಳುವಂತಹವರೂ ಇದ್ದಾರೆ. ಅದಕ್ಕಾಗಿ ಒಳ್ಳೆಯಸ್ಥಾನ ಸಿಕ್ಕಿ ದೇಶಾಭಿವೃದ್ಧಿ ಕಾರ್ಯಗಳ ಕಡೆಗೆ ಹೆಚ್ಚಿಗೆ ಗಮನ ಕೊಟ್ಟು ಸಿಬ್ಬಂದಿ ಮನೋಭಾವವನ್ನು ಬೆಳೆಸುತ್ತಿರುವ ಮೂಲಕ ದೇಶದ ಆಡಳಿತವನ್ನು ಚೆನ್ನಾಗಿ ದಕ್ಷತೆಯಿಂದ ನಡೆಸುತ್ತಿರುವವರನ್ನು ಪ್ರೀತಿ, ವಿಶ್ವಾಸದಿಂದ ಕಾಣುವುದು ನಮ್ಮ ಪವಿತ್ರ ಕರ್ತವ್ಯವೆಂದು ನಾನು ತಿಳಿದು ಕೊಂಡಿದ್ದೇನೆ. ಇದರ ಜೊತೆಗೆ ಸರ್ಕಾರದ ಲೋಪ ದೋಷಗಳನ್ನು ಎತ್ತಿ ತೋರಿಸುವ ಕಾಲಕ್ಕೆ ಸರ್ಕಾರವೂ ಸಹ ಒಂದು ಅಂಗ ಎಂಬುದನ್ನು ನಾವು ಮರೆಯಬಾರದು. ಕೇವಲ ಸರ್ಕಾರದ ಮೇಲೆ ಟೀಕೆ ಮಾಡುವುದರಿಂದಲಾಗಲ್ಲೀ ಅಥವಾ ಅದರ ನ್ಯೂನತೆಗಳನ್ನು ಎತ್ತಿ ತೋರಿಸುವುದರಿಂದಲಾಗಲೀ ನಮ್ಮ ಪಾಲಿನ ಕರ್ತವ್ಯ ಮಾಡಿದಂತಾಗುತ್ತದೆಂದು ಯಾರೂ ತಿಳಿಯದೆ ಅದು ನಮ್ಮ ಪಾಲಿನ ಜವಾಬ್ದಾರಿಗಳಲ್ಲಿ ಒಂದು ಎಂದು ತಿಳಿಯಬೇಕು. ಹೆಚ್ಚಿನ ಹೊಣೆ ಅವರ ಹಾಗೆ ನಮ್ಮ ಪಾಲಿನಲ್ಲಿಯೂ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ ಸರ್ಕಾರ ಎನ್ನುವುದು ಒಂದು ಸರ್ಕಸ್ ಇದ್ದ ಹಾಗೆ ಆ ಒಂದು ಸರ್ಕಸ್ ನಡೆಸುವ ಹೊಣೆ ಮಂತ್ರಿ ಮಂಡಲದ ಮೇಲೆ ಬಂದಿವೆ. ಆದ್ದರಿಂದ ಸರ್ಕಾರದ ಅಧಿಕಾರಿಗಳಿಗೆ ಪೂರ್ಣ ಅಧಿಕಾರ ಕೊಡದೇ ಇದ್ದರೆ ಕಾನೂನಿಗನುಸಾರವಾಗಿ ಅವರು ಆಡಳಿತವನ್ನು ನಿರ್ವಹಿಸುವುದಕ್ಕಾಗುವುದಿಲ್ಲವೆಂಬುದನ್ನು ನಾವು ಈ ಸಂದರ್ಭದಲ್ಲಿ ತಿಳಿಯಬೇಕು. ಆ ರೀತಿ ಅಧಿಕಾರ ಕೊಡದೇ ಹೋದರೆ ಅದು ಒಂದು ನಮ್ಮ ಹೆಡ್ಡತನವೆಂದು ಭಾವಿಸಬೇಕಾಗುತ್ತದೆ. ಸರ್ಕಾರ ಎಂಬುದು ಸರ್ಕಸ್ ಪ್ರಯೋಗ ಶಾಲೆ ಇದ್ದಹಾಗೆ. ಇಲ್ಲಿ ಕಾಯಿದೆಗಳನ್ನು ಮಾಡುತ್ತಾರೆ. ಆ ಕಾಯಿದೆಗಳನ್ನು ಅಮಲಿನಲ್ಲಿ ತರುವುದಕ್ಕೆ ಅನೇಕ ಕ್ಷೇತ್ರಗಳಿವೆ. ಆದರೆ ಅವು ಅಲ್ಲಿ ಎಷ್ಟರ ಮಟ್ಟಿಗೆ ಜಯಪ್ರದವಾಗುತ್ತವೆ, ಜಯಪ್ರದವಾಗುವುದಿಲ್ಲವೆಂಬುದನ್ನು ವಿಮರ್ಷೆ ಮಾಡುವುದನ್ನು ಸರ್ಕಾರವೆಂಬ ಪ್ರಯೋಗ ಶಾಲೆಗೆ ಬಿಟ್ಟುಬಿಡಬೇಕು. ಅನೇಕ ಮಾನ್ಯ ಸದಸ್ಯರು ಈ ಲಿಬರಲೈಜ್ ವೆಲ್ ಸ್ಕೀಮುಗಳಿಗಾಗಿ ಸಾಕಷ್ಟು ಹಣ ಸಿಗುವುದಿಲ್ಲವೆಂದು ಹೇಳಿದರು. ಸಿಬ್ಬಂದಿ ವರ್ಗದವರನ್ನು ಮಾತ್ರ ತಮ್ಮ ಪ್ರೀತಿ ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರ ಇಂತಹ ಯೋಜನೆಗಳನ್ನು ಕಾರ್ಯರೂಪಕ್ಕೆ ತರಿಸಿದರೆ ಅವರಿಂದ ಅಷ್ಟಾಗಿ ಯಶಸ್ವಿ ಕೆಲಸವಾಗಲಾರದು ಎಂದು ಹೇಳಿದರು. ಅದು ಸತ್ಯಕ್ಕೆ ದೂರವಾದ ಮಾತಾಗಿದೆ ಎಂದು ನಾನು ಹೇಳಬೇಕಾಗಿದೆ. ಈ ಲಿಬರಲೈಜ್ ವೆಲ್ ಸ್ಕೀಮು ಕಾಮಗಾರಿಗಳು ಒಂದು ವಾರದಲ್ಲಿಯೇ ನಮ್ಮ ಕಡೆ ಬಿ.ಡಿ.ಓ. ಗ್ರಾಮಸೇವಕರು, ಕುಲಕರ್ಣಿಗಳ ಸಹಾಯದಿಂದ ರೈತರ ಅರ್ಜಿಗಳನ್ನೆಲ್ಲಾ ಪರಿಶೀಲಿಸಿ ಸುಮಾರು 300 ಬಾವಿಗಳನ್ನು ಮೊದಲನೆಯ ಹಂತವನ್ನು ಮುಗಿಸಿದ್ದಾರೆಂದು ನಾನು ಆನಂದದಿಂದ ಹೇಳಬೇಕಾಗಿದೆ. ಇಷ್ಟೇ ಅಲ್ಲ. ಅನೇಕ ಕಡೆಗಳಲ್ಲಿ ಈ ಬಾಬಿಗೆ ಒದಗಿಸಿದ ಹಣ ಅಪವ್ಯಯವಾಗುತ್ತಿದೆ ಎಂಬ ದೂರುಗಳು ಕೇಳಿ ಬರುತ್ತಿವೆ ಎಂದೂ ಸಹ ಕೆಲವರು ಹೇಳಿದರು. ಹೆಚ್ಚಿನ ಜವಾಬ್ದಾರಿ ಹೊತ್ತಿರತಕ್ಕ ನಾವು ಈ ಬಗ್ಗೆ ಸ್ವಲ್ಪ ಮಟ್ಟಿಗಾದರೂ ಲಕ್ಷ್ಯ ಕೊಡಬೇಕು. ನಮ್ಮಲ್ಲಿ 3 ಲಕ್ಷ ರೂಪಾಯಿಗಳ ದೊಡ್ಡ ಮೊತ್ತವನ್ನು ರೈತರಿಗೆ ಹಂಚುವಾಗ ಪ್ರತಿಯೊಬ್ಬ ರೈತನಿಗೆ 500 ರೂಪಾಯಿಗಳವರೆಗೂ ಕೊಟ್ಟು ಉಳಿದ ಹಣವನ್ನು ಬ್ಯಾಂಕಿನಲ್ಲಿ ಡಿಪಾಜಿಟ್ ಇಡಬೇಕೆಂಬ ವ್ಯವಸ್ಥೆ ಮಾಡಿದ್ದಾರೆಂದು ಹೇಳಿದರು. ನಾನು ಒಂದು ಸಾರಿ ಶನಿವಾರ ಮತ್ತು ಭಾನುವಾರ ನನ್ನ ಕ್ಷೇತ್ರಕ್ಕೆ ಹೋಗಿ ನೋಡಿದಾಗ ಈಗಾಗಲೇ ಮತ್ತೆ 63 ಬಾವಿಗಳ ಕೆಲಸ ಪ್ರಾರಂಭ ಮಾಡಿದ್ದಾರೆ. ಸುಮಾರು 3 ಪುಟ್ಟು 4 ಪುಟ್ಟು ಎರಡನೆ ಹಂತ ಕೆಲಸ ನಡೆಯಿಸಿ ಪೂರೈಸುವವರಾಗಿದ್ದಾರೆ. ಈ ರೀತಿಯಾದಂಥ ಉತ್ತಮವಾದ ಯೋಜನೆಗಳು ಇವತ್ತು ನಮ್ಮ ರಾಜ್ಯದಲ್ಲಿ ಅನೇಕ ಕಡೆಗಳಲ್ಲಿ ನಡೆಯುತ್ತಾ ಇವೆ. ಒಟ್ಟಿನಲ್ಲಿ ಸರ್ಕಾರ ಈ ಲಿಬರಲೈಜ್ ವೆಲ್ ಸ್ಕೀಮುಗಳಿಗೆ ಯಥೇಚ್ಛವಾಗಿ ಹಣವನ್ನು ಕೇಂದ್ರ ಸರ್ಕಾರದಿಂದ ಒದಗಿಸಬೇಕು. ಅದೇ ಪ್ರಕಾರ ರಾಜ್ಯ ಸರ್ಕಾರದವರೂ ಸಹ ಹೆಚ್ಚಿನ ನೆರವನ್ನು ರೈತರಿಗೆ ಉಂಟುಮಾಡಬೇಕು. ಕೆರೆ, ಹೊಳೆಗಳ ಬಗ್ಗೆ ದೊಡ್ಡ ಪ್ರಮಾಣದ ಅನುಕೂಲತೆ ಪ್ರತಿಯೊಬ್ಬ ರೈತನಿಗೆ ಐದುದಾದರೆ, ಸರ್ಕಾರಕ್ಕೆ ಅದರಿಂದ ದೊಡ್ಡ ಲಾಭವಾದೀತು ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ಇತ್ತೀಚೆಗೆ ನಮ್ಮ ದೃಷ್ಟಿ ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಿಸುವ ಕಡೆಗೆ ಹೋಗಬೇಕಾಗಿದೆ. ಅಂತಹ ಕಾಲಕ್ಕೆ ಪ್ರತಿಯೊಬ್ಬ ರೈತನ ಮನಸ್ಸು ಆ ಕಡೆಗೆ ಹರಿಯಬೇಕು. ಏಕೆಂದರೆ ರಾಜ್ಯದಲ್ಲಿ ಬರಗಾಲಕ್ಕೆ ತುತ್ತಾಗುವ ಪ್ರದೇಶಗಳು ಬಹಳವಾಗಿರುವುದರಿಂದ, ಆ ಪ್ರದೇಶಗಳಲ್ಲಿ ಅಭಿವೃದ್ಧಿ ಕೆಲಸ ಕಾರ್ಯಗಳೇನೆಂಬುದನ್ನು ಎಲ್ಲರೂ ಗಮನಿಸಬೇಕಾಗಿದೆ. ಬಿಜಾಪುರ, ಧಾರವಾಡ, ಗುಲ್ಬರ್ಗ, ರಾಯಚೂರು ಜಿಲ್ಲೆಯ ಕೆಲವು ಗ್ರಾಮಗಳಲ್ಲಿ ದೊಡ್ಡ ದೊಡ್ಡ, ಬಾವಿಗಳನ್ನು ತೆಗೆಯು

ವುದಕ್ಕಾಗಲಿಲ್ಲ. ಆದಕಾರಣ ವ್ಯವಸಾಯ ಇಲಾಖೆಯವರು ಈ ಬಗ್ಗೆ ಹೆಚ್ಚಿನ ಲಕ್ಷ್ಯ ಕೊಡಬೇಕಾಗಿದೆ. ಇಲ್ಲದೆ ಹೋದರೆ ಜನಗಳು ಕೆಳ ಮಟ್ಟಕ್ಕೆ ಇಳಿದು ಅವರ ಆರ್ಥಿಕ ಪರಿಸ್ಥಿತಿ ಕೆಟ್ಟೀತು ಎಂದು ನಾನು ಹೇಳುತ್ತೇನೆ.

ಸಾಧಾರಣವಾಗಿ ಪೂರ್ವಕಾಲದಿಂದ ಒಣ ವ್ಯವಸಾಯ ಎಂದು ಮಾಡಿಕೊಂಡು ಬಂದಿದ್ದಾರೆ, ಇದನ್ನು dry cultivation ಎಂದು ಹೇಳುತ್ತಾರೆ. ಇಂಥ ವ್ಯವಸಾಯ ಒಳ್ಳೆಯದು, ದೊಡ್ಡ ಪ್ರಮಾಣದಲ್ಲಿ ಟ್ರ್ಯಾಕ್ಟರುಗಳನ್ನಿಟ್ಟು ಕೆಲವು ಕಡೆ ಮಾಡಿಸಿದರೆ ಒಳ್ಳೆಯದು. ಇದರಿಂದ, ಅಂದರೆ ಒಣ ಬೇಸಾಯದಿಂದ ಹುಳುಗಳ ಕಾಟ ಕಡಮೆಯಾಗಬಹುದು. ಬಿಸಿಲು ಕಾಲದಲ್ಲಿಯೂ ಒಳಗೆ ತಂಪು ಉಳಿದು ಬಹಳ ಬೇಗ ಉಪಯೋಗವಾಗುತ್ತದೆ. ಆದುದರಿಂದ ತಾಲ್ಲೂಕು ಮಟ್ಟದಲ್ಲಿಯೋ, ರೆವಿನ್ಯೂ ಡಿವಿಜನ್ ಮಟ್ಟದಲ್ಲಿಯೋ ಟ್ರ್ಯಾಕ್ಟರುಗಳನ್ನಿಟ್ಟು ಈ ಒಣ ಬೇಸಾಯವನ್ನು ತೀವ್ರ ಜಾರಿಗೆ ತರಬೇಕೆಂದು ವಿನಂತಿ ಮಾಡುತ್ತಿದ್ದೇನೆ.

ಈ ಸಂಬಂಧವಾಗಿ ಸರ್ಕಾರದಲ್ಲಿ ಇನ್ನೊಂದು ವಿನಂತಿ. ಈಗ ಇರುವ ಟ್ರ್ಯಾಕ್ಟರುಗಳ ಸಂಖ್ಯೆ ಬಹಳ ಕಡಮೆ. ಅನೇಕ sick ಆಗುತ್ತಿವೆ, ಕೆಲಸ ಮಾಡುತ್ತಿರುವ ಟ್ರ್ಯಾಕ್ಟರುಗಳ ಸಂಖ್ಯೆ ಬಹಳ ಕಡಮೆ. ಈ ಕಾರಣ ಸಿಬ್ಬಂದಿಯ ಮೇಲೆ ಖರ್ಚು ಮಾಡುವ ಹಣ ದುರುಪಯೋಗವಾಗುತ್ತಿದೆ. ಸರ್ಕಾರದ ಬೊಕ್ಕಸದಿಂದ ಈ ಹಣ ವ್ಯರ್ಥವಾಗಿ ಹೋಗುತ್ತಿದೆ. ಇದನ್ನು ಹೀಗೆಯೇ ನಡೆಸುವುದಾದರೆ ಇದನ್ನು ಬಂದು ಮಾಡುವುದೇ ರಾಜ್ಯಕ್ಕೆ ಒಳ್ಳೆಯದು. ಕೆಲಸ ಮಾಡುವುದಾದರೆ ಉತ್ತಮ ರೀತಿಯಿಂದ ನಡೆಸಿ ರೈತರಿಗೆ ಲಾಭ ಮಾಡಿಕೊಡಬೇಕು. ಇಲ್ಲದಿದ್ದರೆ ಬಂದು ಮಾಡಬೇಕು.

ಬರಗಾಲ ಪ್ರದೇಶದಲ್ಲಿ ಗಿಡಗಳನ್ನು ಬೆಳೆಸುವ ವಿಚಾರದಲ್ಲಿ ದೊಡ್ಡ ಪ್ರಚಾರ ಮಾಡಬೇಕಾಗಿದೆ. ಬನ್ನಿ ಗಿಡ ಎಲ್ಲ ಕಡೆಗಳಲ್ಲಿಯೂ ಪೀಕು ಬರುವುದಿಲ್ಲ, ಅಲ್ಲಿ ಪೀಕು ಬರುತ್ತದೆ, ಎರೆ ಸೀಮೆಯಲ್ಲಿ ವಿನಾ ಬೇರೆ ಕಡೆ ಹುಟ್ಟುವುದಿಲ್ಲ. ರೈತರಿಗೆ ಪ್ರೋತ್ಸಾಹ ಮಾಡಿ, ವೇತನ ಕೊಟ್ಟು ಹೊಲದಲ್ಲಿ ಬನ್ನಿ ನೆಡುವ ಕೆಲಸ ಮಾಡಿಸಿದರೆ, ಭೂಮಿಗೂ ತಂಪಾಗುತ್ತದೆ, ಅಲ್ಲದೆ ಅದರ ಕೆಳಗೆ ಹೆಚ್ಚು ಬೆಳೆಯೂ ಬರುತ್ತದೆ. ಫಾರೆಸ್ಟಿನಲ್ಲಿ ಮರಗಳನ್ನು ಬೆಳೆಸುವ ಹಾಗೆ ಹೊಲದಲ್ಲಿ ಬೆಳೆಸಬೇಕು. ನಮ್ಮಲ್ಲಿ ಫಾರೆಸ್ಟ್ ಇಲ್ಲ. ಇದರ ಕೆಳಗೆ ಉತ್ತಮ ಪೀಕ್ ಬರುವುದರಿಂದ ಇದರ ಕಡೆ ಸರ್ಕಾರ ಲಕ್ಷ್ಯ ಕೊಡಬೇಕು.

ಇನ್ನೊಂದು ಮಾತು ವ್ಯವಸಾಯ ಇಲಾಖೆಯ ವಿಚಾರವಾಗಿ ಬಹಳ ನೊಂದು ದುಃಖದಿಂದ ಹೇಳುವ ಪ್ರಸಂಗ ಬಂದಿದೆ. ಹಾವೇರಿಯ ಪೂರ್ವಭಾಗದಲ್ಲಿ 50 ಸಾವಿರ ಎಕರೆ ಕ್ಷೇತ್ರದಲ್ಲಿ ಕಳೆದ ಹದಿನೈದು ಹದಿನೆಂಟು ವರ್ಷಗಳಿಂದ ಚಿಟ್ಟೆಯ ಉಪದ್ರವವಾಗುತ್ತಿದೆ. ಆ ಕ್ಷೇತ್ರದಲ್ಲಿ ಬೆಳೆಯುವ ಜೋಳ, ನವಣೆ ಎಲ್ಲ ಬೆಳೆಯನ್ನೂ ಸಂಪೂರ್ಣವಾಗಿ ತಿನ್ನುತ್ತಿದೆ. ಆ ಪ್ರದೇಶ ಇದರಿಂದ ಪದೇ ಪದೇ ಬರಗಾಲಕ್ಕೆ, ಕ್ಷಾಮಕ್ಕೆ ತುತ್ತಾಗುತ್ತಿದೆ. ದನಗಳಿಗೆ ಮೇವು ಕೂಡ ಅಲ್ಲಿಲ್ಲ. ಮೇವಿಲ್ಲದೆ, ದನಗಳು ಸತ್ತು ಹೋಗುತ್ತಿವೆ. ವ್ಯವಸಾಯ ಇಲಾಖೆಯವರು ತೀವ್ರ ಕ್ರಮ ತೆಗೆದುಕೊಳ್ಳಬೇಕೆಂದು ಅವರ ಬೆನ್ನು ಹತ್ತಿದರೆ, ಹುಳುಗಳು ಪೀಕು ತಿಂದು ನಾಶ ಮಾಡಿದ ಮೇಲೆ ಅಲ್ಲಿಗೆ ಸಲಕರಣೆ ತರುತ್ತಾರೆ. ಇದು ಹದಿನೈದು ಇಪ್ಪತ್ತು ವರ್ಷಗಳ ಪ್ರಶ್ನೆ, ಐವತ್ತು ಸಾವಿರ ಎಕರೆಯ ಪ್ರಶ್ನೆ, ಇದನ್ನು ನೋಡಿದರೆ ವ್ಯವಸಾಯ ಇಲಾಖೆ ಏನೂ ಸಹಾಯ ಮಾಡುತ್ತಿಲ್ಲವೆನಿಸುತ್ತದೆ. ಮೀನ ಮೇಷ ನೋಡದೆ ಅವರು ತೀವ್ರ ಕಾರ್ಯ ಕೈಗೊಳ್ಳಬೇಕು. ಒಂದು ಕಡೆ ಆಹಾರ ಹೆಚ್ಚು ಉತ್ಪತ್ತಿ ಮಾಡಬೇಕೆಂದು ಹೇಳುವದು, ಇನ್ನೊಂದು ಕಡೆ ಶ್ರೇಷ್ಠವಾದ ಐವತ್ತು ಸಾವಿರ ಎಕರೆಯಲ್ಲಿ ಬೆಳೆದ ಆಹಾರ ಧಾನ್ಯ ಹದಿನೈದು ಇಪ್ಪತ್ತು ವರ್ಷದಿಂದ ನಾಶವಾದರೂ ಏನೂ ಮಾಡದೆ ಸುಮ್ಮನಿರುವುದು. ಹೀಗಾದರೆ ರೈತರು ಏನು ಮಾಡಬೇಕೆಂದು ಕಳಕಳಿಯಿಂದ ಯೋಚನೆ ಮಾಡಬೇಕು. ಇನ್ನು ಮುಂದಾದರೂ ಈ ಪರಿಸ್ಥಿತಿಯ ನಿವಾರಣೆಗೆ ತಕ್ಕ ವ್ಯವಸ್ಥೆ ಮಾಡಿ, ರೈತ ಮೊದಲು ಖರ್ಚು ಕೊಡಬೇಕೆಂದು ಹೇಳದೆ, ಸಾಲವಾಗಿಯಾದರೂ ಸಹಾಯ ಕೊಟ್ಟು ಅದಕ್ಕೆ ಬೇಕಾದ ಪೌಡರ್ ಪಡೆದು ಸ್ಪ್ರೇ ಮಾಡಿಸಿದರೆ, ರೈತರು ಹಣವನ್ನು ಕೊಡಲು ಸಿದ್ಧರಾಗಿದ್ದಾರೆ. ಸರ್ಕಾರ ಈ ಯೋಜನೆಯನ್ನು ಕೈಗೊಂಡು ರೈತರನ್ನು ಈ ಬವಣೆಯಿಂದ ಬಿಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸಹಕಾರದ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ನಮ್ಮ ಭಾಗದಲ್ಲಂತೂ ಈ ಸಹಕಾರ ಸಂಘಗಳು ಕೇವಲ ಸಾಲ ತರುವುದು ಕೊಡುವುದು ಒಂದು ಕೆಲಸವನ್ನು ಬಿಟ್ಟು ಬೇರೆ ಇನ್ಯಾವ ಕೆಲಸವನ್ನೂ ಮಾಡುತ್ತಿರುವುದು ಕಂಡುಬರುತ್ತಿಲ್ಲ. ಸಹಕಾರ ಸಂಘಗಳ ಕಾರ್ಯಕ್ಷೇತ್ರವನ್ನು ನಾವು ರಾಜ್ಯದ ಮೂಲೆಯಲ್ಲಿಯೂ ಬೆಳೆಸಬೇಕೆಂದು ಜೀವನದ ಎಲ್ಲ ಕಾರ್ಯಗಳೂ ಸಹಕಾರದ ಮೇಲೆ ನಡೆಯಬೇಕೆಂದು ಒಪ್ಪಿಕೊಂಡಿದ್ದೇವೆ. ಸಹಕಾರಿ ಕ್ಷೇತ್ರ ಕೇವಲ ಸಾಲ ತರುವುದು ಕೊಡುವುದರಷ್ಟಕ್ಕೇ ನಿಲ್ಲದೆ, ರೈತರು ಬೆಳೆಗಳಿಗೆ ಬಳಸುವ ಸಾಮಾನ್ಯ ಔಷಧಗಳು, ಉತ್ತಮ

(ಶ್ರೀ ತಾವರೆ ಫಕೀರಪ್ಪ ಸಿದ್ದಪ್ಪ)

ಬೀಜಗಳು ಮುಂತಾದುವನ್ನೊದಗಿಸಬೇಕು, ರೈತನ ಜೀವನ ಸಹಕಾರದ ಕಡೆಗೆ ಹೊರಳುವಂತೆ ಮಾಡಬೇಕಾಗಿದೆ. ಸಹಕಾರ ಸಂಘಗಳು ಕೇವಲ ಸಾಲಕ್ಕೆ ತಮ್ಮ ಸರ್ವಶಕ್ತಿಯನ್ನೂ ವಿನಿಯೋಗ ಮಾಡದೆ ವ್ಯವಸಾಯದ ಸಮಸ್ಯೆಯನ್ನು ನಿವಾರಿಸಲು ಅವಕಾಶ ಮಾಡಿಕೊಡಬೇಕು. ಇಷ್ಟು ನನಗೆ ಅವಕಾಶ ಕೊಟ್ಟದ್ದಕ್ಕಾಗಿ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸುತ್ತೇನೆ.

Sri B.R. SUNTHANKAR(Belgaum-I).—Madam,I wish to offer a few remarks on the demand for Agriculture. Agriculture is a subject of primary importance, but in spite of that this subject is not receiving the attention of the Government as it deserves. The Narghal Committee have specifically recommended that Chief Ministers of States should handle this subject, but not only this Government but most of the State Governments have not followed that recommendation. Agriculture is the basis of our rural economy, but this basis, unfortunately, is very weak and is not sound and is yet to be consolidated. In our younger days we used to read that Indian budgets were vagaries of the monsoon. Now the present-day budgets are not so much vagaries of monsoons, but our agriculture still remains a victim of the vagaries of monsoons. Our agricultural production still depends upon the seasonal conditions. If the seasonal conditions are well and good we get good harvest and the Government can boast of increase in agricultural production.

The dismal feature of the agricultural sector in our country is the failure of planning in agriculture. Two Plans have failed to increase agricultural production in our country. As for the performance of this Government in the Second Plan, it has been unfortunately a failure. Agricultural production has been declining since 1959-60. The index number has been coming down. This is the picture given in the Mysore Budget. " In 1960-61, the index number for all food crops, which was ruling at 145. 7 in 1959-60, declined to 136 .— " The picture of 1961-62 is not also encouraging. Figure for 1962-63 is not before us. As far as 1961-62 is concerned, the picture is not encouraging. In the Second Plan, it was anticipated that agricultural production of the State would increase from 33 lakh tons to 38 lakh tons. But actually, it has declined. The main defect with this Government is that they claim their achievements from their anticipations. Their anticipations are their achievements. We are given anticipations and they are claimed as achievements. The A.G.R. Committee has rightly pointed out that the figures given by the Agricultural Department, as regards agricultural production, were erroneous. That is why once my honourable friend Mr. Krishna said that we are given fictitious figures.

2-30 P.M.

As for the performance, as I said earlier, in the Second Plan, it is very unsatisfactory. There are five heads which are connected with agriculture — agriculture, land development, animal husbandry, soil conservation and development of area under irrigation projects. In the Second Five Year Plan, the outlay for all these subjects was Rs.979 lakhs.

But, what was the actual expenditure? The actual expenditure was Rs. 711 lakhs. There was a shortfall under all these heads of Rs. 268 lakhs. That means, 27 per cent of the allotted amount was not spent. so, that means, the progress to the extent of 27 per cent could not be achieved and fulfilled.

I may give some instances of how this department is working. There was a campaign known as the World Seed Campaign. The F.A.O. of the United Nations Organisation had decided to observe the year 1961 as the World Seed Campaign year. But the Government woke up to this campaign as late as April 1962. An *ad-hoc* committee for the seed campaign was appointed in April 1962. This committee never met, did not do any work and by November 1962, it was disbanded. That is how the year of seed campaign was observed in the State.

Then, about mechanical cultivation section — this is one of the most neglected sections. There are 44 tractors and 40 bull-dozers with this Government. More than half of them are out of order, and the remaining are always under repairs. Further, Madam, out of those that are repaired or in working order, some are rented to the P.W.Department, instead of giving to the cultivators.

About the soil conservation — soil conservation is also not receiving the attention it deserves. Two schemes for the old Mysore area have been sanctioned. But these are not being implemented, because the staff is not appointed. So, even in the first Two years of the third Plan, soil conservation programmes remain unimplemented.

Similarly, about lift irrigation machinery in Bijapur District — the Lift Irrigation machinery that was there in Bijapur District at the time of Re-organization was transferred to this Government. But that machinery, for years together, has been lying idle without doing any work and the staff was maintained there. Through out.

Similarly, Madam, about the consolidation of holdings. I may quote another instance of how the work is done. In Bombay Karnatak area, under the former Bombay Government, this programme of consolidation of holdings was being implemented on a priority basis. It is a centrally sponsored scheme and the Former Bombay Government was very keen about implementing this scheme. But, since the time of Re-organisation, this scheme is being neglected and it is not doing proper work.

Similarly, Madam, in the Third Five Year Plan, under the head Agriculture, in all there are 140 schemes. I want to know from the Government how many of these schemes are being implemented, what is the progress that has been achieved during the last two years and what are the results of the schemes that are undertaken, and how many schemes yet remain to be undertaken. I want to know from the Government this information.

The failure in planning agriculture is mainly due to the failure in execution. Madam, the present organisation of the Agricultural Department is unable to cope with the task which is entrusted to it. The Narghal committee has categorically opined that the crisis of agriculture in India is primarily an administrative crisis. Madam, this

(SRI B. R. SUNTHANKAR)

applies more fillingly to the department of the State. This deficiency in administration has kept down the achievements of our expenditure targets. And, expenditure incurred has failed to show proportionate benefits. The achievements are not commensurate with the expenditure that is incurred on the various schemes and programmes. Madam, toning of this agricultural department, not only toning, but re-organisation of this whole set up of agricultural department has become a necessity. Unless the set up is re-organised as to suit the planning requirements, there will be no development or improvement in the agriculture of the State.

There are a large number of vacancies of the gazetted as well as the non-gazetted posts in the Department. More than 100 gazetted posts are vacant. Similarly hundreds of non-gazetted posts are vacant for years together. Madam on account of the want of qualified and trained members and staff, a number of schemes are not being implemented and targets are not being achieved.

Speaking of my district of Belgaum, two gazetted posts have been vacant and 22 non-gazetted posts are vacant for several months. That is why a number of schemes in the district have been lagging behind. Madam, in order to acheve target of agricultural production, all-out efforts will have to be made by the Government. Madam the Hon'ble Sri V. T. Krishnamachari has recently said in one of the conferences that with proper efforts agricultural production in our country can be increased three-fold. Much was expected of the community development. The community development movement was expected to increase the production to a great extent. But unfortunately this community development movement has failed in this respect. This movement has failed to mobilise the rural community for intensive development of agriculture. So, it, is necessary, to put all out effort to increase agricultural production, extensive as well as intensive. The Maharashtra Government Madam, I may point out, has decided and laid out and drawn up programmes to increase agricultural production six monthly programmes have been drawn up and they are trying their best to increase the agricultural production for every six months. Our Government should follow the example. They should chalk out at least annual programmes. There are cultivable fallow lands to the extent of a 33 lakh acres. It is about 7per cent of the cultivable area that is in the State. All efforts should be made to bring these fallow lands under cultivation. Similarly Madam, intensive agriculture should be adopted. The area that is sown more than twice in the year is very low. There have been irrigation projects with perennial cannals which were executed 30-40 years back. Unfortunately the area that is sown more than once in the year is very less. With a little effort this area may be increased to an enormous extent. The cultivators under these projects, I am speaking about the old projects, can be induced can be persuaded to have more than one crop. Even as a step towards encouragement they may be tempted

with remissions in Land Revenue if they undertake 2 crops or 3 crops. Remission in land revenue may be given to them as a temptation, as an inducement and as encouragement. Government should take that bold step, I think.

In this respect Madam, this Government has taken a wise decision to have field channels so that the water is taken to the very fields of the cultivators. This is a very welcome step. No doubt soil conservation and dry farming are very important.

CHAIRMAN.—Two minutes more.

Sri B. R. SUNTHANKAR.— This is a very important matter Madam I will just take five minutes.

The progress that is made by this Government under soil conservation and dry farming is very limited. Madam, the importance of soil conservation and dry farming is not fully realised by the Government. I regret to say in the former Bombay Government, it has been our experience that with soil conservation and improved dry farming methods, yields can be increased to the extent of 30 to 50 per cent. Still Conservation is very great importance. With all the irrigation projects executed, the maximum area that will not be more than 25 per cent. That means 75 per cent of the land remains un-irrigated for ever. And something will have to be done for this unirrigateed area, and soil conservation and improved dry farming methods are the best methods.

Madam, in our State, in all two crore acres of land are in need of soil conservation and dry farming methods. In the first two plans Madam only 2,97,204 acres came under soil conservation at a cost of 10 crores of rupees. Under the Third Plan, it is expected that 2.70 lakhs acres may come under soil conservation and 5.40lakh acres may come under dry farming. If we look to the figures of other States, Madam, Maharashtra Govrnment where conditions are similar in this matter, they have fixed their target for the third plan as 50 lakh acres for soil conservation and 231 lakh acres for dry farming. Looking to the needs of the State, the targets that are fixed for that in the Third plan are very meagre. Government should concentrate on this soil conservation and dry farming methods. They are very necessary. Dry farming should receive the primary place in the scheme of agriculture particulary in the dry areas. Agriculturists should be convinded of the utility of dry farming methods. For that Madam, demonstration on a large scale should be held to convince the cultivator of the utility and urgency of the soil conservation and dry farming.

Similarly, improved implements should be provided to the cultivators for the dry farming. Similarly, about Japanese method of paddy cultivation.

CHAIRMAN.— The Hon'ble Member may conclude. His time is over. Others have to be accommodated.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ನಾವು ಓಟ್ ಮಾಡಬೇಕಾದ ಸುಮಾರು ಹೆಚ್ಚು ಕಡಿಮೆ 14 ಕೋಟಿ ರೂಪಾಯಿಗಳ ವಿಚಾರದಲ್ಲಿ ಮಾತ ನಾಡುತ್ತ ನಾಲ್ಕು ಸೂಚನೆ ಕೊಡಬೇಕೆಂದು ನಿಂತಿದ್ದೇನೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಈ ವ್ಯವಸಾಯದ ವಿಚಾರವಾಗಿ ಮಾತನಾಡುತ್ತ ನಮ್ಮ ದೇಶದಲ್ಲಿ ಏನೋ ಆ ದನದ ಜೊತೆಗೆ ಒಂದು ದನವಾಗಿ, ಆ ಕುರಿಯ ಜೊತೆಗೆ ಒಂದು ಕುರಿಯಾಗಿ ನಮ್ಮ ದೇಶದಲ್ಲಿ ಈ ರೈತನು ಇಂಥ ಒಂದು ಪ್ರಾಣಿಯಾಗಿದ್ದಾನೆಂಬುದನ್ನು ತಿಳಿಸುವುದಕ್ಕೆ ನನಗೆ ಬಹಳ ವ್ಯಸನವಾಗುತ್ತದೆ. ರೈತನ ಒಂದು ಪರಿಸ್ಥಿತಿ ಇನ್ನಾವ ದೇಶದಲ್ಲೂ ಇರಲಾರದೆಂದು ಭಾವಿಸುತ್ತೇನೆ. ಯಾವ ದೇಶದಲ್ಲೂ ನೋಡು "ಅನ್ನದಾತೋಸುಖೀಭವ" ಎಂತ ಈ ರೈತನಿಗೆ ಹೇಳುತ್ತಾ ಆತನ ಕಷ್ಟಸುಖಗಳನ್ನು ಪರಿಹರಿಸಲು ಆತನಿಗೆ Technical advise, subsidy ಮತ್ತು ಎಲ್ಲಾ ತರಹ ಸಹಾಯ ಇತ್ಯಾದಿ ನಾನಾ ರೂಪದಲ್ಲಿ ಅನುಕೂಲ ಮಾಡಿಕೊಡಲು ಸರ್ಕಾರ ಹಾಗೂ ಸಮಾಜ ಮುಂದೆ ಬರುತ್ತಿದ್ದರೆ ನಮ್ಮ ದೇಶದಲ್ಲಿ ಆ ರೈತರನ್ನು ನೋಡಿ ನಗುತ್ತಾರೆ, ಅಷ್ಟೇ ಅಲ್ಲ ಅವನನ್ನೊಂದು ಪ್ರಾಣಿಯಾಗಿ ಕಾಣುತ್ತಿದ್ದಾರೆ. ಈ ದಿವಸ ಅವರೊಂದು ಒಳ್ಳೆಯ ಬಟ್ಟೆ ಹಾಕಿದರೆ ಇಲ್ಲಿಯ ಜನರಿಗೆ ಕಣ್ಣು ಚುಚ್ಚುತ್ತದೆ. ರೈತ ಎಲ್ಲೂ ಮುಂದಕ್ಕೆ ಬರಬಾರದು ಆತ ಯಾವ ರೀತಿಯಲ್ಲೂ ಇನ್ನು ಮುಂದೆ ಮುಂದಕ್ಕೆ ಬಾರದೆ ಇರುವ ಹಾಗೆ ಮಾಡಲು ಪ್ರಯತ್ನಗಳು ನಡೆಯುತ್ತಿವೆ. ಆಗಿರತಕ್ಕ ರೈತನ ಪರಿಸ್ಥಿತಿಯಲ್ಲಿ ಅವನ ಒಂದೊಂದು ಅಂತಸ್ತಿನಲ್ಲೂ ವ್ಯತ್ಯಾಸವಿರುತ್ತದೆ. ಈ ದಿವಸ ರೈತಾಪಿಜನರೆಲ್ಲರೂ ಪ್ರಜ್ಞರಾಗಿ ಒಂದೇ ರೀತಿಯಲ್ಲಿರುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ಆದರೆ ಈ ದಿವಸ ಎಲ್ಲರೂ ಆ ರೈತನು ದೇಶಕ್ಕೆ ಬೆನ್ನು ಮೂಳೆಯಾಗಿದ್ದಾನೆ ಎಂದು ಬಾಯಲ್ಲಿ ಬರಿ ಮಾತುಗಳಿಂದ ಅವನನ್ನು ಹೊಗಳುತ್ತಿದ್ದಾರೇ ವಿನಾ ಅವನ ಕಷ್ಟಗಳನ್ನು ವಿಚಾರ ಮಾಡದೆಯಿದ್ದರೂ ಆ ಕಷ್ಟದಲ್ಲಿರತಕ್ಕ ರೈತನು ಇವರ ಒಂದು ಒಳ್ಳೆಯ ಪದವನ್ನು ಕೇಳಿ ಆ ಆಶಾವಾದಿಯು ತನ್ನ ಕಷ್ಟಗಳನ್ನೆಲ್ಲಾ ಮರೆತು ಅವನ ಹೊಟ್ಟೆ ಒಂದು ಸಂತೋಷದಿಂದ ಹಿಗ್ಗಿ ಬಿಡುತ್ತದೆ. ಇದಕ್ಕೆ ಕಾರಣ ಆ ರೈತನ ಎಲ್ಲ ತರಹಿಯ ಜೀವನದಲ್ಲೂ ಎಲ್ಲಿಯೂ ಒಂದು ಸಂಘಟನಾ ಶಕ್ತಿ ಇಲ್ಲ. ಈ ದಿವಸ ವ್ಯಾಪಾರಸ್ಥರಲ್ಲಿ ಒಂದು ಸಂಘಟನೆ ಇದೆ. ಹೀಗೆ ಇನ್ನು ಅನೇಕರಲ್ಲಿ ಈ ಸಂಘಟನೆ ಇರುತ್ತದೆ. ಆದರೆ ಅಂಥಾ ಒಂದು ಸಂಘಟನೆ ಈ ರೈತಾಪಿವರ್ಗದಲ್ಲಿಲ್ಲದೆ ಇವರು ಕಷ್ಟ ಪಡುತ್ತಿದ್ದಾರೆ. ಈ ದಿವಸ ದವಸಧಾನ್ಯಗಳ ಬೆಲೆಗಳೆಲ್ಲ ಇಳಿದು ಹೋಗುತ್ತಿವೆ. ಆ ರೈತನು ಕೊಳ್ಳಬೇಕಾದ ಸಾಮಾನುಗಳ ಬೆಲೆ ಏರುತ್ತಿರುವಾಗ ಆ ರೈತನು ಬೆಳೆಯತಕ್ಕ ಬೆಳೆಗೆ ಇಷ್ಟು ಜಾಸ್ತಿ ಬೆಲೆಕೊಡಬೇಕೆಂದು ಅರ್ಜಿ ಮಾಡಲು ಅವರಲ್ಲಿ ಒಂದು ಆರ್ಗನೈಜೇಷನ್ನಿಲ್ಲ. ಇಂಥಾ ಕಷ್ಟ ಪರಿಸ್ಥಿತಿಯಲ್ಲಿರುವ ಆತನನ್ನು ವಿಚಾರ ಮಾಡದೆ, ಅವನು ಬೆಳೆಯತಕ್ಕ ಬೆಳೆಗಳಿಂದ ನಾವು ಸುಖಪಡುತ್ತಾ ಇರುವವರು ಯಾವ ಪಾಪಕ್ಕೆ ಹೋಗಬೇಕಾಗುವುದೋ ತಿಳಿಯದು.

ನಮ್ಮ ಕಡೆಯ ರೈತರಿಗಿರತಕ್ಕ ಅನೇಕ ಕಷ್ಟದಲ್ಲಿ ಮುಖ್ಯವಾದುದು ನೀರಿನ ಕಷ್ಟ ಅನೇಕ ಕಡೆಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿ ನೀರಿನ ಸೌಕರ್ಯವನ್ನು ಒದಗಿಸಿದ್ದೇವೆ ಎಂದು ಇಲ್ಲಿ ಹೊಗಳಿದ್ದೂ ಹೊಗಳಿದ್ದೇ. ಆದರೆ ಇಲ್ಲಿಯ ತನಕ ಅವರಿಗೆ ಈ ನೀರಿನ ಸೌಕರ್ಯವಾಗಲೀ, ಗೊಬ್ಬರದ ಸೌಕರ್ಯವಾಗಲೀ ಉತ್ತಮ ಬೀಜಗಳ ಸೌಕರ್ಯವಾಗಲೀ ಒಂದೂ ದೊರೆಯುತ್ತಿಲ್ಲ. ಹಾಗೂ ಒಂದು ವೇಳೆ ಇವರು ಬೀಜಗಳೆನ್ನೇನಾದರೂ ಕೊಟ್ಟರೆ ಅವುಗಳನ್ನು ಇರುವೆ, ಗೆದ್ದಲು ತಿಂದು ಹಾಕಿಬಿಡುತ್ತವೆ. ಹೀಗಾಗಿ ನನ್ನ ಕ್ಷೇತ್ರದಲ್ಲಿರತಕ್ಕ ಜನರು ಕಳೆದ ಹನ್ನೆರಡು ವರ್ಷಗಳಿಂದಲೂ ಮಳೆ ಬೆಳೆಗಳಿಲ್ಲದೆ ಬಹಳ ತೊಂದರೆ ಪಡುತ್ತಿದ್ದಾರೆ. ನಮ್ಮ ರೈತರು ಹೀಗೆ ವ್ಯವಸಾಯಕ್ಕೆ ಸಾಕಷ್ಟು ನೀರು ದೊರೆಯದೆ ತೊಂದರೆ ಪಡುತ್ತಿರುವುದರಿಂದ ಈ ರಿಸರ್ಚ್ ಬಾಬಿನಲ್ಲಿ ಕೆಲಸ ಮಾಡತಕ್ಕವರು ಕಡಮೆ ನೀರಿನಿಂದ ಆಗತಕ್ಕ ಬೆಳೆಯೂ ಹಾಗಿವೆ ಎಂಬುದನ್ನು ಕಂಡು ಹಿಡಿದು, ಅಲ್ಪ ಕಾಲದಲ್ಲೇ ಬೆಳೆಕೊಡತಕ್ಕಂಥ ಬಿತ್ತನೆ ಬೀಜಗಳನ್ನು ನಮ್ಮ ಜಿಲ್ಲೆಗೆ ಒದಗಿಸಬೇಕಾಗಿದೆ. ಆದಕಾರಣ ಈ ವಿಚಾರಕ್ಕೆ ನಮ್ಮ ರಿಸರ್ಚ್ ವರ್ಕಿನವರು ಹೆಚ್ಚಿನ ನಿಗಾ ಕೊಟ್ಟು ಈ ಒಂದು ಅನುಕೂಲ ಮಾಡಿ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಇನ್ನು ಬಾವಿಗಳ ವಿಚಾರಕ್ಕೆ ಬಂದರೆ ನಮ್ಮ ಭಾಗದ ರೈತನು ಈ ಬಾವಿಗಳ ಸಾಲದಿಂದ ಏನೂ ಬದುಕುವ ಹಾಗಿಲ್ಲ. ಸಾಮಾನ್ಯವಾಗಿ ನಮ್ಮ ಭಾಗದ ರೈತನು ಈ ಬಾವಿ ನೀರಿನಿಂದ ಆತನು ವ್ಯವಸಾಯ ಮಾಡಬೇಕಾಗಿದ್ದರೆ ಒಂದೊಂದು ಬಾವಿಗೆ ಕನಿಷ್ಟಪಕ್ಷ 10-12 ಸಾವಿರ ರೂಪಾಯಿಗಳಿಲ್ಲದೆ ಬಾವಿಗಳಾಗುವುದಿಲ್ಲ. ಸರ್ಕಾರದವರು ಈ ದಿವಸ ಕೊಡತಕ್ಕ ಸಬ್‌ಸಿಡಿ ಹಣ ಆ 3 ಸಾವಿರ ರೂಪಾಯಿಗಳಲ್ಲಿ ಕೆಲವು ಕಡೆ ಅರ್ಧಭಾಗ ಕೆಲಸಕೂಡ ಆಗುವುದಿಲ್ಲ, ಮತ್ತೆ ಕೆಲವು ಕಡೆಗಳಲ್ಲಿ $\frac{1}{4}$ ಭಾಗ ಕೆಲಸ ಸಹಾ ಆಗುವುದಿಲ್ಲ. ಅಂತೂ ರೈತನಿಗೆ ಬಾವಿ ಆಗದಿದ್ದರೂ ಆ 3 ಸಾವಿರ ರೂಪಾಯಿಗಳ ಸಬ್‌ಸಿಡಿಗೆ ಆತನು ಸಾಲಗಾರನೇನೋ ಆಗುತ್ತಾನೆ. ಆ ಬಾವಿಗಳು ಈ ಹಣದಲ್ಲಿ ಪೂರ್ತಿ ಆಗುವುದಕ್ಕೆ ಅವಕಾಶವಿಲ್ಲ—ಬಾವಿಗಳಲ್ಲಿ ನೀರೂ ಇಲ್ಲ—ಇಂಥ ಅರ್ಧಮರ್ಧ ಬಾವಿಗಳಲ್ಲಿ ಅವನು ಬಿದ್ದು ಸಾಯಲೂ ಸಾಧ್ಯವಿಲ್ಲ. ಇಂಥ ಪರಿಸ್ಥಿತಿಯಲ್ಲಿ ಸರ್ಕಾರ ಏನು ಮಾಡಬೇಕೆಂದರೆ—ಆ ರೈತನಿಗೆ ಹೇಗಾದರೂ ಒಂದು ಅನುಕೂಲ ಕಲ್ಪಿಸಿ

ಕೊಡಲೇಬೇಕೆಂಬ ಇರಾದೆ ಇದ್ದರೆ, ಒಬ್ಬೊಬ್ಬ ರೈತನಿಗೂ ಕನಿಷ್ಟ 5-6 ಎಕರೆ ಜಮೀನಿಗೆ ನೀರನ್ನು ಒದಗಿಸತಕ್ಕಂಥ ಬಾವಿಗಳನ್ನು ಸರ್ಕಾರದವರೇ ತೆಗೆಸಿಕೊಡಬೇಕು. ಅನಂತರ ಆ ಖರ್ಚಾದ ಹಣವನ್ನು ರೈತನಿಂದ ವಾಟರ್ ರೇಟ್ ಮತ್ತು Contribution ಮೂಲಕವಾಗಿ 15-20 ವರ್ಷಗಳ ಕಂತಿನಲ್ಲಿ ತೀರ್ವಳಿ ಮಾಡುವಂತೆ ಒಂದು ಏನಾದರೂ ವ್ಯವಸ್ಥೆಮಾಡಿ ಸರ್ಕಾರದವರೇ ರೈತರಿಗೆ ಈ ಬಾವಿಗಳನ್ನು ತೆಗಿಸಿ ಅವುಗಳಿಗೆ ಪಂಪನ್ನು ಹಾಕಿಸಿ ಕೊಟ್ಟರೆ ವಿನಾ ಇಲ್ಲದಿದ್ದರೆ ರೈತನು ಖಂಡಿತ ಇನ್ನು ಮುಂದೆ ಏನೂ ಬೆಳೆಯಲಾರ. ಮುಂದೆ ರೈತನು ಯಾವ ಕಾಲಕ್ಕೇನು ಬೆಳೆಯುತ್ತಾನೆಂಬುದನ್ನೇ ಹೇಳುವುದಕ್ಕಾಗುವುದಿಲ್ಲ. ಈಗ ತಾನೆ ಶ್ರೀಮಾರ್ಕ ದೇವ್ ಅವರು ನನ್ನ ಹತ್ತಿರ ಬಂದು ಅವರು ಒಂದು ಒಳ್ಳೆಯ ಸಲಹೆಯನ್ನು ಸೂಚಿಸಬೇಕೆಂದು ನನಗೆ ಹೇಳಿದರು. ಆ ಸೂಚನೆ ಏನೆಂದರೆ ಕೆರೆಗಳ ಸುತ್ತಮುತ್ತಲು ಬಾವಿಗಳನ್ನು ತೆಗೆದರೆ ಅಲ್ಲಿ ವಾಟರ್ ಟೇಬಲ್ ಜಾಸ್ತಿಯಿರುತ್ತೆ. ಅವುಗಳ ಮೂಲಕ ಅಕ್ಕಪಕ್ಕದ ಜಮೀನುಗಳಿಗೆ ನೀರಿನ ಅನುಕೂಲ ಆಗುತ್ತದೆ ಎಂದು ಹೇಳಿದ್ದಾರೆ. ಸರ್ಕಾರದವರು ಈ ಒಂದು Idea ವನ್ನು ಸಹ ಉಪಯೋಗ ಮಾಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ಇರಿಗೇಷನ್ ವಿಚಾರದಲ್ಲಿ ಜಮೀನಿಗೆ ನೀರನ್ನು ಬಿಟ್ಟು-ನೀರು ಹಾಯಿಸಿ ಬೆಳೆ ತೆಗೆಯುವುದಕ್ಕೆ ಬದಲು ಸ್ಪ್ರಿಂಕ್ಲಿಂಗ್ ಮೆಥೆಡ್ಡನ್ನು ಜಾರಿಗೆ ತಂದರೆ ಬಹಳ ಅನುಕೂಲವಾಗುತ್ತದೆ. ಇದರಿಂದ ಹೆಚ್ಚು ವಿಸ್ತೀರ್ಣದ ಜಮೀನನ್ನು ಇರಿಗೇಟ್ ಮಾಡಬಹುದು. ಇದು ಬಹಳ ಉತ್ತಮವಾದ ಬೇಸಾಯ ಪದ್ಧತಿಯೆಂದು ತಜ್ಞರು ಹೇಳುತ್ತಿದ್ದಾರೆ. ಈ ವಿಚಾರದಲ್ಲಿ ಯಾರ್ಯಾರು ಮುಂದೆ ಬರುತ್ತಾರೋ ಅವರಿಗೆಲ್ಲ ಸರ್ಕಾರದವರು ಈ ಸ್ಪ್ರಿಂಕ್ಲಿಂಗ್ ಇರಿಗೇಷನ್‌ಗೆ ಅವಕಾಶ ಮಾಡಿಕೊಡಬೇಕೆಂದು ನಾನು ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಬೋರ್‌ವೆಲ್‌ಗಳ ವಿಚಾರ : ಈ ಬೋರ್‌ವೆಲ್ ಮೆಷಿನ್‌ಗಳನ್ನು ಹಾಕಿ ಬಾವಿ ಮಾಡಿಸಿ ಅದಕ್ಕೆ ಪಂಪನ್ನು ಹಾಕಿ ಒಂದು ದೊಡ್ಡ ರಿಜರ್ವಾಯರ್ ಮಾಡಿ ಅದರಿಂದ ಬೆಳೆಗೆ ಸ್ಪ್ರಿಂಕ್ಲಿಂಗ್ ಆಗಿ ನೀರು ಬೀಳುವಂತೆ ಒಂದು ವ್ಯವಸ್ಥೆ ಮಾಡಿಕೊಟ್ಟರೆ ರೈತನಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಈ ಅರೇಂಜ್‌ಮೆಂಟಿನಿಂದ ನೀರೂ ಸಹ ಚೆನ್ನಾಗಿ ಬರುತ್ತೆ. ಹೆಚ್ಚು ಭೂಮಿಯಲ್ಲಿ ಬೆಳೆ ತೆಗೆಯಬಹುದು. ಆದುದರಿಂದ ಈಗ P. W. D. ವಶದಲ್ಲಿರತಕ್ಕ ಈ ಬೋರ್‌ವೆಲ್ ಸ್ಕೀಮನ್ನು ತೆಗೆದು ಅಗ್ರಿಕಲ್‌ಚರ್ ಇಲಾಖೆಗೆ ಕೊಟ್ಟರೆ ರೈತನ ಕಷ್ಟವನ್ನು ಸ್ವಲ್ಪಮಟ್ಟಿಗಾದರೂ ನಿವಾರಣೆ ಮಾಡಿದ ಹಾಗೆ ಆಗುತ್ತದೆ. ಈ ವಿಚಾರವನ್ನು ಸರ್ಕಾರದವರು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಕಾಂಟೂರ್ ಬಂಡಿಂಗ್ ವಿಚಾರದಲ್ಲಿ ಈಗಾಗಲೇ ಅನೇಕರು ಮಾತನಾಡಿದ್ದಾರೆ. ನಾನು ಈಗಿರತಕ್ಕ ಮಂತ್ರಿಗಳಲ್ಲೂ ಮತ್ತು ಹಿಂದೆ ಇದ್ದ ಮಂತ್ರಿಗಳಲ್ಲೂ ಹಾಗೂ ಈ ಇಲಾಖೆ ಡೈರೆಕ್ಟರಲ್ಲೂ ನಮ್ಮ ತಾಲ್ಲೂಕಿಗೆ ಬರಬೇಕೆಂದೂ ಅಲ್ಲಿಯ ಸ್ಥಿತಿ ನೋಡಬೇಕೆಂದೂ ನಾನು ಕೇಳಿಕೊಂಡಿದ್ದೆನು. ಆದರೆ ಯಾರೂ ಇಲ್ಲಿಯವರೆಗೂ ಬರಲಿಲ್ಲ. ಅಲ್ಲಿಯ ಜನ ಇದನ್ನೆಲ್ಲಾ ವಿವರಿಸಲು ನನ್ನನ್ನು ಚುನಾವಣೆ ಮಾಡಿ ಕಳುಹಿಸಿದ್ದಾರೆ. ನನಗೆ ಇರತಕ್ಕ ಇಂಥಾ ಒಂದು ದೊಡ್ಡ Top Voice ನಲ್ಲಿ ಎಷ್ಟೋ ವಿಚಾರ ಹೇಳುತ್ತೇನೆ. ಆದರೆ ಅದು ಯಾರಿಗೂ ಕೇಳುತ್ತಿಲ್ಲ. ಆದಾಗ್ಯೂ ನಾನು ಆ ನಮ್ಮ ಪ್ರದೇಶಕ್ಕೆ ಈ ಕಾಂಟೂರ್ ಬಂಡಿಂಗ್ ವಿಚಾರ ಬಹಳ ಅಗತ್ಯವಾಗಿದೆ. ಈ ಕಾರ್ಯವನ್ನು ಕೈಗೊಂಡು ಎಲ್ಲರಿಗೂ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಪಂಪ್ ಸೆಟ್‌ಗಳ ವಿಚಾರದಲ್ಲಿ ನಾನು ನಮ್ಮ ಸರ್ಕಾರದವರನ್ನು ಕಂಗ್ರಾಜುಲೇಟ್ ಮಾಡಬೇಕಾಗಿದೆ. ಏಕೆಂದರೆ ಇವುಗಳಿಗೆ ಇನ್‌ಷೂರೆನ್ಸ್ ಮಾಡಿದ ಕೂಡಲೇ ಅವರಿಗೆ ಸಾಲ ದೊರೆಯುತಕ್ಕಂಥ ಒಂದು ಏರ್ಪಾಡನ್ನು ಮಾಡಿದ್ದಾರೆ. ಇದೇ ರೀತಿ ಆ ಟ್ರ್ಯಾಕ್ಟರುಗಳಿಗೂ ಕೂಡ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಟ್ರ್ಯಾಕ್ಟರುಗಳಿಗೂ ಇನ್‌ಷೂರ್ ಮಾಡತಕ್ಕ ಅವಕಾಶ ಕಲ್ಪಿಸಿಕೊಡಬೇಕು. ಏಕೆಂದರೆ ಈ ದಿವಸ ಭೂಮಿಗೆ ನಮ್ಮಲ್ಲಿ ಯಾರೂ ಸರಿಯಾದ ವ್ಯಾಲ್ಯೂ ಕೊಡುತ್ತಿಲ್ಲ. ಕಾರಣ ಬರ ಬಂದರೆ ಏನೂ ಬೆಳೆಯಾಗುವುದಿಲ್ಲ ಎಂದು. ಅಲ್ಲಿ ನೂರಾರು ಎಕರೆ ಜಮೀನಿದ್ದರೂ ಎಲ್ಲ ವೇಸ್ಟ್ ಆಗಿದೆ. ಯಾರೂ ಈ ದಿವಸ ಈ ಭೂಮಿಗೆ ವ್ಯಾಲ್ಯುಯೇಷನ್ ಸರ್ಟಿಫಿಕೇಟನ್ನು ಕೊಡುತ್ತಿಲ್ಲ. ಆದ್ದರಿಂದ ಸರ್ಕಾರದವರು ಈಸಿ ಟರ್ಮ್ಸನಲ್ಲಿ ಈ ಟ್ರ್ಯಾಕ್ಟರುಗಳಿಗೂ ಇನ್‌ಷೂರೆನ್ಸ್ ಮಾಡತಕ್ಕ ಏರ್ಪಾಡನ್ನು ಮಾಡಿಕೊಟ್ಟರೆ ರೈತರಿಗೆ ಅನುಕೂಲವಾಗುತ್ತದೆ.

ಇನ್ನು ಈ ಇನ್‌ಸೆಕ್ಟಿಸೈಡ್ಸ್ ವಿಚಾರಕ್ಕೆ ಬಂದರೆ—ನಮ್ಮಲ್ಲಿ ಅನೇಕ ಹಳ್ಳಿಗಳಲ್ಲಿ ಹುರಳಿ ಬೆಳೆಯೆಲ್ಲ ನಾಶವಾಯಿತು. ನನ್ನ ಜಮೀನಿನಲ್ಲೇ ಮೊದ ಮೊದಲು ಸ್ವಲ್ಪ ಚೆನ್ನಾಗಿ ಬಂದಿತ್ತು. ಆದರೆ ತಡೆಯಲ್ಲಿ ಮಾರಿ ರೋಗ ಬಂತು. ಆಗ ನಾನೇ ಈ ಇಲಾಖೆಯವರಿಗೆ ಹೇಳಿ ಕಳುಹಿಸಿದೆ. ಅವರು ಬರುವ ಹೊತ್ತಿಗೆ ಅರ್ಧ ಬೆಳೆಯೆಲ್ಲ ಹಾಳಾಗಿತ್ತು. ಹೀಗೆ ಈ ವಿಚಾರದಲ್ಲಿ ನಮ್ಮಂಥಾ ಜನರಿಗೇ ಈ ಇಲಾಖೆಯಿಂದ ಒಂದು ಅನುಕೂಲ ದೊರೆಯಲಿಲ್ಲ ಎಂದು ಹೇಳುವಾಗ ಇನ್ನು ಸಾಧಾರಣ ಜನರ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಗತಿ ಏನಾಗಿರಬಹುದು ? ಈ ರೋಗ ಬಂದು ಅಲ್ಲಿ ಅನೇಕರಿಗೆ ಬೆಳೆ ಕೆಟ್ಟು ಅನಾನುಕೂಲವಾಗಿದೆ. ಇನ್ನು ಮುಂದಕ್ಕಾದರೂ ತಕ್ಷಣ ಇಲಾಖೆಯವರು ನಿಗಾ ತೆಗೆದುಕೊಂಡು ರೈತರಿಗೆ ಅವರ ಬೆಳೆ ಕೈ ಹತ್ತುವ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

3.00 P. M.

ನಮಗೆ ಕೊಟ್ಟಿರುವ IIIrd ಪ್ಲಾನ್ Bookನಲ್ಲಿ ಎರಡು ಕಾಲೋನಿಗಳನ್ನು ಹಿಂದುಳಿದ ವರ್ಗದವರಿಗೆ ಎಂದು propose ಮಾಡಿದ್ದಾರೆ. ಅದರ ಬಗ್ಗೆ ನಾನು ರೆವೆನ್ಯೂ ಡಿಮಾಂಡ್ ಮೇಲಿನ ಚರ್ಚೆಯಲ್ಲಿ ಮಾತನಾಡುತ್ತೇನೆ. ಈಡಿಗರೆಲ್ಲ ಕೆಲಸವಿಲ್ಲದೆ ಕಾರ್ಯವಿಲ್ಲದೆ ಬೀದಿ ಬೀದಿ ಅಲೆಯುವಂಥ ಪ್ರಸಂಗ ಬಂದಿತ್ತು. ಹಿಂದಿನ ರೆವೆನ್ಯೂ ಮಂತ್ರಿಗಳು ಈಡಿಗರನ್ನೆಲ್ಲ ಸೇರಿಸಿ ಒಂದು ಕಾಲೋನಿಮಾಡಿ, ಬೇಗೂರು ಹತ್ತಿರ ಒಂದು ಬೋರ್ಡ್ ಹಾಕಿ ಅವರಿಗೆಲ್ಲ ಸಾಗುವಳಿ ಚೀಟಿಯನ್ನು ಹಂಚಿ ಬಂದರು. ಈಗ ಅಲ್ಲಿ ಗುಡಿಸಲೂ ಇಲ್ಲ, ಏನೂ ಇಲ್ಲ. ರೆವೆನ್ಯೂ ಮಂತ್ರಿಗಳು ಅವರಿಗೆಲ್ಲ ಬುಲ್‌ಡೋಜರ್, ಟ್ರ್ಯಾಕ್ಟರ್ ಕಳಿಸಿ ನೆಲವನ್ನು ಹದಮಾಡಿ ಕೊಡುತ್ತೇವೆಂದು ಮಾತುಕೊಟ್ಟು ಬಂದರು. ಇನ್ನೂ ಅವರಿಗೆ ಸಹಾಯ ಮಾಡುವುದರಲ್ಲಿದ್ದಾರೆ. ವ್ಯವಸಾಯ ಅಷ್ಟು ಸುಲಭವಾದ ಕೆಲಸವಲ್ಲ. ರೂಪಾಯಿಗಳನ್ನು ಚೆಲ್ಲ ನಯೇ ಪೈಸೆ ಆಯಬೇಕು. ಇಂಥ ಕಷ್ಟವಿರುವಾಗ ಈಡಿಗರು ಹೇಗೆ ತಾನೇ ವ್ಯವಸಾಯ ಮಾಡಬಲ್ಲರು ? ಹೊಸದಾಗಿ ಏನಾದರೂ ಕಾಲೋನಿಗಳನ್ನು ಮಾಡುವುದಿದ್ದರೆ ಹಿಂದೆ ಇಲ್ಲಿ ಮಾಡಿರುವ ಕಾಲೋನಿಗಳನ್ನು ಉದ್ಧಾರ ಮಾಡಿ ಈಡಿಗರ ಜನಾಂಗಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತೇನೆ.

Farmer's Forum ಎಂದು ಒಂದು Organisation ಇದೆ. ಅದನ್ನು ನಮ್ಮ ಹಣಕಾಸಿನ ಇಲಾಖೆಯವರು Recognise ಮಾಡುವುದಿಲ್ಲವೆಂದು ಹೇಳುತ್ತಾರೆ. ಸಂಘಟಿತರಾಗದೆ ಇರುವ ರೈತಾಪಿ ಜನಗಳಿಗೆ ಅನುಕೂಲವನ್ನು ಕಲ್ಪಿಸಿಕೊಡುವ ಪರಿಸ್ಥಿತಿ ಬಂದರೆ ಅದಕ್ಕೆ ಒಂದು Organisation ಬೇಕಾಗುತ್ತದೆ. ಈ ದಿಕ್ಕಿನಲ್ಲಿ ಕೆಲಸ ಮಾಡಲು ಮುಂದೆ ಬರತಕ್ಕ ಸಂಘ ಸಂಸ್ಥೆಗಳಿಗೆ ಕೊಡಬೇಕಾದ ಸವಲತ್ತುಗಳನ್ನು ಕೊಡುತ್ತಿಲ್ಲ. ಸ್ಕೌಟ್ಸ್, ಸೇವಾದಳ, ಇಂಥವುಗಳಿಗೆಲ್ಲ ಎಷ್ಟು ಹಣ ಕೊಡಬೇಕಾದರೂ ಕೊಡುತ್ತೀರಿ ರೈತಾಪಿ ಜನಗಳನು ನೋಡಿದರೆ ಅವರಿಗೆ ಅದೇ ತರಹ ಸಹಾಯವನ್ನು ಕೊಡುತ್ತಿಲ್ಲ. ರೈತರ ಬಗ್ಗೆ ಈ ತರಹ ಭಾವನೆ ಬರಬಾರದೆಂದು ಹೇಳುತ್ತೇನೆ.

ಇನ್ನು animal husbandry ವಿಷಯವಾಗಿ ಸ್ವಲ್ಪ ಮಾತನಾಡುತ್ತೇನೆ. ನಮ್ಮ ಮಾನ್ಯ ಮಂತ್ರಿಗಳು ಡೈರಿ ಪ್ರಾಜೆಕ್ಟ್ ವಿಚಾರವಾಗಿ ಆಗಾಗ ಹೇಳಿಕೆ ಕೊಡುವುದನ್ನೂ, ಅಸೆಂಬ್ಲಿಯಲ್ಲಿ ಹೇಳುವುದನ್ನೂ ಕೇಳುತ್ತಿದ್ದೇವೆ. ಅವರಿಗೆ Milk ಸರ್ವೆ ಮಾಡುವುದಕ್ಕೆ ಒಂದು ಇಲಾಖೆ ಇದೆ. ಅದಕ್ಕೆ ಕೆಲವು ಅಧಿಕಾರಿಗಳನ್ನು ನೇಮಿಸಿಕೊಂಡಿದ್ದಾರೆ. ಸರ್ಕಾರಿ ಆರ್ಡರ್ ಪ್ರಕಾರ ಅವರಿಗೆ ಇಂಥ ಅರ್ಹತೆ ಇರಬೇಕು ಎಂದು ಹೇಳಿಲ್ಲ, Statistics ಓದಿಕೊಂಡು B.Sc., M.Sc., ಮಾಡಿಕೊಂಡಿರುವಂಥ qualified hands ಮತ್ತು ಅನುಭವವಿರುವವರನ್ನು ಕೆಲಸಕ್ಕೆ ನೇಮಿಸಿಕೊಳ್ಳದೆ ಸಿಕ್ಕಾಪಟ್ಟೆ first division clerk second divsion clerk ಎಂದು ಅವರಿಗೆ ಇಷ್ಟ ಬಂದವರನ್ನೂ ನೇಮಿಸಿಕೊಂಡು ಸರ್ವೆ ಮಾಡಬೇಕಾದರೆ ಹೇಗೆ ಸಾಧ್ಯ ? ನಿಜವಾಗಿಯೂ statistics-know-how ಇಲ್ಲದೆ ಇರುವವರನ್ನು ತೆಗೆದುಕೊಂಡರೆ ನಮಗೆ ಬೇಕಾದ ಮಾಹಿತಿ ಸಿಕ್ಕುತ್ತದೆಯೇ ? ನಮ್ಮ dairy project ಯಶಸ್ವಿಯಾಗಿ ಕೆಲಸ ಮಾಡಬೇಕಾದರೆ qualified hands ನೇಮಕ ಮಾಡಿಕೊಳ್ಳಿ. ಡೈರೆಕ್ಟರ್ ಸಾಹೇಬರು ಬರೀ ರಾಜಕೀಯ ಮಾಡಿದರೆ ಉಪಯೋಗವಿಲ್ಲವೆಂದು ಹೇಳುತ್ತೇನೆ.

Stockmen ಮತ್ತು Compounders ವಿಚಾರ ತೆಗೆದುಕೊಂಡರೆ ಇದುವರೆಗೆ ಕೊಟ್ಟಿರುವಂಥ ಎಲ್ಲ ಆಸ್ಪತ್ರೆಗಳಲ್ಲಿಯೂ ಸ್ಟಾಕ್‌ಮೆನ್ ಇಲ್ಲ, ಕಾಂಪೌಂಡರ್ ಇಲ್ಲ, ಸಾಧ್ಯವಾದಷ್ಟು ಮಟ್ಟಿಗೂ ಎಲ್ಲ ಆಸ್ಪತ್ರೆಗಳಿಗೂ ಅವರನ್ನು ಕಳಿಸಬೇಕೆಂದು ಹೇಳುತ್ತಿದ್ದೇನೆ. ಇದರಲ್ಲಿ ನಮ್ಮ ತಾಲ್ಲೂಕಿನ ಒಂದು ಕೋರಿಕೆಯೂ ಇದೆ, ಬೊಮ್ಮಲಾಪುರಕ್ಕೆ ಒಂದು rural veterinary dispensary ಕೊಡಬೇಕೆಂದು ಸರ್ಕಾರದವರಲ್ಲಿ ನಾನು ಬೇಡಿಕೊಳ್ಳುತ್ತೇನೆ.

ಗ್ರಾಮಾಭಿವೃದ್ಧಿ ವಿಚಾರಕ್ಕೆ ಬಂದರೆ ಕುಡಿಯುವ ನೀರಿನ ಬಾವಿಗಳು ನಾಲ್ಕೈದು ವರ್ಷಕ್ಕೆ ಮಿಗಿಲಾದ ಬಾವಿಗಳಿಲ್ಲವೆಂದು ನಮ್ಮ ಮಂತ್ರಿಗಳು ಹೇಳಿದರು. ನನ್ನ ಪ್ರಶ್ನೆಯೊಂದಕ್ಕೆ ಮಾನ್ಯ ಉಪ ಮಂತ್ರಿಗಳು ಹೇಳಿದರು, ಹತ್ತು ಹನ್ನೆರಡು ವರ್ಷಗಳಿಂದ ಕೆಲವು ಇವೆ, ಕೂಡಲೇ ಸಿದ್ಧಮಾಡಿ

ಕೊಡುತ್ತೇವೆ ಎಂದು ಹೇಳಿದರು. ಬೇರಂಬಾಡಿ ಎಂಬ ಗ್ರಾಮದಲ್ಲಿ 20 ವರ್ಷಗಳ ಹಿಂದೆ ತೆಗೆದು ಎರಡು ಬಾವಿಗಳು ಅರ್ಧವಾದರ್ವಾಗಿ ಅದರಲ್ಲಿ ದನಕರುಗಳು ಬಿದ್ದು ಹೋಗಿವೆ, ಇಂಥಾ ಬಾವಿಗಳು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಬೇಕಾದಷ್ಟಿವೆ. ಕುಡಿಯುವ ನೀರಿನ ಸೌಲಭ್ಯ ಮಾಡಿಕೊಡಬೇಕೆಂದು ಎಷ್ಟು ಕೇಳಿದರೂ ಉಪಯೋಗವಿಲ್ಲದಂತಾಗಿದೆ. ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಇತರರಿಗಿಂತ ಚಿಕ್ಕವರು ಅವರಿಗೆ ತಿರುಗಾಡುವುದಕ್ಕೆ ಸಾಮರ್ಥ್ಯವಿದೆ. ಒಂದು ಸಲ ನಮ್ಮ ತಾಲ್ಲೂಕಿಗೆ ಬಂದು ನೋಡಿಕೊಂಡು ಬನ್ನಿ ಎಂದು ಕರೆದರೂ ಕೂಡ ಬರುತ್ತಿಲ್ಲ. ಅವರು ದಯವಿಟ್ಟು ಬಂದು ನಮ್ಮ ಊರನ್ನು ನೋಡಬೇಕೆಂದು ಕೇಳಿಕೊಳ್ಳುತ್ತೇನೆ.

Village extension ವಿಚಾರವಾಗಿ ಎಷ್ಟೋ ಊರುಗಳಿಂದ ಬಂದಂಥ ಅರ್ಜಿಗಳು ತಮ್ಮಲ್ಲಿ ಹಾಗೆಯೇ ಉಳಿದಿವೆ. ಅದನ್ನು ಬೇಗ ವಿಲೇವಾರಿ ದೊಡ್ಡ ದೊಡ್ಡ ವಿಲೇಜ್ ಎಕ್ಸ್‌ಟೆನ್‌ಷನ್‌ಗೆ ಅನುಕೂಲ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಈಗ ಎಷ್ಟೋ ರಸ್ತೆಗಳನ್ನು ತಾಲ್ಲೂಕ್ ಬೋರ್ಡಿಗೆ ವಹಿಸಿದ್ದೀರಿ. ಈ ರಸ್ತೆಗಳಿಗೆ ರಿಪೇರಿ ಮಾಡಬೇಕಾದರೆ ಸರ್ಕಾರದಲ್ಲಿ ಹಣವಿಲ್ಲ, P. W. D. ನಲ್ಲಿ ಹಣವಿಲ್ಲ, ತಾಲ್ಲೂಕ್ ಬೋರ್ಡಿನಲ್ಲಿ ಹಣವಿಲ್ಲ.; ಪಂಚಾಯಿತಿಯಲ್ಲಿ ಹಣವಿಲ್ಲ,. ನಮ್ಮಲ್ಲಿ ಮೊದಲೇ ಇಲ್ಲ. ನಾವು ತೀರ ಬಡವರು. ಒಂದು ಊರಿನಿಂದ main ರೋಡಿಗೆ ಬರಬೇಕಾದರೆ ದಾರಿಯಿಲ್ಲ, ಮಳೆ ಬಂದರೆ ದ್ವೀಪದಲ್ಲಿರುವಂಥ ಪ್ರಸಂಗ ಉಂಟಾಗುತ್ತದೆ. ದಯವಿಟ್ಟು ಲೋಕೋಪಯೋಗಿ ಮಂತ್ರಿಗಳ ಹತ್ತಿರ ಸ್ವಲ್ಪ ಹಣವನ್ನು ತೆಗೆದುಕೊಂಡು ಈ ರಸ್ತೆಗಳನ್ನು ಸರಿಮಾಡಿಸಿ ಕೊಡಬೇಕು.

ಇನ್ನು ಸಹಕಾರದ ವಿಚಾರವಾಗಿ ಮಾತನಾಡುವಾಗ, co-operative farming ಚೆನ್ನಾಗಿ ನಡೆಯುತ್ತಿದೆ ಎಂದು ನಮಗೆ ತಿಳುವಳಿಕೆ ಬರುವಹಾಗೆ ಹೇಳುತ್ತಿದ್ದಾರೆ. ಒಂದೊಂದು ಸಂಸಾರದಲ್ಲಿ ಎಂಟು ಹತ್ತು ಜನರಿದ್ದರೆ ಅವರೆಲ್ಲ ಒಟ್ಟಿಗೆ ಸೇರಿ co-operative farming ಎಂದು ಮಾಡಿಕೊಂಡಿರುತ್ತಾರೆ. ನಮ್ಮಲ್ಲಿ ಗಂಡ, ಹೆಂಡತಿ, ಏಳೆಂಟು ಮಕ್ಕಳಿರುವುದು ಸಹಜವಾಗಿದೆ. ನಾನು ಒಂದು co-operative farming ವಿಚಾರವನ್ನು ನೋಡಿದ್ದವರಲ್ಲಿ ಗಂಡ, ಹೆಂಡತಿ ಡೈರೆಕ್ಟರುಗಳು, ಮೂರು ಜನ ಮಕ್ಕಳು ಅದಕ್ಕೆ ಮೆಂಬರುಗಳು, ಅವರ ಇಬ್ಬರು ಸೊಸೆಯರೂ ಮೆಂಬರುಗಳು, ಒಬ್ಬ ತಂಗಿಯೂ ಮೆಂಬರು, ಹೀಗೆ ಒಟ್ಟು ಹತ್ತು ಜನ ಮೆಂಬರುಗಳಾಗಿದ್ದಾರೆ. ಈ ಸೊಸೈಟಿ 1961ರಲ್ಲಿ ರಿಜಿಸ್ಟರಾಗಿದೆ. ಇದಕ್ಕೆ managerial cost ಬೇರೆ ಕೇಳಿದ್ದಾರೆ. ಇದು ಸಾಲದೆಂದು ತಾಲ್ಲೂಕು ಫಂಡಿನಲ್ಲಿ ಹತ್ತು ಸಾವಿರ ರೂಪಾಯಿ ಖರ್ಚಿನಲ್ಲಿ ಗೋಡೌನ್ ಒಂದನ್ನು ಕಟ್ಟಿಸಿಕೊಂಡಿದ್ದಾರೆ. ಇಷ್ಟೇ ಅಲ್ಲದೆ ತಮ್ಮ ಸ್ವಂತ ಹೆಸರಿನಲ್ಲ 50-60 ಸಾವಿರ ರೂಪಾಯಿ ಇಟ್ಟುಕೊಂಡಿದ್ದಾರೆ. ಬ್ಯಾಂಕ್‌ಗಳಲ್ಲಿ ಬೇಕಾದಷ್ಟು ಸಾಲಗಳನ್ನು ತೆಗೆದುಕೊಂಡಿದ್ದಾರೆ. ಹೀಗೆಲ್ಲ ಎಷ್ಟೋ ಸವಲತ್ತುಗಳನ್ನು ಯಾರು ಯಾರಿಗೋ ಒದಗಿಸಿ ಕೊಡುತ್ತಿದ್ದೀರಿ.—ಇನ್ನೂ ಏನೇನು ಸೌಲಭ್ಯಗಳನ್ನು ಒದಗಿಸಿ ಕೊಡುತ್ತೀರೆಂದು ಹೇಳಬೇಕು. ಇನ್ನೂ ಎಷ್ಟೆಷ್ಟು ಜನಗಳಿಗೆ ಏನೇನು ಮಾಡುವುದಕ್ಕೆ ಸಾಧ್ಯವೆನ್ನುವುದನ್ನು ದಯವಿಟ್ಟು ಹೇಳಿದರೆ ಬಹಳ ಸಂತೋಷವಾಗುತ್ತದೆ.

ಇನ್ನು Co-operative Extension Officers ವಿಚಾರ ಹೇಳುತ್ತ ಅವರು ಮಾಡಿರುವ ಪಾಪವೇನು ಎಂದು ಕೇಳುತ್ತೇನೆ. ಪ್ರತಿಯೊಂದು ಕೆಲಸಕ್ಕೂ ಅವರನ್ನು ಹಾಕಿಕೊಂಡು ದುಡಿಸುತ್ತೀರಿ. ಈವಾಗ ಧಾನ್ಯಗಳನ್ನು ಸಂಗ್ರಹಿಸಲು ಉಪಯೋಗಿಸುತ್ತಿದ್ದೀರಿ. A to Z ಎಲ್ಲ ಕೆಲಸಗಳಿಗೂ ಅವರನ್ನು ತೆಗೆದುಕೊಳ್ಳುತ್ತೀರಿ. ಈ ಪರಿಸ್ಥಿತಿಯಲ್ಲಿ ಅವರಿಗೆ ಕೊಡುವ ಸಂಬಳ ಸಾಕೇ ? Agricultural Instructorsಗೆ ಜಾಸ್ತಿ ಕೊಡುತ್ತೀರಿ, Veterinary Inspectorsಗೆ ಜಾಸ್ತಿ ಕೊಡುತ್ತೀರಿ, Sericultural Inspectorsಗೆ ಜಾಸ್ತಿ ಕೊಡುತ್ತೀರಿ, ಎಲ್ಲರಿಗೂ ಹೆಚ್ಚಾಗಿ ಕೊಡುತ್ತೀರಿ. ಆದರೆ Co-operative Extension Officersಗೆ ಮಾತ್ರ ಕೊಡುವುದಿಲ್ಲವೆಂದರೆ ಯಾವ ನ್ಯಾಯ ? ಅವರು ಕೆಲಸ ಮಾಡುವುದಿಲ್ಲವೆ ? ಒಂದು ಬ್ಲಾಕಿನಲ್ಲಿ ಕೆಲಸ ಮಾಡುವವರಲ್ಲಿ ಇವರಿಗೆ ಮಾತ್ರ ಸರಿಯಾದ ಸಂಬಳ ಕೊಡುವುದಿಲ್ಲವೆಂದರೆ ಸರಿಯಲ್ಲ. ಅವರ ಕಷ್ಟ ಸುಖಗಳನ್ನೂ ನೋಡಿ ಎಲ್ಲರಿಗೂ ಕೊಡುವಂತೆ ಸಂಬಳಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅರಣ್ಯ ಮಂತ್ರಿಗಳು ಎಲ್ಲಿಯೋ ಹೋಗಿದ್ದಾರೆ. ಅವರ ಇಲಾಖೆಯಲ್ಲಿ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ನಮ್ಮ ತಾಲ್ಲೂಕಿನಲ್ಲಿ ಕುಂದುಕೆರೆ ಊರು ಚಿಕ್ಕದಾಗಿತ್ತು. ಅದು ದೊಡ್ಡದಾಗುತ್ತಿದೆ. ಹಿಂದೆ ಆ ಊರಿನ ಸುತ್ತ ಇದ್ದ ಜಾಗವನ್ನು ಅರಣ್ಯ ಇಲಾಖೆಯವರು ತೆಗೆದು ಕೊಂಡಿದ್ದಾರೆ. ಈಗ ಊರು ಬೆಳೆಯುತ್ತಿರುವುದರಿಂದ ಮೊದಲು ಇದ್ದಂತೆ ಅವರಿಗೆ ಜಾಗಕೊಟ್ಟು Boundry Shift ಮಾಡಬೇಕು ಎಂದು ನನ್ನ ಪ್ರಾರ್ಥನೆ. ಈಗಿರುವ ಬೌಂಡರಿಯೊಳಗೆ ಆಡು, ಕುರಿ, ದನ ಕರುಗಳನ್ನು ಮೇಯಿಸುವುದಕ್ಕೆ ಕಷ್ಟವಾಗಿದೆ. ಆದುದರಿಂದ ದನ ಕರುಗಳನ್ನು ಮೇಯಿಸುವುದಕ್ಕೆ ಅನುಕೂಲಮಾಡಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಕೊನೆಯದಾಗಿ ಎಡುವನ ಹಳ್ಳಿಯವರು ಅರಣ್ಯವನ್ನು ರಿಲೀಸ್‌ಮಾಡಿ ಕೊಡಬೇಕೆಂದು ಕೇಳಿದಾಗ ಅವರಿಗೆ ಅದು Tiger block, ರಿಲೀಸ್ ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಅದೇ ನಿಟ್ಟರೆ ಗ್ರಾಮದವರಿಗೆ ಕೊಡುವುದಕ್ಕೆ ಅವಕಾಶ ಕೊಡುವವರಾಗಿದ್ದಾರೆ. 15–20 ಮೈಲಿಯಿಂದ ಬಂದು ಮನೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿದ್ದಾರೆ. ಆದರೆ ಎಡವನ ಹಳ್ಳಿಯವರು ಜಮೀನಿಲ್ಲದೆ, ಜಮೀನುಕೊಡಿ ಎಂದರೆ ಇಲ್ಲದ ಭಯವನ್ನು ಹುಟ್ಟಿಸುತ್ತಾರೆ. ಕೊಡುವುದಕ್ಕೆ ಇಷ್ಟವಿಲ್ಲದೆ ಹೋದರೆ 'Tiger block' ಹುಲಿ ಬಂದು ಹಿಡಿದು ಕೊಳ್ಳುತ್ತದೆಂದು ಹೇಳುವುದು, ಇನ್ನೊಬ್ಬರಿಗೆ ಏನೂ ಹೇಳದೆ ಕೊಡುವುದು ಹೀಗೆಲ್ಲ ಮಾಡುತ್ತಾರೆ. Tiger block ನಿಂದ ಬೇರೆಯವರಿಗೆ ತೊಂದರೆಯಾಗುವುದಿಲ್ಲವೇ, ಅವರನ್ನು ಹುಲಿ ಹಿಡಿದು ಕೊಳ್ಳುವುದಿಲ್ಲವೇ? ಇದರ ಕಡೆಗೂ ಸರ್ಕಾರ ಗಮನ ಕೊಡಬೇಕೆಂದು ಹೇಳಿ. ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಂ. ಸಿ. ಬಸಪ್ಪ (ಚಾಮರಾಜನಗರ).—ಮಾನ್ಯ ಅಧ್ಯಕ್ಷರೇ, ಈ ಸಭೆಯ ಮುಂದೆ ಮಾನ್ಯಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳನ್ನು ಹೃತ್ಪೂರ್ವಕವಾಗಿ ಅನುಮೋದಿಸುತ್ತಾ ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಮ್ಮ ಹಣಕಾಸಿನ ಸಚಿವರು ಬಡ್ಜೆಟ್ಟಿನ ಭಾಷಣದ ಎರಡನೆ ಭಾಗದಲ್ಲಿ ಎಲ್ಲ ಇಲಾಖೆಗಳ ವಿವರಗಳನ್ನು ಹೇಳುತ್ತ ವ್ಯವಸಾಯದ ವಿಷಯವಾಗಿ ಹೇಳುತ್ತ ಎರಡು ಮುಖ್ಯವಾದ ವಿಷಯಗಳನ್ನು ಹೇಳಿದ್ದಾರೆ. ಒಂದನೇದು ವ್ಯವಸಾಯಕ್ಕಾಗಿ ಪಂಪುಸೆಟ್ಟುಗಳನ್ನು ಒದಗಿಸಿ ನೀರಾವರಿ ವ್ಯವಸ್ಥೆಗೆ ಅನುಕೂಲಮಾಡುವುದು; ಮತ್ತೊಂದು ಎಂದರೆ ಎರಡನೇ ಮುಖ್ಯವಾದ ಅಂಶ ಎಂದರೆ ಬಾವಿಗಳನ್ನು ತೆಗೆದು ಅಂತಹ ಬಾವಿಗಳಲ್ಲಿ ನೀರು ಸರಬರಾಜು ಆಗುವುದಕ್ಕಾಗಿ Borewells Machineಗಳನ್ನು ಹಾಕಿ ಬಾವಿಯಲ್ಲಿರು ನೀರಿನ ಅಂಶವನ್ನು ಜಾಸ್ತಿಮಾಡತಕ್ಕ ಅಂಶ, ಈ ಎರಡನೆಯ ಅಂಶಕ್ಕಾಗಿ ಈ ಇಲಾಖೆಯವರು ಮಹತ್ವ ಕೊಟ್ಟಿರುವುದು ನಿಜವಾಗಿಯೂ ಶ್ಲಾಘನೀಯವಾದುದು. ವ್ಯವಸಾಯವನ್ನು ಇಂತಹ ಬಾವಿಗಳಿಂದ ಮಾಡಿರತಕ್ಕ ರೈತರಿಗೆ ಇದರಿಂದ ಬಹಳ ಅನುಕೂಲವಾಗುತ್ತದೆ. ಎನ್ನುವುದನ್ನು ನಾವೆಲ್ಲರೂ ನಿಜವಾಗಿಯೂ ಒಪ್ಪಿಕೊಳ್ಳಬಹುದು. ಈಗ ತಾನೇ ಮಾತನಾಡಿದ ಶ್ರೀಮತಿ ನಾಗರತ್ನಮ್ಮನವರು ಹೇಳುವಾಗ ಅವರ ಪ್ರಾಂತವಲ್ಲಿದ್ದ ಬಾವಿಗಳ ಹಾಗೆ ನಮ್ಮ ಪ್ರಾಂತದಲ್ಲೂ ಇವೆ. ಈ ಬಾವಿಗಳಿಂದ ಬರುವ ನೀರನ್ನೇ ನಂಬಿಕೊಂಡು ವ್ಯವಸಾಯ ಮಾಡಬೇಕಾಗಿದೆ. ನಮ್ಮ ಬಾಗದಲ್ಲಿ ಒಂದು ಬಾವಿ ತೆಗೆಸಬೇಕಾದರೆ ಏನಿಲ್ಲ ಎಂದರೂ ಹತ್ತು ಸಾವಿರ ರೂಪಾಯಿಗಳಷ್ಟು ಬೇಕಾಗುತ್ತದೆ. ಇದರ ಮೇಲೆ ಪಂಪುಸೆಟ್ಟು ಹಾಕಿಕೊಳ್ಳಬೇಕಾದರೆ, ಇನ್ನೆರಡು ಸಾವಿರ ರೂಪಾಯಿಗಳು ಬೇಕಾಗುತ್ತದೆ. ಎಂದರೆ ಒಟ್ಟು ಒಂದು ಬಾವಿಗೆ ಹತ್ತು, ಹನ್ನೆರಡು ಸಾವಿರ ರೂಪಾಯಿಗಳಷ್ಟು ಖರ್ಚು ಬರುತ್ತದೆ. ಈಗ ಕಮ್ಯೂನಿಟಿ ಡೆವೆಲಪ್‌ಮೆಂಟು ಬಾಬಿನಲ್ಲಿ ಬಡ್ಜೆಟ್ಟಿನಲ್ಲಿ ಸುಮಾರು 3·4 ಲಕ್ಷ ರೂಪಾಯಿಗಳಷ್ಟು ನೀರಾವರಿಗಾಗಿ ಕೊಟ್ಟಿದ್ದಾರೆ. ಇದರಿಂದ ಪ್ರತಿಯೊಬ್ಬರಿಗೂ ನಾಲ್ಕು ಸಾವಿರದಷ್ಟು ಒಂದೊಂದು ಬಾವಿ ಮಾಡಿಕೊಳ್ಳಲು ಕೊಡಲಾಗುತ್ತಿದೆ. ಇದು ಆಯಾ ಜಿಲ್ಲಾಧಿಕಾರಿಗಳ ಮುಖಾಂತರ ಪ್ರತಿ ತಾಲ್ಲೂಕಿಗೂ ಬಾವಿ ಮಾಡಿಕೊಳ್ಳುವವರಿಗೇನೋ ಖರ್ಚಾಗುತ್ತಿದೆ. ಆದರೆ ನಿಜವಾಗಿಯೂ ನೋಡಿದರೆ, ನಾಲ್ಕು ಸಾವಿರ ರೂಪಾಯಿಗಳಲ್ಲಿ ಒಂದು ಬಾವಿ ತೆಗೆಸುವುದಕ್ಕಾಗುವುದಿಲ್ಲ. ಅದರಿಂದ ಹೆಚ್ಚಿನ ಖರ್ಚಾಗಿ ವ್ಯವಸಾಯಮಾಡುವ ರೈತ ಸಾಲಗಾರನಾಗುತ್ತಾನೆಯೇ ಹೊರತು ನಿಜವಾಗಿ ಇದರಿಂದ ಅನುಕೂಲ ಪಡೆಯುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ Borewells Unit ಎಂದು ಮಾಡಬೇಕೆಂದು, ಇದರ ಅವಶ್ಯಕತೆಗಾಗಿ 3·21 ಲಕ್ಷ ರೂಪಾಯಿಗಳಷ್ಟು ಈ ಬಡ್ಜೆಟ್ಟಿನಲ್ಲಿ ಸೇರಿಸಿ ನೀರಾವರಿ ಬಾವಿಗಳಲ್ಲಿ ನೀರು ಬರುವಂತೆ ಅನುಕೂಲಗಳನ್ನು ಮಾಡಿಕೊಡಲು ಒಂದು ಯೋಜನೆ ಇಲ್ಲಿ ಬಂದಿದೆ. ಇದೇನೋ ಒಳ್ಳೆಯ ಭಾವನೆ. ಎರಡನೇದು Pumpsets ಕೊಡುವುದರಲ್ಲಿ ಕೆಲವರು ಒಂದು ಕೋಟಿ ರೂಪಾಯಿಗಳಷ್ಟು ಎಂದು ಹೇಳಿ ಕೊಟ್ಟಿದ್ದರೂ ಆದು ಈ ಮಾರ್ಚಿ ತಿಂಗಳಿನೊಳಗಾಗಿ ಇನ್ನೂ ಖರ್ಚಾಗಿಲ್ಲ. ಇದರಿಂದಾಗಿ ಒಂದು ಪಂಪುಸೆಟ್ಟು ಕೊಳ್ಳುವಹಾಗಿಲ್ಲ ಎಂದು ಹೇಳಿದರು. ನಾನು ನೋಡಿರುವ ಹಾಗೆ ಸರ್ಕಾರದವರು ಒಂದು ಕೋಟಿ ರೂಪಾಯಿಗಳನ್ನು ಎಲೆಕ್ಟ್ರಿಸಿಟಿ ಬೋರ್ಡಿನವರಿಗೆ ಆಗಲೇ ವರ್ಗಾವಣೆಮಾಡಿ ಅವರಿಗೂ ಕೂಡ ಬೇಗನೆ ಪಂಪುಸೆಟ್ಟುಗಳನ್ನು ಒದಗಿಸಬೇಕೆಂದು ಹೇಳಲಾಗಿದೆ. ಅದಲ್ಲದೆ ಅವರಿಗೆ ಆಗಲೇ ಕೆಲವು Diesel sets ಗಳು ಬಂದಿವೆ. ಇದಕ್ಕಾಗಿ 17 ಲಕ್ಷ ರೂಪಾಯಿಗಳಷ್ಟು ಖರ್ಚಾಗುತ್ತ ಎಂದು ತಿಳಿದು ಅದನ್ನೂ ಕೂಡ ಈ ಮಾಹೆ 31ನೇ ತಾರೀಖಿನೊಳಗೆ ಒದಗಿಸಿದೆ. ಈಗಾಗಲೇ ಈ ಹಣದಿಂದ ಅನೇಕ ಜಿಲ್ಲಾಧಿಕಾರಿಗಳಿಗೆ ಡೀಸಲ್ ಪಂಪುಸೆಟ್ಟುಗಳನ್ನು ಒದಗಿಸಿದ್ದಾರೆ ಎಂದು ಇಲ್ಲಿ ಹೇಳುವುದಕ್ಕೆ ಸಂತೋಷಪಡುತ್ತೇನೆ.

ಈ ಇಲಾಖೆಯವರು ವ್ಯವಸಾಯ ಅಭಿವೃದ್ಧಿಯಾಗಬೇಕು ಎಂದು ಬಹಳ ಆಸಕ್ತಿಯನ್ನು ವಹಿಸಿದ್ದಾರೆ. ಇಂತಹ ಕಾರ್ಯಕ್ರಮವೇನೋ ಸ್ವಾಗತಾರ್ಹವಾದುದು ಎಂದು ನಾನೂ ಒಪ್ಪುತ್ತೇನೆ. ಈ ಇಲಾಖೆಯ ವಿಚಾರವಾಗಿ ಅನೇಕ ಸದಸ್ಯರು ಸಲಹೆಗಳನ್ನು ಕೊಟ್ಟಿದ್ದಾರೆ, ಲೋಪ ದೋಷಗಳನ್ನು ತೋರಿಸಿದ್ದಾರೆ. ನನಗಾದರೂ ಅನ್ನಿಸುತ್ತಿರುವುದು, ಈ ಇಲಾಖೆಗೆ ಸಂಸ್ಥಾನದ ಮಟ್ಟದಲ್ಲಿ ಒಬ್ಬರು ಡೈರೆಕ್ಟರವರಿದ್ದಾರೆ. ಪ್ರತಿ ಜಿಲ್ಲೆಯಲ್ಲಿಯೂ ಒಬ್ಬೊಬ್ಬರು ಅಸಿಸ್ಟೆಂಟು ಡೈರೆಕ್ಟರುಗಳು ಅಗ್ರಿಕಲ್‌ಚರಲ್ ಆಫೀಸರುಗಳು ಇದ್ದಾರೆ. ತಾಲ್ಲೂಕು ಮಟ್ಟಕ್ಕೆ ಬರುವುದಾದರೆ, ಅಗ್ರಿಕಲ್‌ಚರಲ್ ಎಕ್ಸ್‌ಟೆನ್‌ಷನ್ನು ಆಫೀಸರು ಎಂದಿದ್ದಾರೆ. ಹಾಗೆ ಪ್ರತಿಯೊಂದು ಕಮ್ಯೂನಿಟಿ ಬ್ಲಾಕಿನಲ್ಲಿಯೂ ಒಬ್ಬೊಬ್ಬರು ಗ್ರಾಮ ಸೇವಕರಿರುತ್ತಾರೆ. ಇದೇನೋ ಸರಪಳಿಯಂತಿದೆ. ಆದರೆ ಇದು Disconnected Links ಇದ್ದ ಹಾಗೆ ಇದೆ. ಡಿಸ್ಟ್ರಿಕ್ಟು ಲೆವೆಲ್ಲಿನಲ್ಲೇನೋ ಅಗ್ರಿಕಲ್‌ಚರಲ್ ಆಫೀಸರೆಂದಿದ್ದಾರೆ. It is a Defunct institution ಏನು ಕೆಲಸ ಮಾಡುತ್ತಾರೋ ಹೇಳುವಂತಿಲ್ಲ. ಇಲ್ಲಿ ಯಾರಮೇಲೂ ಹತೋಟಿ ಇರುವಂತೆ ಕಾಣುತ್ತಿಲ್ಲ. ಗ್ರಾಮ ಸೇವಕರ ಮೇಲೆ ಹತೋಟಿ ಇಲ್ಲ. ಅವರು ಏನೇನು ಕಾರ್ಯಕ್ರಮ ಮಾಡುತ್ತಾರೆಂದು ಅವರನ್ನು ಕೇಳುವುದಿಲ್ಲ. ತಾಲ್ಲೂಕುಗಳಿಗೆ ಅಧಿಕಾರಿಗಳು ಪ್ರವಾಸ ಹೋದಾಗ ಅಗ್ರಿಕಲ್‌ಚರ್ ಎಕ್ಸ್‌ಟೆನ್‌ಷನ್ ಆಫೀಸರು, ಹಾಗೂ ಗ್ರಾಮ ಸೇವಕರು ಇವರು ಯಾವರೀತಿ ಅಂಕೆಗಳನ್ನು ಶೇಖರಿಸುತ್ತಾರೋ ಅದರಂತೆ ಅವರು ಕೊಟ್ಟ ಅಂಕೆ ಅಂಶಗಳನ್ನು ತೆಗೆದುಕೊಂಡು ಬರುತ್ತಾರೆ. ಈ ಸಂದರ್ಭದಲ್ಲಿ ಇವರು ನಿಜವಾದ ಅಂಕೆ ಅಂಶಗಳನ್ನು ಕೊಡುತ್ತಾರೆಯೇ ಎನ್ನುವುದನ್ನು ನಾವು ಯೋಚನೆ ಮಾಡಬೇಕಾಗಿದೆ. ಇದಕ್ಕೆ ಕಾರಣ ಇಷ್ಟು ಬಹಳ ದಿವಸಗಳಿಂದ ನಾವು ನಮ್ಮ ಪ್ಲಾನುಗಳಿಗಾಗಿ ಎಷ್ಟೋ ಸ್ಕೀಮುಗಳನ್ನು ಹಾಕಿದ್ದರೂ ಅದಕ್ಕಾಗಿ ನಿಗದಿಯಾದ ಹಣ ಖರ್ಚಾಗಲಿಲ್ಲ ಎಂದು ಹೇಳುತ್ತಿರುವುದನ್ನು ಕೇಳುತ್ತಿದ್ದೇವೆ. ಮೊದಲನೆ ಯೋಜನೆಗೆ ನೂರು ಕೋಟಿ ರೂಪಾಯಿಗಳಷ್ಟು ಮಾತ್ರ ಖರ್ಚಾಯಿತು ಎರಡನೇ ಯೋಜನೆಯಲ್ಲಿ ಇಷ್ಟು ಖರ್ಚಾಯಿತು ಎಂದು ಹೇಳುವುದಕ್ಕಿಂತ ಈ ಖರ್ಚು ಹೇಗೆ ಆಗುತ್ತಿದೆ ಅದರ ಬಗ್ಗೆ ನಿಗಾ ಕೊಡಬೇಕು ಎಷ್ಟು ಮಟ್ಟಿನ Physical Targets ಬಂದಿವೆ, ನಾವು ಖರ್ಚುಮಾಡಿದ್ದ ಹಣಕ್ಕೆ ಸರಿಯಾದ ಪ್ರತಿಫಲ ದೊರಕಿದೆಯೇ ಎನ್ನುವುದರ ಕಡೆಗೆ ಸರ್ಕಾರದಲ್ಲಿರುವ ಈ ಇಲಾಖೆಯ ಅಧಿಕಾರಿಗಳು ಯೋಚನೆ ಮಾಡುತ್ತಿಲ್ಲ ಎಂದು ಇಲ್ಲಿ ಹೇಳಿದರೆ ಅದು ತಪ್ಪಾಗಲಾರದು. ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದಯ್ಯನವರು ಈಗ ಹೇಳಿದ ಹಾಗೆ ಚಾಮರಾಜನಗರದ ತಾಲ್ಲೂಕಿಗೆ ಡೆಪ್ಯೂಟೀ ಕಮೀಷನರವರು ಭೇಟಿಕೊಟ್ಟಾಗ ಆ ತಾಲ್ಲೂಕಿನ ಹಣ ಇನ್ನೂ ಖರ್ಚಾಗಲಿಲ್ಲ ಎಂದು ಅಲ್ಲಿದ್ದ ಬಿ. ಡಿ. ಓ. ಅಧಿಕಾರಿಗಳು ಆಗ ಹೇಳಿದರು. ಹಾಗೆ ಆ ಸದಸ್ಯರು ಹೇಳಿದಂತೆ ಕೋಲಾರಕ್ಕೆ ಒಂದು D. C. Farm Experts Plan ನ ಸಂದರ್ಭದಲ್ಲಿ ಅಲ್ಲಿಗೆ ಡೆಪ್ಯೂಟಿ ಕಮೀಷನರುಗಳು ಬಂದಿದ್ದಾಗ ಆ ಸಭೆಯಲ್ಲಿ ಹೀಗೆ ಹೇಳಿದ್ದಾರೆ.

"The Deputy Commissioner was of the opinion that most officials did not take pains even to explain to the farmers what they should do to improve their methods. In certain cases, the officials themselves do not know their own job."

ಈ ರೀತಿ ಡೆಪ್ಯೂಟಿ ಕಮಿಷನರುಗಳು ಆಗಿಂದಾಗ್ಗೆ Sputniks ಬಿಟ್ಟ ಹಾಗೆ ಸ್ಟೇಟುಮೆಂಟುಗಳನ್ನು ಕೊಡುತ್ತಾರೆ. ಬಹುಶಃ ಇದಕ್ಕೆ ಕಾರಣ ಇಷ್ಟು ಅಧಿಕಾರಿಗಳು ಟೂರು ಹೋಗುತ್ತಾರೆ, ಅಲ್ಲಿರುವ ಗ್ರಾಮಸೇವಕರು ಇರುತ್ತಾರೆ ಅವರು ಕೊಟ್ಟ ಫಿಗರ್ಸ್‌ನ್ನೂ ತೆಗೆದುಕೊಂಡು ಬರುತ್ತಾರೆ. ಅವರೇನು ಕೆಲಸ ಮಾಡುತ್ತಾರೆ ಅಥವಾ ಮಾಡಿದ್ದಾರೆ ಎನ್ನುವುದನ್ನು ನೋಡುವುದಕ್ಕೂ ಹೋಗುವುದಿಲ್ಲ. ಡೆಪ್ಯೂಟಿ ಕಮಿಷನರುಗಳು District Agricultural Offices ಗೆ ಬರೆಯುತ್ತಾರೆ ಆ ಅಧಿಕಾರಿಗಳು ಹಳ್ಳಿಗಳಿಗೆ ಹೋದಾಗ ಅಲ್ಲಿರುವ ಅಧಿಕಾರಿಗಳಿಂದ ಎಷ್ಟೆಷ್ಟರ ಮಟ್ಟಿಗೆ ಕೆಲಸವಾಗಿದೆ, ಅದರಲ್ಲಿ ಸತ್ಯಾಂಶ ಇದೆಯೇ ಎನ್ನುವುದನ್ನು ಹೋಗಿ ನೋಡುವುದಿಲ್ಲ. ವರ್ಷದ ಕೊನೆಗೆ ತಾಲ್ಲೂಕು ಅಡ್ವೈಜರಿ ಕಮಿಟಿಗಳ ಮುಂದೆ ದೊಡ್ಡ ದೊಡ್ಡ ಹಣಕಾಸಿನ ಸ್ಟೇಟುಮೆಂಟು ಬರುತ್ತದೆ. ಅದರಿಂದ ಏನೂ ಪ್ರಯೋಜನವಾಗುವುದಿಲ್ಲ. ಸಂಸ್ಥಾನದ ಅಭಿವೃದ್ಧಿಯ ಕಡೆಗೆ ನಿಗಾ ಕೊಡುತ್ತಿಲ್ಲ. ಯೋಜನೆಗಳಿಗಾಗಿ ಒದಗಿಸಿರುವ ಹಣವನ್ನು ಸರಿಯಾಗಿ ಖರ್ಚು ಮಾಡುತ್ತಾರೆಯೇ ಇಲ್ಲವೇ ಎನ್ನುವುದಕ್ಕೆ ಅಲ್ಲಿಗೆ ಹೋಗಿ ನೋಡುವುದಿಲ್ಲ ಇದರಿಂದ ಅಧಿಕಾರಿಗಳು ಅವರಿಗೆ ಇರುವ ಕರ್ತವ್ಯವನ್ನೂ ಸರಿಯಾಗಿ ನಿರ್ವಹಿಸುತ್ತಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಯಾವಾಗಲೂ ಒಂದು ಪ್ರೋಗ್ರೆಸ್ಸನ್ನು ನೋಡಬೇಕಾದರೆ, ಹಳ್ಳಿಯಲ್ಲಿರುವ ರೈತರು ಅವರು ಮಾಡುವ ಪ್ರೊಡಕ್ಷನ್ನು ಹೇಗಿದೆ, ಅವನು ಬೆಳೆ ಬೆಳೆಯತಕ್ಕ ಕ್ರಮ ಸರಿಯಾಗಿದೆಯೇ, ಉತ್ತಮವಾದ ಬೀಜಗಳನ್ನು ಉಪಯೋಗಿಸಿಕೊಂಡು ಉತ್ತಮವಾದ ಬೆಳೆಯನ್ನು ಬೆಳೆಯುತ್ತಿದ್ದಾನೆಯೇ ಎನ್ನುವುದನ್ನು ತಾಲ್ಲೂಕಿಗೆ ಅಧಿಕಾರಿಗಳು ಇನ್ಸ್‌ಪೆಕ್ಷನ್ನಿಗೆ ಹೋದಾಗ ನೋಡಿಕೊಂಡು ಬಂದರೆ ಆಗ ಈ ಪ್ರೋಗ್ರೆಸ್ಸಿನಲ್ಲಿ ಒಂದು ನಂಬಿಕೆ

(ಶ್ರೀ ಎಂ. ಸಿ. ಬಸಪ್ಪ)

ಬರುತ್ತದೆ. ಆದರೆ ಈಗ ಅಧಿಕಾರಿಗಳು ಬ್ಲಾಕುಗಳಲ್ಲಿ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಅವರು ಕಳುಹಿಸುವ ವರದಿಗಳ ಮೇಲೆ ಸರ್ಕಾರ ತಿಳಿದುಕೊಂಡರೆ ಅವೆಲ್ಲಾ ಬರೀ ಪೇಪರು ರಿಕಾರ್ಡ್ಸ್‌ಗಳಾಗುತ್ತವೆ. ಇದರಿಂದ ಜನಕ್ಕೆ ಏನು ಫಲ ದೊರೆಯುತ್ತಿದೆ, ಅಸಿಸ್ಟೆನ್ಸು ಎಷ್ಟು ಕೊಡಬಹುದು ಎಂದು ಅಧಿಕಾರಿಗಳು ಕೊಡುವ ಕಾಗದದ ಆಧಾರದ ಮೇಲೆ ನಂಬಿಕೊಂಡು ಮಾಡಿದರೆ ಸರಿಯಾಗಿರುವುದಿಲ್ಲ. ಇಂತಹವರ ಕೈಯ್ಯಲ್ಲಿ ಆಗಿದ್ದರೆ ಸರ್ಕಾರದವರು ಇವರಿಂದ ನಿಜವಾಗಿಯೂ ಸರಿಯಾದ ಪ್ರೋಗ್ರೆಸ್ಸು ಮಾಡಿದ ಹಾಗಾಗುತ್ತದೆಯೇ ? ಇವೊತ್ತು ಆಫೀಸಿನಲ್ಲಿ ಕುಳಿತುಕೊಂಡು ಎಷ್ಟು ಹಣ ಖರ್ಚಾಗಿದೆ, ಎಷ್ಟು ಆಗಿಲ್ಲ ಎಂದು B. D. O. ಆಫೀಸರು ಬರೆದು ಕಳುಹಿಸುತ್ತಾರೆ. ಅವರು ಚೆನ್ನಾಗಿ ಕೆಲಸಮಾಡಿದ್ದಾರೆ ಎಂದು ಆ ವರದಿ ನೋಡಿಕೊಂಡು ಶಹಬಾಷ್‌ಗಿರಿ ಕೊಡುವಂತಹ ಮನೋಭಾವ ಬಹುಶಃ ನಮ್ಮ ಅಧಿಕಾರಿಗಳಲ್ಲಿ ಬದಲಾವಣೆಯಾಗದಿದ್ದರೆ, ನಮ್ಮ ಜನತೆಗೆ ಅನೇಕ ಕಷ್ಟದ ಪರಿಸ್ಥಿತಿ ಬರುತ್ತದೆ. ರೈತರಿಗೆ ಹೇಗೂ ಮಾತನಾಡಲು ಬರುವುದಿಲ್ಲ ಎಂದು ಇಷ್ಟುಮಟ್ಟಿಗೆ ಸಾಧನೆ ಸಾಧಿಸಿದ್ದೇವೆ ಎಂದು ಹೇಳಿದರೆ ಬಹುಶಃ ಇದೊಂದು ತಪ್ಪು ಭಾವನೆಯಾಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ.

ಈ ಮೊದಲು ನಾನು ಒಂದು ಸಲಹೆ ಮಾಡಿದ್ದೇನೆ. ಅದಕ್ಕೆ ಸರ್ಕಾರ ಉತ್ತರ ಕೊಟ್ಟಿಲ್ಲ. ವ್ಯವಸಾಯ ಇಲಾಖೆಯಲ್ಲಿ ಡಿಸ್ಟ್ರಿಕ್ಟ್ ಅಗ್ರಿಕಲ್ಚರಲ್ ಆಫೀಸರ್ ಮತ್ತು ಗ್ರಾಮಸೇವಕ ಇವರಲ್ಲಿ ನೇರವಾಗಿ ಸಂಬಂಧವಿಲ್ಲ. ಸರ್ಕಾರದ ಧೋರಣೆ ಏನಿದೆ ಎನ್ನುವುದನ್ನು ರೈತರಿಗೆ ತಿಳಿಸಿ ಹೇಳತಕ್ಕಂಥವನು ಗ್ರಾಮಸೇವಕ. ಈ ಗ್ರಾಮಸೇವಕನ ಕೆಲಸ ಸರಿಯಾಗಿ ನಡೆಯುವುದಕ್ಕೆ ಗಮನ ಕೊಡಬೇಕಾದುದು ಅಗತ್ಯ. ಈ ಇಲಾಖೆಯಲ್ಲಿ ಹಣ ಖರ್ಚಾಗುತ್ತದೆ. ಆದರೆ ಎಷ್ಟು ಪ್ರಗತಿಯಾಗಿದೆ ನೋಡಬೇಕಾದುದು ಅಗತ್ಯ. ಅಧಿಕಾರಿಗಳು ಟೂರ್ ಮೇಲೆ ಹೋದಾಗ್ಗೆ ಹಳ್ಳಿಗಳಿಗೆ ಹೋಗಿ ನಮ್ಮ ಗುರಿ ಸಾಧನೆಯಾಗುತ್ತಿದೆಯೇ, ಅದರಲ್ಲಿ ಏನಾದರೂ ಬದಲಾವಣೆ ಮಾಡುವುದು ಅಗತ್ಯವಾಗಿದೆಯೇ ಎನ್ನುವುದನ್ನು ನೋಡಿ ಆಲೋಚನೆ ಮಾಡಬೇಕು. ಅಧಿಕಾರಿಗಳು ಈ ವಿಚಾರದಲ್ಲಿ ನಿಕಟವಾದ ಸಂಬಂಧವಿಟ್ಟುಕೊಳ್ಳುವುದು ಅಗತ್ಯ ಎಂದು ಸಲಹೆ ಕೊಡುತ್ತೇನೆ.

ಇನ್ನು ಪಶುಸಂಗೋಪನ ವಿಷಯದ ಬಗ್ಗೆ ಕೆಲವು ಸೂಚನೆಗಳಿವೆ. ಇದರಲ್ಲಿ ಮುಖ್ಯವಾಗಿ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಮುಖಾಂತರ ತಳಿ ಸುಧಾರಣೆ ಮಾಡಲು ಪ್ರಯತ್ನ ನಡೆದಿದೆ. ಆದರೆ ಈ ಕೆಲಸ ನಿಧಾನವಾಗುತ್ತಿದೆ. ನಮ್ಮ ತಾಲ್ಲೂಕಿನಲ್ಲಿ ಕಳೆದ ಏಳು ವರ್ಷಗಳಿಂದ ಕೇಳಿಕೊಳ್ಳುತ್ತಿದ್ದರೂ ಕೂಡ ಇನ್ನೂ ಒಂದು ಕೃತಕ ಗರ್ಭಧಾರಣೆ ಕೇಂದ್ರ ಪ್ರಾರಂಭವಾಗಿಲ್ಲ. ಮೊದಲು ಬಿಲ್ಡಿಂಗ್ ಇಲ್ಲ ಎಂದು ಹೇಳಿದರು. ಬಿಲ್ಡಿಂಗ್ ಆಯಿತು. ರೆಫ್ರಿಜಿರೇಟರ್ ತರಿಸಬೇಕೆಂದರು, ಅದನ್ನು ತರಿಸಲಾಯಿತು. ಕರೆಂಟ್ ಇಲ್ಲ ಎಂದು ಹೇಳಲು ಕರೆಂಟ್ ತಂದದ್ದಾಯಿತು. ಇಷ್ಟೆಲ್ಲ ಆದಮೇಲೆ ಮೈಕ್ರೋಸ್ಕೋಪ್ ಇಲ್ಲ. ಆದ್ದರಿಂದ ಪ್ರಾರಂಭ ಮಾಡುವುದು ಸಾಧ್ಯವಿಲ್ಲ ಎಂದು ಹೇಳುತ್ತಿದ್ದಾರೆ. ಹೀಗೆ ಒಂದು ಆದಮೇಲೆ ಮತ್ತೊಂದನ್ನು ಯೋಚನೆ ಮಾಡುತ್ತಾರೆ. ಏನೇನು ಬೇಕೋ ಎನ್ನುವುದನ್ನು ಏಕಕಾಲಕ್ಕೆ ತಿಳಿಸುವುದಿಲ್ಲ. ಹೀಗೆ ಮಾಡಿದರೆ ಒಂದು ಕೇಂದ್ರ ಪ್ರಾರಂಭಿಸಲು ಹತ್ತು ವರ್ಷಗಳಾದರೂ ಬೇಕು. ಸರಕಾರ ಹಣ ಒದಗಿಸುತ್ತಾರೆ. ಆದರೆ ಕೆಲಸ ಕಾರ್ಯಗಳು ನಿಧಾನವಾಗುತ್ತಿವೆ. ಇದು ಸರಿಯಲ್ಲ. ನಮ್ಮ ಕಂದಾಯ ಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ಗೋಸಂಪತ್ತನ್ನು ಅಭಿವೃದ್ಧಿಪಡಿಸುವುದಕ್ಕೆ ಪರದೇಶಗಳಿಗೆ ಹೋಗಿ ಅರಿತುಕೊಂಡು ಬಂದಿದ್ದಾರೆ. ಗೋಸಂಪತ್ತು ಅಭಿವೃದ್ಧಿಪಡಿಸಲು ಅವರಿಗೆ ಬಹಳ ಆಸಕ್ತಿಯಿದೆ. ನಮಗೆ ಹಾಲು ಬೇಕಾಗಿರುವುದು ಮುಖ್ಯ ಅಂಶ. ಒಳ್ಳೇ ತಳಿ ಅಭಿವೃದ್ಧಿಮಾಡಲು ಸರಕಾರ ಗಮನ ಕೊಡಬೇಕೆಂದು ಸರಕಾರವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕೋಆಪರೇಟಿವ್ ಇಲಾಖೆ ಬಗ್ಗೆ ಅನೇಕ ಸ್ನೇಹಿತರು ಸಲಹೆ ಕೊಟ್ಟಿದ್ದಾರೆ. ನಾನು ಒಂದು ಸೂಚನೆ ಮಾಡಲು ಬಯಸುತ್ತೇನೆ. ರೈತರಿಗೆ ಸಾಲ ದೊರೆಯಲು ಸಹಾಯ ಮಾಡುವುದಕ್ಕಾಗಿ ಹಳ್ಳಿಗಳಲ್ಲಿ ಸೊಸೈಟಿಗಳು ಪ್ರಾರಂಭವಾಗಬೇಕು. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಪ್ರಾರಂಭವಾದ ಸೊಸೈಟಿಗಳು ಮೂರು ವರ್ಷಗಳಲ್ಲಿ ನಿಂತುಹೋಗುತ್ತವೆ. ಈ ರೀತಿ ಸೊಸೈಟಿಗಳು ನಿಂತುಹೋಗುವುದು ಸರಿಯಲ್ಲ. ಇದರಿಂದ ರೈತರಿಗೆ ಅನುಕೂಲವಾಗುವುದಿಲ್ಲ. ಇಂಥ ಸೊಸೈಟಿಗಳಲ್ಲಿ ಒಬ್ಬ ಜವಾಬ್ದಾರಿ ಮನುಷ್ಯ ಇರಬೇಕಾದುದು ಅಗತ್ಯ. ಒಬ್ಬ ಪೇಡ ಸೆಕ್ರೆಟರಿ ಇದ್ದರೆ ಸದಸ್ಯರು ಡಿಫಾಲ್ಟರ್ ಆಗುವುದಿಲ್ಲ. ಕೆಲಸ ಕಾರ್ಯಗಳು ಸುಗಮವಾಗಿ ನಡೆಯುತ್ತವೆ. ಸಹಕಾರ ಸಂಘಗಳು ಚೆನ್ನಾಗಿ ಬೆಳೆದು ಅಭಿವೃದ್ಧಿ ಹೊಂದುವಹಾಗೆ ಮಾಡಬೇಕಾದುದು ಅಗತ್ಯ. ಕೋಆಪರೇಟಿವ್ ಸೊಸೈಟಿ ಮುಖಾಂತರ ರೈತನಿಗೆ ಸಾಲ ಕೊಡಬೇಕೆಂಬ ಒಳ್ಳೇ ತೀರ್ಮಾನ ಎರಡು ವರ್ಷಗಳ ಹಿಂದೆ ಮಾಡಲಾಗಿದೆ. ಆದರೆ ತಕಾವಿ ಸಾಲ ಕೊಡುವುದು ರೆವಿನ್ಯೂ ಏಜೆನ್ಸಿ ಮೂಲಕ ನಡೆಯುತ್ತಿದೆ.

ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ, ತಾಲ್ಲೂಕ ಬೋರ್ಡಿನಿಂದ ಸಾಲ ಕೊಡಲಾಗುತ್ತಿದೆ. ಸಹಕಾರ ಸಂಘಗಳು ಸಾಲ ಕೊಡಬೇಕೆಂಬ ತೀರ್ಮಾನ ಈ ಹಿಂದೆ ಮಾಡಿದೆ.

ಆದುದರಿಂದ ಸಹಕಾರಿ ಸಂಘಗಳಲ್ಲಿ ನಂಬಿಕೆ ಇಟ್ಟು ಅವುಗಳನ್ನು ಬೆಳೆಸುವುದಕ್ಕೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಸಹಕಾರಿ ಸಂಘಗಳು ಚೆನ್ನಾಗಿ ಕೆಲಸ ಮಾಡಬೇಕಾದರೆ ಜವಾಬ್ದಾರಿ ವಹಿಸಿ ಕೊಳ್ಳುವ ಒಬ್ಬ ಹೆಡ್ ಸರ್ವೆಂಟ್ ಇರಬೇಕಾದುದು ಅಗತ್ಯ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕೆಲಸ ಕಾರ್ಯ ಮಾಡತಕ್ಕಂಥ ಸಹಕಾರ ಸಂಘಗಳ ಸ್ಥಿತಿ ಸಮಾಧಾನಕರವಾಗಿಲ್ಲ ಎಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಇವುಗಳನ್ನು ಸರಿಯಾಗಿ organise ಮಾಡಬೇಕು. ಮತ್ತು ಉತ್ಪತ್ತಿ ಹೆಚ್ಚು ತರುವ ಹಾಗೆ ಮಾಡಬೇಕಾದುದು ಅಗತ್ಯ. ರೈತರಿಗೆ ಅನುಕೂಲವಾಗಬೇಕು. ಜವಾಬ್ದಾರಿ ಇದ್ದಂಥ ಹೆಡ್ ಸರ್ವೆಂಟ್ ಇದ್ದರೆ ಲೋಪ ದೋಷಗಳು ಬರುವುದಿಲ್ಲ. ಕೆಲಸ ಕಾರ್ಯ ಮಾಡಲು ಅನುಕೂಲ ವಾಗುತ್ತದೆ. ಈ ವರ್ಷ ಕೋ ಆಪರೇಟಿವ್ ಜಾಯಿಂಟ್ ಫಾರ್ಮಿಂಗ್ ಸೊಸೈಟೀಸ್‌ಗಳನ್ನು ರಿಜಿಸ್ಟರ್ ಮಾಡಿದ್ದಾರೆ. ಅನೇಕ ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳನ್ನು ಒಳ್ಳೇ ಉದ್ದೇಶವಿಟ್ಟು ಕೊಂಡು ಮಾಡಲಾಗಿವೆ. ಖೋತಾ ಸೂಚನೆಗಳಲ್ಲಿ ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳು ಅಯಶಸ್ವಿಯಾಗಿವೆ ಎಂದು ಹೇಳಿರುವುದು ತಪ್ಪು ಅಭಿಪ್ರಾಯವಾಗಿದೆ. ಅಲ್ಲಿ ಇಲ್ಲಿ ಒಂದೆರಡು ಕಡೆ ತಪ್ಪು ಕಂಡುಬಂದಿರಬಹುದು. ಒಟ್ಟಿನಲ್ಲಿ ಕೆಲಸ ಕಾರ್ಯಗಳು ಸರಿಯಾಗಿ ನಡೆಯುತ್ತಿವೆ. ಇದಲ್ಲದೆ ಅಚ್ಚುಕಟ್ಟಾಗಿ ಕೆಲಸ ಕಾರ್ಯಗಳು ನಡೆಯುವುದಕ್ಕೆ ಹಣದ ಸಹಾಯ ಸರ್ಕಾರ ಮಾಡಬೇಕೆಂದು ಹೇಳುತ್ತೇನೆ.

3-30 P.M.

ಅರಣ್ಯ ಇಲಾಖೆಯಲ್ಲಿ ಒಂದೇ ಒಂದು ಬೇಡಿಕೆಯನ್ನು ಸರ್ಕಾರದವರ ಮುಂದಿಡಬೇಕೆಂದು ಇದ್ದೇನೆ. ಫಾರೆಸ್ಟ್ ಇನ್‌ಕಂ ಅನ್ನು ತಾಲ್ಲೂಕುಬೋರ್ಡಿಗೆ ಕೊಡಬೇಕು ಎನ್ನುವ ವಿಚಾರದಲ್ಲಿ ಒಂದು ಅಭಿಪ್ರಾಯವನ್ನು ನಾನು ಈ ದಿವಸ ಹೇಳುತ್ತೇನೆ. ಸರ್ಕಾರದವರು ಮಾಡತಕ್ಕ ಕೆಲಸಕಾರ್ಯ ಗಳನ್ನು ತಾಲ್ಲೂಕು ಬೋರ್ಡಿನವರು ಮಾಡುವುದಾದರೆ ಆಗ ಫಾರೆಸ್ಟ್ ಇಲಾಖೆಯವರು ಫಾರೆಸ್ಟಿನಿಂದ ಬರತಕ್ಕ ಇನ್‌ಕಂ ಅನ್ನು ತಾಲ್ಲೂಕು ಬೋರ್ಡುಗಳಿಗೆ ಕೊಡಬಹುದು. ಈ ವಿಷಯದಲ್ಲಿ ಒಂದೇ ಒಂದು ಉದಾಹರಣೆಯನ್ನು ಕೊಡುತ್ತೇನೆ. ಹೆಗ್ಗಡದೇವನಕೋಟೆಯ ತಾಲ್ಲೂಕನ್ನು ಉದಾಹರಣೆಗೆ ತೆಗೆದುಕೊಳ್ಳುವುದಾದರೆ ಶೇಕಡಾ 75 ಭಾಗ ಅಲ್ಲಿ ಅರಣ್ಯ ಪ್ರದೇಶವಿದೆ. ಶೇಕಡಾ 25 ಭಾಗ ಮಾತ್ರ ಲ್ಯಾಂಡ್ ರೆವಿನ್ಯೂ ಕೊಡತಕ್ಕ ಅಗ್ರಿಕಲ್ಚರಲ್ ಲ್ಯಾಂಡ್ ಇರುತ್ತದೆ. ಶೇಕಡಾ 25 ಭಾಗದ ಪ್ರದೇಶದಲ್ಲಿ ಬರತಕ್ಕ ಲ್ಯಾಂಡ್‌ರೆವಿನ್ಯೂವಿನ ಶೇಕಡಾ 20 ರಷ್ಟು ಕಂದಾಯವನ್ನು ತಾಲ್ಲೂಕು ಬೋರ್ಡುಗಳಿಗೆ ಕೊಡುತ್ತಾರೆ. ತಾಲ್ಲೂಕು ಬೋರ್ಡಿನಲ್ಲಿ ಒಂದು ವರ್ಷಕ್ಕೆ 5 ಸಾವಿರ 10 ಸಾವಿರ ರೂಪಾಯಿಗಳ ಸಂಬಳವನ್ನು ಕೊಡತಕ್ಕ ಸ್ಟಾಫ್ ಇದೆ. ಆದ್ದರಿಂದ ಕೆಲವು ಸಂದರ್ಭಗಳಲ್ಲಿ ಆ ಸ್ಟಾಫಿಗೆ ಸಂಬಳವನ್ನು ಕೊಡುವುದಕ್ಕೆ ಕೂಡ ಹಣ ಸಾಲದೆ ಬರುವ ಸನ್ನಿವೇಶ ಬರಬಹುದು. ಒಂದು ಒಂದೂವರೆ ಲಕ್ಷ ಎಕರೆಗಳಲ್ಲಿ ಕಾಡನ್ನು ಬೆಳೆಸಿದ ಪಕ್ಷದಲ್ಲಿ ಅಲ್ಲಿ ಇನ್ನು ಉಳಿದಿರತಕ್ಕ ಅಗ್ರಿಕಲ್ಚರಲ್ ಲ್ಯಾಂಡ್ ಪ್ರದೇಶದಲ್ಲಿ ಲ್ಯಾಂಡ್ ರೆವಿನ್ಯೂ ಕಲೆಕ್ಟ್ ಮಾಡಿ ಅದರಲ್ಲಿ 20 ಪರ್ಸೆಂಟ್ ತಾಲ್ಲೂಕು ಬೋರ್ಡಿಗೆ ಕೊಡುತ್ತಾರೆ. ಕೆಲವು ಸಂದರ್ಭಗಳಲ್ಲಿ ತಾಲ್ಲೂಕು ಬೋರ್ಡುಗಳಲ್ಲಿ ಅಲ್ಲಿನ ಖರ್ಚು ವೆಚ್ಚಗಳಿಗೆ ಹಣ ಸಾಲದೆ ಬರುವುದರಿಂದ ಕಾಡು ವಿಶೇಷವಾಗಿರುವ ಪ್ರದೇಶದಲ್ಲಿ ಕಾಡಿನಿಂದ ಬರತಕ್ಕ ಉತ್ಪತ್ತಿಯಲ್ಲಿ ಶೇಕಡಾ 20 ಭಾಗವನ್ನು ತಾಲ್ಲೂಕು ಬೋರ್ಡಿಗೆ ಕೊಡತಕ್ಕಂಥ ಒಂದು ಏರ್ಪಾಡನ್ನು ಮಾಡಿದರೆ ಅಲ್ಲಿ ಹಣಕಾಸಿನ ಪರಿಸ್ಥಿತಿಯನ್ನು ಅಭಿವೃದ್ಧಿ ಮಾಡಿದಂತಾಗುತ್ತದೆ. ಆ ರೀತಿ ಮಾಡುವುದರಿಂದ ತಾಲ್ಲೂಕು ಬೋರ್ಡಿನವರು ಉತ್ತಮ ಮಟ್ಟದಲ್ಲಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಇಷ್ಟು ಹೇಳಿ ಅಧ್ಯಕ್ಷರು ನನಗೆ ಮಾತನಾಡು ವುದಕ್ಕೆ ಅವಕಾಶ ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—ನೂತನ ಅಧ್ಯಕ್ಷರಿಗೆ ವಂದಿಸಿ ನನ್ನ ಒಂದೆರಡು ಮಾತುಗಳನ್ನು ಈ ಸಭೆಯ ಮುಂದೆ ಆಡಲು ಅಪೇಕ್ಷಿಸುತ್ತೇನೆ. ಈ ವ್ಯವಸಾಯ ಇಲಾಖೆ ಬಹಳ ಕಾಲದಿಂದ ನಮ್ಮ ದೇಶದಲ್ಲಿದೆ. ಇದರಿಂದ ರೈತನಿಗೆ ಎಷ್ಟು ಪ್ರಯೋಜನ ಆಗಬೇಕೋ ಅಷ್ಟು ಪ್ರಯೋಜನ ನಿಜವಾಗಿಯೂ ಆಗುತ್ತಿಲ್ಲ. ಅದಕ್ಕೆ ಕಾರಣವೇನೆಂದರೆ ಅಧಿಕಾರಿಗಳಲ್ಲಿ ಏನೊಂದು ಮನೋಭಾವನೆ ಬಂದಿದೆಯೆಂದರೆ ಯಾವ ಆಫೀಸಿಗೆ ಹೋದರೂ ಸೀನಿಯಾರಿಟಿ ಪಟ್ಟಿ ಸರಿಯಾಗಿಲ್ಲ. ನನಗೆ ಟ್ರಾನ್ಸ್‌ಫರ್ ಕ್ಯಾನ್ಸಲ್ ಮಾಡಿ ಎಂದು ಹೇಳತಕ್ಕದ್ದೇ ಮೊದಲನೆಯ ಉತ್ತರವೇ ಹೊರತು ನಾವು ಹೋದ ಕೆಲಸಗಳಿಗೆ ಖಂಡಿತಾ ಅವರು ಗಮನ ಕೊಡುವುದಿಲ್ಲ. ಬೊಂಬಾಯಿ ಸರ್ಕಾರ ದಲ್ಲಿದ್ದವರು ನಾವು ಬೊಂಬಾಯಿ ಸರ್ಕಾರದಲ್ಲಿದ್ದಾಗ ಎಷ್ಟೋ ಚೆನ್ನಾಗಿತ್ತು. ಇಲ್ಲಿಗೆ ಬಂದು ಹೀಗೆ

(ಶ್ರೀ ಕೆ. ಪಿ. ರೇವಣ್ಣ ಸಿದ್ಧಪ್ಪ)

ಆಯಿತು ಎಂದು ಹೇಳುತ್ತಾರೆ. ಮೈಸೂರು ನೌಕರರು ಹಳೆಯ ಮೈಸೂರು ಇದ್ದಾಗ ಎಷ್ಟೋ ಚೆನ್ನಾಗಿತ್ತು. ಬೊಂಬಾಯಿ ಸರ್ಕಾರದಲ್ಲಿದ್ದವರು ಇಲ್ಲಿಗೆ ಬಂದು ಹೀಗಾಯಿತು ಎಂದು ಹೇಳುತ್ತಾರೆ. ಇದು ನಮಗಂತೂ ಅರ್ಥವೇ ಆಗುವುದಿಲ್ಲ. ನಾವು ಇದನ್ನು ತಿಳಿದುಕೊಳ್ಳುವುದಕ್ಕೆ ಆಗ ವುದೂ ಇಲ್ಲ. ಈಗ ಆಫೀಸುಗಳಲ್ಲಿ ನೌಕರರುಗಳಿಗೆ ಉಂಟಾಗಿರತಕ್ಕ ತೊಂದರೆಗಳನ್ನು ಬಗೆಹರಿಸದೇ ಹೋದರೆ ಇಲಾಖೆಗಳಲ್ಲಿ ಯಾವ ಕೆಲಸಗಳೂ ಆಗುವುದಿಲ್ಲ. ನೌಕರರು ಸರಿಯಾಗಿ ಕೆಲಸವನ್ನೂ ಮಾಡುವುದಿಲ್ಲ. ವ್ಯವಸಾಯದ ಇಲಾಖೆಯಲ್ಲಿ ಮಹತ್ತರವಾದ ಯೋಜನೆಗಳನ್ನು ಸಾಧನೆ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಇದು ಕೆಲವು ಸಂದರ್ಭಗಳಲ್ಲಿ ತದ್ವಿರುದ್ಧವಾಗಿದೆ. ಉದಾಹರಣೆಗೆ ಹೇಳುವುದಾದರೆ ತೆಂಗಿನಕಾಯಿ ಬೀಜವನ್ನು ಕೊಳ್ಳುತ್ತಿದ್ದಾರೆ. ಅದು ಒಳ್ಳೆಯ ಬೀಜವೇ ಹೇಗೆ ಎಂಬುದನ್ನು ಏನೂ ನೋಡುವುದಿಲ್ಲ. ಒಂದು ಸಾವಿರಕ್ಕೆ 350 ರೂಪಾಯಿನಂತೆ ಯಾರು ಬೇಕಾದರೂ ತಂದುಹಾಕಬಹುದು. ಇಂಥಾ ತೆಂಗಿನಕಾಯಿನ ಬೀಜವನ್ನು ಹೊರಗಡೆ ಕಳುಹಿಸುವ ಸಂದರ್ಭದಲ್ಲಿ ಈ ರೀತಿ ಮಾಡಿದರೆ ಇಲಾಖೆಯಿಂದ ಕಳುಹಿಸುವುದಕ್ಕೆ ಮಾನ್ಯತೆ ಬರುತ್ತದೆಯೇ ಎಂಬುದನ್ನು ಆಲೋಚನೆ ಮಾಡಬೇಕು. ವ್ಯವಸಾಯಕ್ಕೆ ಬೇಕಾದ ಉಪಕರಣಗಳು ಎಂದರೆ ಈಗ ಒಬ್ಬ ಸಾಮಾನ್ಯ ಮನುಷ್ಯ ಒಂದು ಟ್ರ್ಯಾಕ್ಟರನ್ನು ಕೊಂಡುಕೊಳ್ಳಬೇಕಾದರೆ ಅವನು 70 ಸಾವಿರ ರೂಪಾಯಿಗಳ ಸಾಲ್ವೆನ್ಸಿ ಕೊಡಬೇಕಾಗುತ್ತದೆ. 70 ಸಾವಿರ ರೂಪಾಯಿಗಳ ಒಂದು ಆಧಾರವನ್ನು ಕೊಡತಕ್ಕ ರೈತರು ನಮ್ಮ ದೇಶದಲ್ಲಿ ಯಾರಾದರೂ ಇದ್ದಾರೆಯೇ ? ಅವನೇನಾದರೂ ಒಂದು ಸಾರಿ ಮಂತ್ರಿಯಾಗಿದ್ದರೆ ಒಂದು ಲಕ್ಷ, 40 ಸಾವಿರ, 20 ಸಾವಿರ ರೂಪಾಯಿಗಳ ಸಾಲ್ವೆನ್ಸಿಯನ್ನು ಅವನು ಕೊಡಬಹುದು. ಸಣ್ಣಪುಟ್ಟ ರೈತರಿಗೆ ಅನುಕೂಲವಾಗತಕ್ಕ ಸಣ್ಣಸಣ್ಣ ಟ್ರ್ಯಾಕ್ಟರುಗಳನ್ನು ಸಾಲದ ರೂಪದಲ್ಲಿ ರೈತರಿಗೆ ಕೊಡಲು ಸೊಸೈಟಿಗಳಿಗೆ ಒಂದೆರಡು ಟ್ರ್ಯಾಕ್ಟರುಗಳನ್ನು ಕೊಡಬೇಕು. ಲಾಭ ನಷ್ಟ ಇಲ್ಲದ ರೀತಿಯಲ್ಲಿ ಟ್ರ್ಯಾಕ್ಟರುಗಳನ್ನು ಉಪಯೋಗಿಸಬೇಕೆಂದು ಸರ್ಕಾರದ ಧ್ಯೇಯ ಇದೆ. ಈಗ ಯಾರಾದರೂ ಒಬ್ಬ ರೈತ ಒಂದು ಟ್ರ್ಯಾಕ್ಟರನ್ನು ತೆಗೆದುಕೊಂಡು ಹೋಗಿ ಒಂದು ವೇಳೆ ಅದರ ಯಾವುದಾದರೂ ಒಂದು ಸಣ್ಣ ಸಾಮಾನು ಹೋಗಿ ಟ್ರ್ಯಾಕ್ಟರು ಕೆಲಸ ಮಾಡದೆ 5-6 ದಿವಸ ನಿಂತು ಕೊಂಡರೆ ಅದರ ದಿನವಹಿಯ ಬಾಡಿಗೆ ರೈತನಮೇಲೆ ಬೀಳುತ್ತದೆ. ಚಿಕ್ಕಪುಟ್ಟ ಸಾಮಾನುಗಳನ್ನು ತರಬೇಕಾದರೂ ಬೆಂಗಳೂರಿಗೆ ಬರಬೇಕು. ಆದ್ದರಿಂದ ಯಾವುದಾದರೂ ಸೊಸೈಟಿಗಳಿಗೆ ಒಂದೆರಡು ಟ್ರ್ಯಾಕ್ಟರುಗಳನ್ನು ಕೊಟ್ಟು ಅವುಗಳ ಮುಖಾಂತರ ರೈತರಿಗೆ ಟ್ರ್ಯಾಕ್ಟರುಗಳನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು. ಇಲ್ಲದಿದ್ದರೆ ಅವುಗಳನ್ನು ಸರಿಯಾಗಿ ಮ್ಯಾನೇಜ್ ಮಾಡುವುದಕ್ಕೆ ಸಾಧ್ಯವಿಲ್ಲ. ಈಗ ತಿಪಟೂರಿನಲ್ಲಿ ಟ್ರ್ಯಾಕ್ಟರು 3 ತಿಂಗಳು ಇರಬೇಕೆಂದು ಒಂದು ಕಾನೂನನ್ನು ಮಾಡಿದ್ದಾರೆ. ಅದು ಮೂರು ತಿಂಗಳಕಾಲವೇನೋ ನಿಂತಿರುತ್ತದೆ. ಆದರೆ ಸರಿಯಾಗಿ ಕೆಲಸ ಮಾಡುವುದು 4 ದಿವಸ ಅಥವಾ 5 ದಿವಸಗಳು ಮಾತ್ರ, ಸರ್ಕಾರದವರು ಈ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಸೊಸೈಟಿಗಳಿಗೆ ಕೊಟ್ಟು ಅವುಗಳ ಮುಖಾಂತರ ರೈತರಿಗೆ ಟ್ರ್ಯಾಕ್ಟರುಗಳನ್ನು ಒದಗಿಸುವ ವ್ಯವಸ್ಥೆಯನ್ನು ಮಾಡಬೇಕು.

ನಮ್ಮ ಕಂದಾಯಮಂತ್ರಿಗಳಾದ ಶ್ರೀಮಾನ್ ಕೃಷ್ಣಪ್ಪನವರು ರೇಡಿಯೋ ಮುಖಾಂತರ ಪಂಪುಸೆಟ್ಟುಗಳನ್ನು ಕೊಡುವ ವಿಚಾರವನ್ನು ಪ್ರಚಾರ ಮಾಡುತ್ತಿದ್ದಾರೆ. ಆದರೆ ಅದಕ್ಕೆ ದುಡ್ಡು ಕೊಡುವವರು ಯಾರು, ಪಂಪುಸೆಟ್ಟುಗಳನ್ನು ಕೊಡುವವರು ಯಾರೆಂಬುದು ಆ ಪರಮಾತ್ಮನೊಬ್ಬನಿಗೇ ಗೊತ್ತು. ನಾನು ಈ ಬಗ್ಗೆ ಒಂದು ಕಾಗದವನ್ನು ಸರ್ಕಾರಕ್ಕೆ ಬರೆದಿದ್ದೆ. ಅದಕ್ಕೆ "The matter is under Consideration" ಎಂದು ಉತ್ತರ ಬಂದಿದೆ.

ಶ್ರೀ ಎಂ. ವಿ. ಕೃಷ್ಣಪ್ಪ.—ತಾಲ್ಲೂಕು ಬೋರ್ಡಿನವರಿಗೆ ಅಪ್ಲಿಕೇಷನ್ ಹಾಕಿದರೆ ಅವರು ಪಂಪುಸೆಟ್ಟನ್ನು ಅಲಾಟ್ ಮಾಡುತ್ತಾರೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಪಂಪುಸೆಟ್ಟು ಪಡೆದುಕೊಂಡು ಬೇಸಿಗೆ ಬೆಳೆಯನ್ನು ಬೆಳೆಯಿರಿ ಎಂದು ರೇಡಿಯೋದಲ್ಲಿ ಎಷ್ಟು ಪ್ರಸಾರವಾಯಿತು, ಅದಕ್ಕೆ ಎಷ್ಟು ದುಡ್ಡನ್ನು ಖರ್ಚುಮಾಡಿದ್ದೀರಿ, ಆದರೆ ಇವೊತ್ತಿನವರೆಗೂ ರೈತನಿಗೆ ಒಂದು ಪಂಪುಸೆಟ್ಟೂ ಮುಟ್ಟಿಲ್ಲ. ವ್ಯವಸಾಯಗಾರರಿಗೆ ಉತ್ತೇಜನ ಕೊಡುತ್ತೇವೆ ಬಾವಿ ತೆಗೆಯಲು ಸಾಲ ಕೊಡುತ್ತೇವೆ, ಪಂಪುಸೆಟ್ಟು ಕೊಡುತ್ತೇವೆಂದು ಹೇಳಿದರು. ಆದರೆ ರೈತನಿಗೆ ಆ ಯಾವ ಸೌಲಭ್ಯವೂ ದೊರೆತಿಲ್ಲ. ಪಂಪುಸೆಟ್ಟುಗಳದು ಯಾವ ನಂಬರೋ ಅಥವಾ ಯಾವ ಲೇಬಲ್ ಒಂದೂ ನಮಗೆ ಗೊತ್ತಿಲ್ಲ. ಸ್ಟೋರ್ ಪರ್ಚೇಸ್ ಕಮಿಟಿಯಲ್ಲಿ ನಾಲ್ಕು ಜನಗಳನ್ನು ಬುಕ್ ಮಾಡಿಕೊಂಡರೆ ಯಾವ ರೀತಿ ಬೇಕಾದರೂ ರೈತನಿಗೆ ಟೋಪಿ ಹಾಕುವುದಕ್ಕೆ ಅವಕಾಶವಿದೆ. ಅದೂ ನೇರವಾಗಿ ಸರ್ಕಾರದಿಂದ ಕೊಳ್ಳುವುದಕ್ಕೆ ಸಾಧ್ಯವಿಲ್ಲ. ಸರ್ಕಾರದವರು ದುಡ್ಡು ಸಾಲ ಕೊಡುತ್ತಾರೆ. ಅವರಿಗೆ ಯಾವ ಕಂಪೆನಿ ಇಷ್ಟ ಇದೆಯೋ ಆ ಕಂಪೆನಿಯಲ್ಲಿ

ತೆಗೆದುಕೊಳ್ಳಿ ಎಂದು ಅವರು ಹೇಳಬಹುದು. ಬಾವಿ ತೆಗೆಯುವುದಕ್ಕೆ 3 ಸಾವಿರ ರೂಪಾಯಿಗಳ ನಿಗದಿಯಾದ ಸಾಲವನ್ನು ಕೊಡುತ್ತೇವೆಂದು ಹೇಳುತ್ತಾರೆ. ಒಂದೊಂದು ಬಾವಿಗೆ 4 ಸಾವಿರ 5 ಸಾವಿರ, 10 ಸಾವಿರ ರೂಪಾಯಿಗಳವರೆಗೂ ಖರ್ಚಾಗುತ್ತದೆ. ಆದ್ದರಿಂದ ಸರ್ಕಾರದವರು ಬಾವಿಗಳಿಗೆ ದುಡ್ಡನ್ನು ಮಂಜೂರು ಮಾಡುವಾಗ ಬಾವಿ ತೆಗೆಯತಕ್ಕ ಜಾಗ, ಭೂಮಿ ಇವುಗಳನ್ನೆಲ್ಲಾ ನೋಡಿ ಎಷ್ಟು ಆಳ ತೋಡಿದರೆ ನೀರು ಬರುತ್ತದೆ ಎಷ್ಟು ಖರ್ಚಾಗುತ್ತದೆ ಎಂಬುದನ್ನೆಲ್ಲಾ ನೋಡಿ ನಂತರ ಬಾವಿಗೆ ದುಡ್ಡನ್ನು ಸರ್ಕಾರದವರು ಮಂಜೂರು ಮಾಡಬೇಕೆಂದು ನಾನು ಹೇಳುತ್ತೇನೆ. ಬಾವಿ ತೆಗೆಸಿದರೆ ಕರೆಂಟು ಕೊಡುತ್ತಾರೆಯೋ ಇಲ್ಲವೋ ಎನ್ನುವ ಅನುಮಾನಕ್ಕೆ ಅವಕಾಶವಿಲ್ಲದಂತೆ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಈ ಕೂಡು ಒಕ್ಕಲುತನ ವ್ಯವಸಾಯದ ವಿಷಯವನ್ನು ಚೆನ್ನಾಗಿ ಆಲೋಚನೆ ಮಾಡಿ, ಈ ಯೋಜನೆಯನ್ನು ಏತಕ್ಕೋಸ್ಕರ ಮಾಡಿಕೊಂಡಿದ್ದೀರೋ ನನಗಂತೂ ಏನೂ ಅರ್ಥವಾಗಿಲ್ಲ. ಯಾವ ಒಬ್ಬ ಮನುಷ್ಯನೂ ಸ್ವಾರ್ಥವಿಲ್ಲದೆ ಇಲ್ಲ, ಎಲ್ಲರಲ್ಲಿಯೂ ಇದೆ; ಇದು ಎಲ್ಲಿಯೂ ಇಲ್ಲದೆ ಇಲ್ಲ. ಭೂಮಿಗೋಸ್ಕರ ಕೊಡಲಿ ಹಿಡಿದುಕೊಂಡು ವ್ಯಾಜ್ಯವಾಗಿ ಅನೇಕ ಕ್ರಿಮಿನಲ್ ಕೇಸುಗಳಾಗಿವೆ. ಇದರಿಂದ ಏನಾಗುತ್ತಿದೆ, ಎಂದರೆ ಬುದ್ಧಿವಂತರಾದವರು 10 ಜನ ಅವಿದ್ಯಾವಂತರನ್ನು ಇಟ್ಟು ಕೊಂಡು, ಕೆಲವು ಕಾಲ ವ್ಯವಸಾಯ ಮಾಡಿಸಿ, 200 ರೂಪಾಯಿ ಸಾಪಾಸಿಗೆ 500 ರೂಪಾಯಿ ಎಂದು ತೋರಿಸಿ, 400 ರೂಪಾಯಿ ಖರ್ಚಾಗಿದ್ದರೆ, 4 ಸಾವಿರ ರೂಪಾಯಿ ಖರ್ಚು ಹಾಕಿ, ಕಡೆಯಲ್ಲಿ ಎಲ್ಲ ಅವ್ಯವಸ್ಥೆ ಮಾಡಿ, ಸಹಕಾರೀ ವ್ಯವಸಾಯ ನಡೆಯಲಿಲ್ಲವೆಂದು ಹೇಳಿ, ಆ ಭೂಮಿಯನ್ನು ಸ್ವಂತಕ್ಕೇ, ಭೂಹೀನರಿಂದ ಸೈನ್ ಮಾಡಿಸಿಕೊಂಡು ಅವರ ಹೆಸರಿನಲ್ಲಿ ತಮಗೇ ಮಾಡಿಕೊಳ್ಳುವ ಸಂಭವ ಬಂದಿದೆ. ಇದರಲ್ಲಿ ಇನ್ನೊಂದು ಸ್ಕೀಮು ಏನಿದೆ ಅದು ಇನ್ನೂ ವಿಚಿತ್ರವಾಗಿದೆ. ಒಂದೇ ಫ್ಯಾಮಿಲಿಯ ಹತ್ತು ಮಂದಿ, ಮಕ್ಕಳು ಮರಿಗಳೇ ಸೇರಿಕೊಂಡು ಒಂದು ಸೊಸೈಟಿ ಮಾಡಿಕೊಳ್ಳಬಹುದು. ಇದು ಅತ್ಯಾಶ್ಚರ್ಯಕರ - ಪ್ರಪಂಚದಲ್ಲಿ ಇದನ್ನು ಎಲ್ಲಿಯೂ ನೋಡಲಿಲ್ಲ. ಈ ತರಹ ಮಾಡಬಹುದೆಂದು ನನಗೆ ಗೊತ್ತಿದ್ದರೆ ನಾನೂ 3-4 ಸೊಸೈಟಿಗಳನ್ನು ಮಾಡಿಕೊಳ್ಳಬಹುದಾಗಿತ್ತು. ನಮ್ಮ ಮನೆಯಲ್ಲಿ ನಾವು 30 ಜನ ಇದ್ದೇವೆ, ಮಾಡಿಕೊಳ್ಳುವುದೇನೂ ಕಷ್ಟವಿರಲಿಲ್ಲ ಇಂಥ ಸೊಸೈಟಿಗಳಿಗೆ ದುಡ್ಡು ಕೊಡುವುದಾದರೆ, ನಮ್ಮ ದೇಶದ ದುಡ್ಡಿಗೆ ಉಳಿಗಾಲವಿದೆಯೇ, ಲೆಕ್ಕ ಹಾಕಿ. ನೀವು 10 ಜನ ಸೇರಿಸಿ ಒಂದು ಸೊಸೈಟಿಯೆಂದು ಹೆಸರು ಇಟ್ಟರೂ, ಸೊಸೈಟಿ ಲೆಕ್ಕ ಪತ್ರ ಇಡಬೇಕು, ಹಣ ಸದ್ವಿನಿಯೋಗವಾಗಿದೆಯೋ ಇಲ್ಲವೋ ಎನ್ನುವುದನ್ನು ತನಿಖೆ ಮಾಡುತ್ತಾರೆ, ಮೇಲಿನವರಿಗೆ ಲೋಪದೋಷಗಳಿಗೆ ಜವಾಬು ಕೊಡಬೇಕಾಗುತ್ತದೆ, ಆದ್ದರಿಂದ ನಿಮಗೆ ತೊಡಕಾಗುತ್ತದೆ, ಅಷ್ಟು ಸುಲಭವಾಗಿ ಈ ಸಹಕಾರೀ ವ್ಯವಸಾಯ ಯೋಜನೆಯ ಬೆನಿಫಿಟ್ಟನ್ನು ನೀವು ಪಡೆದುಕೊಳ್ಳುವುದಕ್ಕಾಗುವುದಿಲ್ಲ. ಸರ್ಕಾರದ ಸಹಾಯ ಪಡೆಯಬೇಕಾದರೆ ಇನ್ನಾವುದಾದರೂ ಉಪಾಯ ಹುಡುಕಿ. ಮೊದಲು ಈ ಸಹಕಾರೀ ವ್ಯವಸಾಯದ ಸ್ಕೀಮನ್ನು ತೆಗೆಯಬೇಕು. ನನಗೇ ಈ ಸ್ಕೀಮಿನ ವಿವರಗಳು ಗೊತ್ತಿರಲಿಲ್ಲ. ಮೊನ್ನೆ ಅರಸೀಕೆರೆಯ ಒಬ್ಬ ವ್ಯಾಪಾರಸ್ಥರು ಬಂದು ಇಂಥ ಒಂದು ಕ್ಷೇತ್ರ ಮಾಡುವುದಕ್ಕೆ ಸಹಾಯ ಕೋರಿದರು, ಅವರಿಂದ 10 ಜನ ಒಂದು ಸೊಸೈಟಿ ಮಾಡಿಕೊಳ್ಳಬಹುದೆಂದು ಗೊತ್ತಾಯಿತು. ಒಂದೇ ಮನೆಯವರಿಗೆ ಸೊಸೈಟಿ ಮಾಡಿಕೊಟ್ಟರೆ, ಹಣ ದುರುಪಯೋಗವಾಗಿ ಬಿಡುತ್ತದೆ, ಆದ್ದರಿಂದ ಮೊದಲು ಈ ಯೋಜನೆಯನ್ನು ಹೊಡೆದು ಹಾಕಿ ಎಂದು ಸರ್ಕಾರದಲ್ಲಿ ಒತ್ತಿ ಮನವಿಮಾಡಿಕೊಳ್ಳುತ್ತೇನೆ.

ಇನ್ನೂ ಸ್ವಲ್ಪ ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳ ವಿಷಯಕ್ಕೆ ಹೋಗೋಣ. ಬಡ ರೈತರು ಭೂಗಂದಾಯ ಕೊಟ್ಟು ಬಾವಿ ರಸ್ತೆಯಾಗುತ್ತಿರುವುದು ಅನಾದಿಕಾಲದಿಂದಲೂ ನಮ್ಮ ದೇಶದಲ್ಲಿ ಬಂದಿದೆ. ರೈತನ ಭೂಗಂದಾಯದ ಆಧಾರದ ಮೇಲೆಯೇ ಸರ್ಕಾರ ಅನ್ನುವುದನ್ನು ಸ್ಥಾಪನೆ ಮಾಡಿದಂಥಾದ್ದು, ಇದು ಪಾಳೆಗಾರರ ಕಾಲದಿಂದಲೂ ನಡೆದುಕೊಂಡು ಬಂದಿದೆ. ಸರ್ಕಾರದ ಆಡಳಿತ ಭೂಗಂದಾಯವನ್ನೇ ಅವಲಂಬಿಸಿದೆ. ಅದು ಇವತ್ತಿಗೂ ತಪ್ಪಲಿಲ್ಲ. ಈಗ 10-14 ವರ್ಷಗಳಿಂದ ಪಂಚವಾರ್ಷಿಕ ಯೋಜನೆಗಳು ಅಂತ ಮಾಡಿದ್ದೇವೆಂದು ಬೇಕಾದಷ್ಟು ಭಾಷಣ, ಪ್ರಚಾರಮಾಡಿದ್ದೇ ಮಾಡಿದ್ದು. ಈಗ ಕುಡಿಯುವ ನೀರಿನ ಬಾವಿ, ಒಂದು ರಸ್ತೆ, ಸ್ಕೂಲು, ಇತ್ಯಾದಿಗಳನ್ನು ಕೇಳಿದರೆ ತಾಲ್ಲೂಕು ಬೋರ್ಡುಗಳನ್ನು ತೋರಿಸುತ್ತೀರ ಇದು ಏನಾಗಿದೆ ಯೆಂದರೆ ಯಾವುದಾದರೂ ಒಂದು ಕಂಪೆನಿ ಮಾಲೀಕ ಇನ್‌ಸಾಲ್ವೆನ್ಸಿಗೆ ಹಾಕಿ ಬಿಟ್ಟರೆ, ಅವನಿಂದ ಎಷ್ಟು ಹಣ ಬರುತ್ತೇ ಬಂದುದನ್ನು ಎಲ್ಲಾ ಹಂಚಿಕೊಳ್ಳಿ ಎಂದ ಹಾಗಿದೆ. ತಮ್ಮ ಮೇಲಿನ ಜವಾಬ್ದಾರಿಯನ್ನು ಯಾರ ಮೇಲೋ ಹಾಕಿಬಿಟ್ಟು ಪ್ರತಿಯೊಂದಕ್ಕೂ ನಿಮ್ಮ ಹತ್ತಿರ ದುಡ್ಡಿಲ್ಲವೆಂದು ಬಿಡುವುದೇ? ನಾಮಿನೇಷನ್ನಿಗೆ ಅವಕಾಶವಿಲ್ಲವೆಂದು ಈ ಸಂಸ್ಥೆಗಳನ್ನು ಮಾಡಿಕೊಂಡಿರಾ? ನಿಮ್ಮ ಜವಾಬ್ದಾರಿಯನ್ನು ಇನ್ನೊಬ್ಬರಿಗೆ ವಹಿಸಿ ನೀವು ಕಳಚಿಕೊಂಡುಬಿಡುವುದೇ? ನಿಮ್ಮ ಸ್ಟೇಟ್‌ಮೆಂಟಿನಲ್ಲಿ ಆರು ಸಾವಿರ ಬಾವಿಗಳು ಪೂರ್ತಿಯಾಗಿವೆ ಎಂದು ಹೇಳುತ್ತೀರಾ. ಈ ಪ್ರಜಾಸಂಖ್ಯೆ ಜಾಸ್ತಿ

(ಶ್ರೀ ಕೆ. ಪಿ. ರೇವಣ ಸಿದ್ಧಪ್ಪ).

ಯಾಗುತ್ತಿರುವ ಕಾಲದಲ್ಲಿ ಇದರಿಂದ ಪರಿಸ್ಥಿತಿ ಉತ್ತಮವಾಗೊಂಡಿದೆ ಎಂದು ಭಾವಿಸುತ್ತೀರಾ ! ಬೆಂಗಳೂರಿನಲ್ಲಿ ಒಂದು ದೊಡ್ಡ ಕಾರ್ಪೊರೇಷನ್ನಿದೆಯೆಂದು, ಬೆಂಗಳೂರಿಗೆ ನೀರನ್ನು ಕಾವೇರಿಯಿಂದ, ಗಂಗಾ ನದಿಯಿಂದ ತಂದು ಭೂಕೈಲಾಸ ಮಾಡುತ್ತೇವೆಂದು ಹೇಳುತ್ತೀರ. ಅದೇ ಹಳ್ಳೀಗಾಡಿನವರು ಪಾಪಿಗಳು, ಅವರಿಗೆ ನೀರು ಕೊಟ್ಟಿದ್ದೀರಾ? ಕೊಡುವುದಕ್ಕೆ ನಿಮ್ಮ ಹಣೆಯಲ್ಲಿಯೇ ಬರೆಯಲಿಲ್ಲ. ಏಕೆಂದರೆ ಅವರು ಮೂಕ ಪ್ರಾಣಿಗಳು. ಅವರಿಗೆ ನೀರು ಕೊಡ ವುದಕ್ಕೆ ನಿಮ್ಮ ಹಣೆಯಲ್ಲಿಯೇ ಬರೆಯಲಿಲ್ಲ, ಇಂಥ ಸರ್ಕಾರ ದೇಶದಲ್ಲಿ ಇರಬಹುದೇ, ಆಲೋಚನೆ ಮಾಡಿ. ಒಂದು ದಿವಸ ಬೆಂಗಳೂರು ನಗರದಲ್ಲಿ ನೀರಿಗೆ ತೊಂದರೆಯಾದರೆ ಪೇಪರುಗಳಲ್ಲಿ ಬರದದ್ದೇ ಬರೆವದ್ದು. ಮಂತ್ರಿಗಳಾದಿಯಾಗಿ ಎಲ್ಲರೂ ಬೆಂಗಳೂರು ಜನರ ನೀರಿನ ಕಷ್ಟ ನೀಗಿಸಲು ಏನು ಮಾಡಬೇಕೆಂದು ಯೋಚಿಸುತ್ತಾರೆ. ಆದರೆ ಮಂತ್ರಿಗಳ ಯಾವ ಭಾಷಣ ಕೇಳಿದರೂ ಹಳ್ಳಿಯ ಮಾತೇ, ಹಳ್ಳಿಯ ಉದ್ಧಾರಕ್ಕೆ ತಾವು ದುಡಿಯುವುದು ಎಂದು ಹೇಳುತ್ತಾರೆ, ಹೀಗೆ ಮಾತನಾಡುವುದಕ್ಕೂ ಮಿತಿ, ಬೆಲೆ ಬೇಡವೇ! ನೀವೆಲ್ಲ ರೈತರ ಮಕ್ಕಳು, ಮಂತ್ರಿಗಳಾಗಿ ಇಂಥ ದೊಡ್ಡ ಭವ್ಯ ಬಂಗಲೆ ಸಿಕ್ಕಿದೆ, ಸ್ವರ್ಗ ಸಿಕ್ಕಿದೆ ಎಂದು ಅಂದುಕೊಂಡಿದ್ದೀರ. ಒಂದಲ್ಲ ಒಂದು ದಿವಸ ನೀವು ಹಿಂದಕ್ಕೆ ಹೋಗಲೇಬೇಕಾಗುತ್ತದೆ. ಶಾಶ್ವತವಲ್ಲ ಮಂತ್ರಿ ಪದವಿ. ನಿಮ್ಮ ವರ್ತನೆಗೆ ಏನಾದರೂ ನಾಚಿಕೆ ಪಟ್ಟುಕೊಳ್ಳುತ್ತೀರಾ !

ಶ್ರೀ ರಾಮಕೃಷ್ಣ ಹೆಗ್ಗಡೆ (ಸಹಕಾರ ಮತ್ತು ಅಭಿವೃದ್ಧಿ ಶಾಖೆಗಳ ಮಂತ್ರಿಗಳು).—ಅಜೇಯವಾದುದು ಅಂತ ನಮ್ಮಲ್ಲಿ ಯಾರೂ ತಿಳಿದುಕೊಂಡಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ನೀವು ಇದನ್ನು ಆಗಲೇ ಎರಡುಸಲ ಅನುಭವಿಸಿದ್ದೀರಿ. ಮಂತ್ರಿ ಪದವಿ ಹೋದ ಸ್ವಲ್ಪ ದಿವಸದಲ್ಲಿ ನಿಮ್ಮ ಕೋಟುಗಳು ಸಡಿಲವಾಗಿಬಿಡುತ್ತವೆ, ತಿರುಗಿ ಮಂತ್ರಿಯಾದರೆ ಕೋಟುಗಳು ಬಿಗಿಯಾಗಿಬಿಡುತ್ತವೆ. ಮಂತ್ರಿತ್ವ ಸ್ಥಿರವಲ್ಲ.

ಶ್ರೀ ರಾಮಕೃಷ್ಣ ಹೆಗ್ಗಡೆ.—ನಿಮ್ಮ ಮೆಂಬರ್‌ಷಿಪ್ಪೇ ಶಾಶ್ವತವಲ್ಲ, ಇನ್ನು ಮಂತ್ರಿ ಪದವಿ ಶಾಶ್ವತ ಅಂತ ಯಾರು ತಿಳಿದುಕೊಂಡಿದ್ದಾರೆ ?

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಸದಸ್ಯತ್ವಕ್ಕೆ ಐದು ವರ್ಷವಾದರೂ ಇದೆ, ನಿಮಗೆ ಎರಡು ವರ್ಷಕ್ಕೆ ಒಂದು ಟರ್ಮ್ ಆಗಿದೆ.

ಮುನಿಸಿಪಾಲಿಟಿಗಳಾದರೆ ತೆರಿಗೆಗಳನ್ನು ಹಾಕುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಸಾಮಾನ್ಯವಾದ ರೈತನಿಗೆ ಬೇಕಾದ ಧಾನ್ಯಗಳ ಮೇಲೆ ಸುಂಕ ಹಾಕುತ್ತಾರೆ, ಬಟ್ಟೆ ಮೇಲೆ ಸುಂಕ ಹಾಕುತ್ತಾರೆ. ರೈತನಿಗೆ ಬೇಕಾದ ಪ್ರತಿಯೊಂದು ಪದಾರ್ಥ ಮೇಲೆಯೂ ಹಾಕುತ್ತಾರೆ ಆದರೆ ಈ ತಾಲ್ಲೂಕು ಬೋರ್ಡಿಗೆ ಅಂಥ ಆದಾಯವೇನಿದೆ. ಲ್ಯಾಂಡ್ ರೆವಿನ್ಯೂನಲ್ಲಿ ಸ್ವಲ್ಪ ದುಡ್ಡು ಅದಕ್ಕೆ ಕೊಟ್ಟಿದ್ದೀರ. ಈ ಪಂಚಾಯಿತಿ ಎಲೆಕ್ಷನ್ನುಗಳಲ್ಲಿ ನಿಮ್ಮ ಅವಾಂತರ ವಿಪರೀತವಾಗಿದೆ. ಯಾರಾದರೂ ಮಿನಿಸ್ಟರ ಆಫೀಸಿಗೆ ಹೋಗಿ ಯಾವುದಾದರೂ ಮುಖ್ಯ ಸಮಸ್ಯೆಗಳ ನಿವಾರಣೆ ಬಗ್ಗೆ ಸ್ವಲ್ಪ ಸಾವಧಾನವಾಗಿ ಚರ್ಚಿಸೋಣವೆಂದು ಹೋದರೆ, ಐದು ನಿಮಿಷ ಅವರ ಹತ್ತಿರ ಕೂತುಕೊಳ್ಳುವುದರಲ್ಲಿ ''ಅವರ ಟ್ರಾನ್ಸ್‌ಫರ್ ಏನು ಮಾಡಿದಿರಿ, ಆ ಹುಡುಗ ಇಲ್ಲಿಗೆ ಬಂದಿದ್ದಾನೆ, ಅವನ ವಿಚಾರ ಏನು ಮಾಡಿದಿರಿ'' ಎಂದು ಫೋನ್ ಶುರುವಾಗುತ್ತದೆ, ಇನ್ನು ಇದಕ್ಕೆ ಆಫೀಸರುಗಳನ್ನು ಏಕೆ ದೂರಬೇಕು ? ಮೊದಲು ತಪ್ಪು ನಿಮ್ಮಲ್ಲಿಯೇ ಇಟ್ಟುಕೊಂಡಿರುತ್ತೀರ. Administrationನಲ್ಲಿ ಈ ಪಾಟಿ ತಲೆಹಾಕಬೇಡಿ, ಕೈಹಾಕಬೇಡಿ, ಯಾವುದೇ ಮುಖ್ಯವಾದ ಒಂದೆರಡು ಸಂಗತಿಗಳನ್ನು ನೀವು ಮನಸ್ಸಿಗೆ ಹಾಕಿಕೊಂಡು ಬಾಕೀದನ್ನು ಅಧಿಕಾರಿಗಳಿಗೇ ಬಿಟ್ಟುಬಿಟ್ಟು ರಾಜ್ಯಭಾರ ಮಾಡಿ. ರಾಜಕೀಯವನ್ನು ಆಡಳಿತದಲ್ಲಿ ಬೆರಸಿದರೆ ಅಧ್ವಾನವಾಗುತ್ತದೆ. ಡಿಸ್ಟ್ರಿಕ್ಟ್ ಬ್ಯಾಂಕ್ ಎಲೆಕ್ಷನ್ನಿಗೆ ಮಿನಿಸ್ಟರು ಬಂದು ನಿಂತುಕೊಳ್ಳುತ್ತಾರೆ, ವಿರೋಧ ಪಕ್ಷದ ಕಡೆಯವರು ಇಸ್ಪೀಟು ಆಡುತ್ತಾರೆ. ಅಂತ ಏನೇನೋ ಆರೋಪ ಹೊರಿಸಿ ಅವರನ್ನು ಅಪಹರಣ ಮಾಡಿಸುತ್ತಾರೆ. ನಿಮ್ಮ dignity ಕಾಪಾಡಿಕೊಳ್ಳಬೇಕು ಹೀಗೆಲ್ಲಾ ಆದರೆ, ಮೈಸೂರು ಮಂತ್ರಿಗಳಿಗೆ ಗೌರವ ಬರುವ ಹಾಗೆ ಇಲ್ಲ. ನಿಮಗೆ ಗೌರವ ಬರಲಿ ಎಂದು ಹೇಳುತ್ತಿದ್ದೇನೆ ಅಷ್ಟೇ. ಯಾವ ಊರಿಗೇ ಹೋಗಲೀ, ನೀವು ಮೈಸೂರಿನವರೇ, ಏನ್ರೀ ನಿಮ್ಮ ವಿದ್ಯುಚ್ಛಕ್ತಿ ಉತ್ಪಾದನೆ ಇಷ್ಟು ಕಡಿಮೆ ಪರ್ಸೆಂಟೇಜ್ ಇದೆ, ನೀರಾವರಿ ಕೆಲಸ ಇಷ್ಟು ಕಡಿಮೆ ಇದೆ, ನಿಮ್ಮ ಮಂತ್ರಿಗಳ ಸಂಖ್ಯೆ ಎಷ್ಟು ಜಾಸ್ತಿ ಇದೆ ಅವರು ಏನು ಮಾಡುತ್ತಿದ್ದಾರೆ ಎಂದು ಹೀಯಾಳಿಸುತ್ತಾರೆ. ಆದ್ದರಿಂದ ದಯೆಯಿಟ್ಟು ನಮ್ಮ ರಾಜ್ಯದ ಪ್ರಗತಿಯನ್ನು ಪ್ರತಿ ಕ್ಷೇತ್ರದಲ್ಲಿಯೂ ಬಾಕಿ ಪ್ರಾಂತ್ಯಗಳ ಮಟ್ಟಕ್ಕೆ ಏರಿಸುವಂತೆ ಪ್ರಯತ್ನ ಮಾಡಲು ನಿಮ್ಮ ಕಾಲವನ್ನು ಉಪಯೋಗಿಸಿ ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈ ಮೀನುಗಾರಿಕೆ ಮೇಲೆ ನನಗೂ ಒಂದೊಂದು ಪುಸ್ತಕ ಕೊಟ್ಟಿದ್ದೀರಿ. ನಾನು ದುಃಖದಿಂದ ಹೇಳಬೇಕಾಗಿದೆ, ಇವತ್ತಿನವರೆಗೂ ಒಂದು ದಿವಸವಾದರೂ ಸಂಬಂಧಪಟ್ಟ ಇಲಾಖೆಯ ಯಾವ ನೌಕರನೂ ನಮ್ಮ ಹತ್ತಿರ ಕಾಣಿಸಲಿಲ್ಲ. ಬೇಜವಾಬ್ದಾರಿ ಸರ್ಕಾರವಿದ್ದಾಗಲಾದರೂ ಪೌಲ್ಟ್ರಿ ಸಾಕುವುದು ಹೇಗೆ, ಕೋಳಿಗಳು ಸಾಕುವುದು ಹೇಗೆ ಎಂದು ಅಧಿಕಾರಿಗಳು ನಮ್ಮಲ್ಲಿಗೆ ಬಂದು ತೋರಿಸಿಕೊಡುತ್ತಿದ್ದರು. ನಾನು ಆಗಿನ್ನೂ ಅಸೆಂಬ್ಲಿ ಮೆಂಬರೂ ಆಗಿರಲಿಲ್ಲ. ಮೆಂಬರಾಗುವುದಕ್ಕೆ ಅಪ್ಲಿಕೇಷನ್ ಸಹ ಕಳುಹಿಸಿರಲಿಲ್ಲ. ಈಗ ಜವಾಬ್ದಾರಿ ಸರ್ಕಾರ ಬಂದ ಮೇಲೆ, ನಾನು ವಿಧಾನ ಸಭೆಯ ಸದಸ್ಯನಾಗಿದ್ದರೂ ಒಬ್ಬರೂ ನನ್ನ ಹತ್ತಿರಕ್ಕೆ ಬಂದಿಲ್ಲ, ಇನ್ನೂ ಯಾರ ಹತ್ತಿರ ಹೋದದ್ದನ್ನೂ ನಾನು ಕೇಳಲಿಲ್ಲ. ಈ ಕೆರೆಗಳನ್ನು ದೇವಸ್ಥಾನಕ್ಕೆಂದು ಹರಾಜು ಮಾಡುತ್ತಾರೆ, ಪಂಚಾಯಿತಿಗೆಂದು ಹರಾಜು ಮಾಡುತ್ತಾರೆ, ಹೀಗೆ ಹರಾಜು ಮಾಡುವಾಗ ಮೀನು ಸಿಗುವ ವಿಷಯದಲ್ಲಿ ಹೆಚ್ಚು ಮುತುವರ್ಜಿ ವಹಿಸಬೇಕು. ಈ ಮೀನು ಕೈಗಾರಿಕೆ ವಿಚಾರದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯವರು ಚೆನ್ನಾಗಿ ಮಾತನಾಡಿ ಬರತಕ್ಕಂಥ ಸಬ್‌ಸಿಡಿಯನ್ನೆಲ್ಲಾ ಪೂರ್ತಿಯಾಗಿ ಹೊಡೆದುಬಿಡುತ್ತಾರೆ. ಈ ಮೀನುಗಾರಿಕೆ ಅಭಿವೃದ್ಧಿಯಾಗದ ಕಡೆ ಉತ್ತಮಪಡಿಸಬೇಕು. ನೀರಿಲ್ಲದ ಕಡೆ ಹೆಚ್ಚಿಗೆ ಬೆಳೆಯಾಗುವಂತೆ ಮಾಡಬೇಕು. ಮಂಡ್ಯ ಜಿಲ್ಲೆಗೆ package-deal proposal sanction ಮಾಡಿದ್ದಾರೆ. ಈ ಯೋಜನೆ ಇಲ್ಲದೇನೇ ಎಲ್ಲಾ ರೈತರು ಅಲ್ಲಿ ನೀರಿನ ಸೌಕರ್ಯವಿರುವುದರಿಂದ ಒಳ್ಳೆಯ ಬೆಳೆಯನ್ನು ಅಗಲೇ ತೆಗೆಯುತ್ತಿದ್ದಾರೆ. ಅವರು ಹೆಚ್ಚಿಗೆ ಬೆಳೆಯಲೇಬೇಕು, ಬೆಳೆಯುತ್ತಾರೆ. ಈ ಒಂದು ಹೊಸ ಯೋಜನೆಯನ್ನು ಅಲ್ಲಿಗೆ ಕೊಟ್ಟಿದ್ದರಿಂದ ಅವರು ಹೆಚ್ಚಾಗಿ ಬೆಳೆಯುವುದಿಲ್ಲ. ಇದು ಹೇಗಿದೆಯೆಂದರೆ ಚೆನ್ನಾಗಿರುವ ಮಗುವನ್ನು ಇನ್ನಷ್ಟು ಚೆನ್ನಾಗಿರು ಎಂದು ಸಾಕಣೆ ಕೊಟ್ಟಹಾಗಾಯಿತು. ಎಲ್ಲಿ ಮೀನು ಹಿಡಿಯುವ ಕೆಲಸವಿಲ್ಲವೋ, ಅಲ್ಲಿ ಮೀನನ್ನು ಹೆಚ್ಚಾಗಿ ಬೆಳೆಸುವುದಕ್ಕೆ ಪ್ರಯತ್ನಪಡಬೇಕು.

ಈ ಬಾವಿಗಳಿಗೆ ಬೋರ್‌ವೆಲ್ ಸಿಸ್ಟಂ ಏರ್ಪಡಿಸುವ ಕೆಲಸ ಪಿ.ಡಬ್ಲ್ಯು.ಡಿ. ಯಲ್ಲಿ ಇದೆಯೆಂದು ಹೇಳುತ್ತೀರ. ಇದಕ್ಕೆ ನಾವು ಸಾವಿರ ರೂಪಾಯಿ ಡಿಪಾಸಿಟ್ ಇಡಬೇಕು. ಈ ಕೆಲಸ ನಿರ್ವಹಣೆಯನ್ನು ತಾಲ್ಲೂಕು ಬೋರ್ಡ್ ಅಥವ ಪಂಚಾಯಿತಿ ಅಥವ ಸೊಸೈಟಿಗಳಿಗೆ ಕೊಟ್ಟು, ಇದರಿಂದ ಜನಗಳಿಗೆ ಅನುಕೂಲವಾಗುವಂತೆ ಏರ್ಪಾಡು ಮಾಡಿಕೊಡಬೇಕು.

ಇನ್ನು ಎನ್. ಇ. ಎಸ್ ವಿಷಯದಲ್ಲಿ ಹೇಳುವುದಾದರೆ ಈ ಬಗ್ಗೆ ಕೆಲವು ಸದಸ್ಯರು ಸರ್ಕಾರವೇ ಬೇರೆ ಅಲ್ಲ, ಸದಸ್ಯರು ಬೇರೆ ಅಲ್ಲ. ನಾವೆಲ್ಲಾ ಒಂದೇ ಎಂಬ ಭಾವನೆಯಿಂದ ಕೆಲಸ ಕಾರ್ಯಗಳನ್ನು ಮಾಡಬೇಕು ಎಂದು ಹೇಳಿದರು. ಆ ರೀತಿ ಹೇಳುವವನಲ್ಲಿ ನಾನೂ ಒಬ್ಬನಾಗಿದ್ದೇನೆ. ಆದರೆ ಇಂತಹ ಸ್ಕೀಮುಗಳ ಹೆಸರುಗಳನ್ನು ಹೇಳಿಕೊಂಡು ದುಡ್ಡನ್ನು ಹಾಳು ಮಾಡಬೇಡಿ. ಈ ಕಾಮಗಾರಿಗಳನ್ನು ತಾಲ್ಲೂಕ್ ಬೋರ್ಡಿಗಾಗಲೀ, ತಹಸೀಲ್‌ದಾರರಿಗಾಗಲೀ ಅಥವಾ ಇಂಜನಿಯರ್ ಡಿಪಾರ್ಟ್‌ಮೆಂಟಿಗಾಗಲೀ ವಹಿಸಿ ಹಣವನ್ನು ಖರ್ಚು ಮಾಡಿದ್ದಕ್ಕೆ ತಕ್ಕ ಪ್ರತಿಫಲ ಬರುವುದಕ್ಕೆ ವ್ಯವಸ್ಥೆ ಮಾಡಬೇಕು. ಈಗಿನ ಸ್ಕೀಮುಗಳಲ್ಲಿ ಕೈಹಾಕಿರುವವರಿಗೆ ಜೀಪು ತೆಗೆದುಕೊಂಡು ಹೋಗತಕ್ಕ ಅನುಭವವೇ ಇರುವುದಿಲ್ಲ. ನಮ್ಮ ದೇಶದವರಿಗೆ ಸಾಕಷ್ಟು ಮಾನ್ಯತೆ ಇಲ್ಲ. ಹೊರಗಿನವರಿಗೆ ಈ ಪಂಚವಾರ್ಷಿಕ ಯೋಜನೆಗಳಲ್ಲಿ ವಿಶೇಷವಾಗಿ ಪ್ರೋತ್ಸಾಹ ಕೊಡುತ್ತಿದ್ದಾರೆಯೇ ಹೊರ್ತು ನಮ್ಮವರಿಗೆ ಅಷ್ಟಾಗಿ ಇಲ್ಲ. ಟ್ರೈನಿಂಗ್ ವಿಷಯದಲ್ಲಿ ನಮ್ಮವರಿಗೆ ಎಷ್ಟರಮಟ್ಟಿಗೆ ಸರ್ಕಾರದ ಅಭಿಮಾನವಿದೆಯೆಂಬುದನ್ನು ತಿಳಿದುಕೊಳ್ಳಬೇಕು ಮತ್ತು ನೆರೆ ರಾಜ್ಯದ ಜನಗಳಲ್ಲಿ ಎಷ್ಟರಮಟ್ಟಿಗೆ ಅಭಿಮಾನವಿದೆ ಎಂಬುದನ್ನು ಸಹ ತಿಳಿಯಬೇಕಾಗಿದೆ. ನಾವು ಮಾದರೀ ಮೈಸೂರಿನವರು ಎಂಬುದಾಗಿ ಹೇಳಿಕೊಳ್ಳುವಾಗ ಆಂಧ್ರಕ್ಕೆ ಹೋಗಿ ಕಲಿಯಬೇಕೇ, ನಮಗೆ ಶಕ್ತಿ ಇಲ್ಲವೇ, ನಮ್ಮಲ್ಲಿ ನೈತಿಕ ಬೆಂಬಲವಿಲ್ಲವೇ ಎಂಬುದನ್ನು ವಿಚಾರ ಮಾಡಿ ಯೋಚನೆ ಮಾಡಬೇಕು. ಆದ್ದರಿಂದ ಮಂತ್ರಿಗಳು ತಾವೇ ಯಾವಾಗಲೂ ಮಂತ್ರಿಯಾಗಿರಲೇಬೇಕೆಂಬ ಯೋಚನೆಯನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳದೆ ತಮ್ಮ ಕೆಲಸಕಾರ್ಯಗಳನ್ನು ಜವಾಬ್ದಾರಿಯಿಂದ ಮಾಡಬೇಕು. ಇಲ್ಲದಿದ್ದರೆ ಹೆಚ್ಚಿನ ಶಬ್ದಗಳ ಪ್ರಯೋಗ ಮಾಡಬೇಕಾದೀತೆಂದು ಎಚ್ಚರಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಸಿ. ಫಾಯದೆ (ಅಂಕೋಲ).—ಮಾನ್ಯ ಸಭಾಪತಿಗಳೇ, ಇವತ್ತು ಈ ಸಭೆಯ ಮುಂದೆ ಇಟ್ಟಿರುವ ವ್ಯವಸಾಯ, ಗೋ ಸಂಪತ್ತು, ಅರಣ್ಯ, ಗ್ರಾಮಾಭಿವೃದ್ಧಿ, ಸಹಕಾರಿ ಇಲಾಖೆಯ ಬೇಡಿಕೆಗಳನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ಈ ವಿಷಯದಲ್ಲಿ ನಾನು ನನ್ನ ಜಿಲ್ಲೆಗೆ ಸಂಬಂಧಪಟ್ಟ ಕೆಲವು ವಿಚಾರಗಳನ್ನು ಸರ್ಕಾರದ ಮುಂದೆ ತಮ್ಮ ಮೂಲಕ ಇಡಬಯಸುತ್ತೇನೆ. ನಾನು ಬಂದಿರುವ ಜಿಲ್ಲೆ ಕಾರವಾರ ಜಿಲ್ಲೆ, ಅಲ್ಲಿ ಈ ಅರಣ್ಯ ಸಂಪತ್ತು ವಿಶೇಷವಾಗಿದೆ. ಆದರೆ ಅದನ್ನು ಎಷ್ಟು ಬೇಕೋ ಅಷ್ಟನ್ನು ಇಟ್ಟುಕೊಳ್ಳುವುದು ಉತ್ತಮ. ಕಾರವಾರದಲ್ಲಿ ಶೇ. 82 ಭಾಗ ಇದೆ. ನನ್ನ ಒಂದು ತಾಲ್ಲೂಕಿನಲ್ಲಿಯೇ ಶೇ. 92 ಭಾಗ ಇದೆ. ಆಂದಮೇಲೆ ವಿಶೇಷವಾಗಿ ಕಾಡನ್ನು ಬೆಳೆಸುವುದರಿಂದ ಸ್ವಲ್ಪಮಟ್ಟಿಗೆ ತೊಂದರೆ, ಕೆಡಕು ಉಂಟು. ಆದ್ದರಿಂದ ಈಗ ಸರ್ಕಾರಕ್ಕೆ ಎಷ್ಟರ

(ಶ್ರೀ ಎಸ್. ಸಿ. ಫಾಯದೆ)

ಮಟ್ಟಿಗೆ ಕಾಡು ಸಂಪತ್ತು ಬೇಕೆಂಬ ಬಗ್ಗೆ ಒಂದು ಪ್ರಮಾಣಬೇಕು. ಕಾಡೆಲ್ಲಾ ಒಂದೇ ಕಡೆ ಕೂಡಿ ಹಾಕುವುದರಲ್ಲಿ ಏನೂ ಪ್ರಯೋಜನವಿಲ್ಲ. ಹೀಗೆ ನನ್ನ ಒಂದು ತಾಲ್ಲೂಕಿನಲ್ಲಿಯೇ ಶೇ. 92 ಭಾಗ ಕಾಡು ಇದ್ದರೆ ಜನ ಸಾಮಾನ್ಯರು ಹೇಗೆ ಜೀವಿಸಬೇಕೆಂಬ ವಿಚಾರವನ್ನು ಪರಿಶೀಲನೆ ಮಾಡ ಬೇಕಾಗಿದೆ. ನಮ್ಮಲ್ಲಿ ನೀರಾವರಿಗೆ ಫಲವತ್ತಾದ ಜಮೀನುಗಳುಂಟು. ಅರಣ್ಯ ಇಲಾಖೆಯವರು ಲಾಯಕ್ಕಾದ ಭೂಮಿಗಳನ್ನು ರೈತರಿಗೆ ಕೊಡುವ ಹಾಗೆ ವ್ಯವಸ್ಥೆ ಮಾಡಬೇಕು. ಆದರೆ ಅರಣ್ಯ ಶಾಖೆಯವರು ಅಂತಹ ಫಲವತ್ತಾದ ಮತ್ತು ನೀರಾವರಿಗೆ ಯೋಗ್ಯವಾದ ಜಮೀನುಗಳನ್ನು ಕೂಡರೆ ರೈತರಿಗೆ ರಿಲೀಜ್ ಮಾಡುವುದಿಲ್ಲ. ಅರಣ್ಯಗಳಲ್ಲಿ ಫಾರೆಸ್ಟ್ ಬಹಳವಾಗಿ ಬೆಳೆಸುತ್ತಿರುವುದರಿಂದ ಜನ ಸಾಮಾನ್ಯರಿಗೆ ಕೆಲವು ಸಂದರ್ಭಗಳಲ್ಲಿ ಬಹಳ ತೊಂದರೆ ಇದೆ. ನಮ್ಮಲ್ಲಿ Wild Animal protection ಆಕ್ಟ್ ಎಂಬುದಾಗಿ ಇದೆ. ಅದರಿಂದ ಕಾಡು ಜಾನುವಾರುಗಳಿಗೆ ಸಂರಕ್ಷಣೆ ಇದೆಯೇ ಹೊರ್ತು ಬಡ ರೈತನಿಗೆ ಯಾವ ರಕ್ಷಣೆಯೂ ಇಲ್ಲ. ಇದರಿಂದಾಗಿ ಅನೇಕ ಕಾಡು ಮೂಕ ಪ್ರಾಣಿ ಗಳು ಆಹಾರ ಬೆಳೆಗಳನ್ನೆಲ್ಲಾ ತಿಂದು ರೈತನ ಬೆಳೆಯನ್ನೆಲ್ಲಾ ಹಾಳುಮಾಡಿ ತುಂಬಾ ಲುಕ್ಸಾನು ಪಡುವ ಸ್ಥಿತಿ ಬಂದಿದೆ. ಅದರ ಬಗ್ಗೆ ಸರ್ಕಾರದವರು ರೈತನಿಗೆ ಏನು ಪ್ರೊಟೆಕ್ಷನ್ ಕೊಡುತ್ತಾರೆಂಬು ದನ್ನು ವಿಚಾರ ಮಾಡಬೇಕು. ಇದರಲ್ಲಿ ಜನಸಾಮಾನ್ಯರಿಗೆ ಕೂಡಲೇ ರಕ್ಷಣೆಯನ್ನು ಕೊಡಬೇಕು. ಈಗಾಗಲೇ ರೈತಾಪಿ ಜನರ ಧನ ಸಂಪತ್ತೆಲ್ಲಾ ಕಾಡು ಮೃಗಗಳಿಂದ ಹಾಳಾಗುತ್ತಿದೆ, ಅದರ ಬಗ್ಗೆ ಅವರಿಗೆ ಕಂಪೆನ್ಸೇಷನ್ ಕೊಡಬೇಕೆಂದು ನಾನು ಕೇಳುತ್ತೇನೆ. ಇನ್ನೊಂದು ವಿಷಯ. ನಮ್ಮ ಭಾಗದಲ್ಲಿ ವ್ಯವಸಾಯಕ್ಕೆ ಲಾಯಕ್ಕಾದ ಜಮೀನುಗಳು ಬಹಳ ಇವೆ. ತಮಗೆ ಒಂದು ಉದಾಹರಣೆ ಯನ್ನು ಬೇಕಾದರೆ ಕೊಡುತ್ತೇನೆ. ನಮ್ಮ ಜಿಲ್ಲೆಯಲ್ಲಿ ಬಹಳ ವಿಸ್ತಾರವಾದ ತಾಲ್ಲೂಕ್ ಎಂದರೆ ಮುಂಡಗೋಡ ತಾಲ್ಲೂಕು. 7,300 ಚಿಲ್ಲರೆ ಎಕರೆ ಜಮೀನು ಒಳ್ಳೆಯ ಸಾಗಲಾಯಕ ಫಲವತ್ತಾದ ಜಮೀನು ಇದೆ. ಅಂತಹ ಉತ್ತಮ ಜಮೀನನ್ನು ರೈತರಿಗೆ, ಅದರಲ್ಲೂ ಕಡಿಮೆ ಹಿಡುವಳಿ ಜಮೀನ್ದಾ ರರಿಗೆ ಕೊಡುವ ವಿಚಾರವನ್ನು ಇದುವರೆಗೂ ಮಾಡಲಿಲ್ಲ. ಮಾನ್ಯ ಮಂತ್ರಿಗಳು ಈ ವಿಷಯವನ್ನು ತೀವ್ರವಾಗಿ ಗಮನಿಸಬೇಕು ಎಂಬುದಾಗಿ ನಾನು ಹೇಳುತ್ತೇನೆ. ಅಂತಹ ಜಮೀನನ್ನು ಸಾಗು ವಳಿಗೆ, ಬೇಸಾಯ ಕೆಲಸಕ್ಕೆ ಜಾಗ್ರತೆಯಾಗಿ ಬಿಟ್ಟು ಕೊಡಬೇಕು ಎಂಬುದಾಗಿ ನಾನು ವಿನಂತಿಸಿ ಕೊಳ್ಳುತ್ತೇನೆ. ಇದರಲ್ಲಿ ಏನಾದರೂ ವಿಳಂಬವಾದರೆ ನಮ್ಮ ಸಂಸ್ಥಾನಕ್ಕೆ ಹಾನಿಯೇ ಹೊರ್ತು ಮತ್ತೇನೂ ಇಲ್ಲ. ಆದ್ದರಿಂದ ಅದರ ಬಗ್ಗೆ ಮಾನ್ಯ ಮಂತ್ರಿಗಳು ಹೆಚ್ಚು ಗಮನಕೊಟ್ಟು ಜಮೀನು ಎಷ್ಟು ಕೊಡಲಿಕ್ಕೆ ಸಾಧ್ಯವೋ ಅಷ್ಟನ್ನು ಜಾಗ್ರತಯಾಗಿ ರೈತರಿಗೆ ಹಂಚಬೇಕು. ಈ ಬಗ್ಗೆ ಈಗಾ ಗಲೇ ಒಂದು ಕಮಿಟಿ ಮಾಡಿದ್ದೇವೆಂದು ಹೇಳಿದರು. ಆ ಕಮಿಟಿ ಮುಖಾಂತರ ಆದಷ್ಟು ಜಾಗ್ರತೆ ಈ ಪ್ರಾಬ್ಲಮ್ ಒಂದು ನಿರ್ಣಯಕ್ಕೆ ಬರಬೇಕು. ಆ ರೀತಿ ಕ್ರಮ ತೆಗೆದುಕೊಂಡು ಫಲವತ್ತಾಗಿರ ತಕ್ಕ ಜಮೀನುಗಳನ್ನು ರೈತಾಪಿ ಜನರಿಗೆ grow more food ಸ್ಕೀಂ ಜಯಪ್ರದವಾಗುವಂತೆ ಮಾಡಲು ಹಂಚಬೇಕು ಎಂಬುದಾಗಿ ನಾನು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ಮತ್ತೆ ಯಾರೂ ಯಾವರೀತಿಯಲ್ಲೂ ಭಿನ್ನಾಭಿಪ್ರಾಯ ಮಾಡುವ ಹಾಗಿಲ್ಲ. ಈ ವಿಷಯದಲ್ಲಿ ಅರಣ್ಯ ಇಲಾಖೆಯವರು ಸಾಕಷ್ಟು ಮನಸ್ಸು ಮಾಡದಿದ್ದರೆ ಇನ್ಯಾವ ಕಾಲದಲ್ಲಿ ಈ ಇಲಾಖೆ ಅಭಿವೃದ್ಧಿಯಾಗುತ್ತದೋ ಗೊತ್ತಿಲ್ಲ. ರೈತಾಪಿ ಜನಗಳು ತೀವ್ರವಾಗಿ ಆಹಾರೋತ್ಪತ್ತಿಯನ್ನುಂಟುಮಾಡಲು ಸರ್ಕಾರ ದವರು ಹೆಚ್ಚಿನ ಸಹಾನುಭೂತಿಯನ್ನು ತೋರಿಸಬೇಕು ವ್ಯವಸಾಯಕ್ಕೆ ಯೋಗ್ಯವಾದ ಜಮೀನನ್ನು ಸಾಕಷ್ಟು ಅವರಿಗೆ ಕೊಡಬೇಕು. ಜನತೆಯೂ ಸಹ ಸರ್ಕಾರದ ಕಾರ್ಯಕಲಾಪಗಳ ಬಗ್ಗೆ ಹೆಚ್ಚಿನ ಸಹಕಾರವನ್ನು ಕೊಡಬೇಕು.

ಇನ್ನು ನಮ್ಮಲ್ಲಿರುವ ಪಶು, ಗೋ ಸಂಪತ್ತು ಬಗ್ಗೆ ಕೆಲವು ವಿಚಾರಗಳನ್ನು ಹೇಳಬೇಕೆಂದು ಇಚ್ಛೆಯುಳ್ಳವನಾಗಿದ್ದೇನೆ. ನನ್ನ ಮತದಾನ ಮತದಲ್ಲಿ ಅದರಲ್ಲೂ ಮುಂಡಗೋಡು ತಾಲ್ಲೂಕಿನಲ್ಲಿ 25 ಸಾವಿರ ಜನಸಂಖ್ಯೆ ಇದ್ದರೆ 35 ಸಾವಿರಕ್ಕೆ ಮೇಲ್ಪಟ್ಟು ದನಗಳ ಸಂಖ್ಯೆ ಇದೆ. ಅಂದಮೇಲೆ ಜನ ಸಂಖ್ಯೆಗಿಂತ ದನಗಳ ಸಂಖ್ಯೆ ಹೆಚ್ಚು ಇದೆ. ಅವುಗಳ ಬೆಳವಣಿಗೆಗೆ ಹೆಚ್ಚಿನ ಸೌಕರ್ಯವಿಲ್ಲ. ಅವನ್ನು ಸಾಕತಕ್ಕವರು ಗೌಳಿ ಜನರು. ಅವರಿಗೆ ಸರಿಯಾದ ಮನೆಗಳಿರುವುದಿಲ್ಲ. ದನಕರುಗಳನ್ನು ಇಟ್ಟುಕೊಂಡು ಅಡವಿಗಳಲ್ಲಿಯೇ ವಾಸ ಮಾಡುತ್ತಿರುತ್ತಾರೆ. ಆಗಾಗ್ಗೆ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆದಾಡುತ್ತಿರುತ್ತಾರೆ. ಉತ್ತಮವಾದ ಪ್ರದೇಶವನ್ನು ಅವರಿಗೆ ಕೊಡುವ ವ್ಯವಸ್ಥೆ ಮಾಡಿದರೆ, ಅವರ ವಾಸಕ್ಕೆ ಅನುಕೂಲವಾಗುತ್ತದೆ. ಮತ್ತು ಗೋ ಸಂಪ ತ್ತನ್ನು ಚೆನ್ನಾಗಿ ಬೆಳೆಸುವುದಕ್ಕೆ ಹೆಚ್ಚಿನ ಅನುಕೂಲವಾಗುತ್ತದೆ. ಏಕೆಂದರೆ ಅವರು ಅವುಗಳ ಸಾಗಾಣಿಕೆಯಿಂದ ಮಾತ್ರ ಜೀವನ ಮಾಡುತ್ತಿದ್ದಾರೆ. ಅಂತಹವರಿಗೆ ಸಕಲ ಸೌಕರ್ಯಗಳನ್ನು ಕೊಟ್ಟರೆ ನಮ್ಮ ಪಶು ಸಂಪತ್ತು ಸಕ್ಸೆಸ್ ಆಗುತ್ತದೆ. ಅವುಗಳಲ್ಲಿ ಹೊಸ ಬ್ರೀಡ್ಸ್ ಕೆಲವನ್ನು ಉಪಯೋಗಿಸಿ

ಕೊಂಡು ನಮ್ಮ ಪಶು ಸಂಪತ್ತನ್ನು ಮತ್ತಷ್ಟು ಅಭಿವೃದ್ಧಿಪಡಿಸಬಹುದೆಂಬುದನ್ನು ಸರ್ಕಾರದವರು ಈ ಸಂದರ್ಭದಲ್ಲಿ ಮಾನವರಿಕು ಆ ಬಗ್ಗೆ ತಕ್ಕ ಗಮನ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಗ್ರಾಮಾಭಿವೃದ್ಧಿಯ ವಿಚಾರ. ಈಗ ತಾಲ್ಲೂಕ್ ಬೋರ್ಡುಗಳು ಮತ್ತು ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಿವೆ. ನಮ್ಮ ಮಟ್ಟಿಗೆ ಹೇಳುವುದಾದರೆ, ನಮ್ಮದು forest ತಾಲ್ಲೂಕು, ರೆವಿನ್ಯು ಕಡಮೆ ಪ್ರಮಾಣದಲ್ಲಿ ಬರುತ್ತದೆ. ತಾಲ್ಲೂಕು ಮತ್ತು ಪಂಚಾಯತಿಗಳಿಗೆ ಉತ್ಪತ್ತಿ ಸಾಲದು. ಹಿಂದೆ ನಮ್ಮ ಪ್ರದೇಶ ಬೊಂಬಾಯಿ ಪ್ರಾಂತದಲ್ಲಿದ್ದಾಗ ಫಾರೆಸ್ಟ್ ಉತ್ಪತ್ತಿಯಿಂದ ಶೇಕಡ 2ರಷ್ಟು ಫಾರೆಸ್ಟ್ ಗ್ರ್ಯಾಂಟ್ ಲೋಕಲ್ ಬೋರ್ಡಿಗೆ ಕೊಡುತ್ತಿದ್ದರು. ನಮ್ಮದು ಅರಣ್ಯ ಪ್ರದೇಶವಾಗಿರುವುದರಿಂದ ಸಾಕಷ್ಟು ರೆವಿನ್ಯೂ ಉತ್ಪತ್ತಿ ತಾಲ್ಲೂಕು ಬೋರ್ಡು ಮತ್ತು ಪಂಚಾಯತಿಗಳಿಗೆ ಸಿಕ್ಕುವುದಿಲ್ಲ. ಇದರಿಂದ ಗ್ರಾಮಾಭಿವೃದ್ಧಿ ಮಂಡಲಗಳ ಕೆಲಸ ಸಾಗುವುದಿಲ್ಲ. ಈ ಕೆಲಸಗಳು ಸಾಗಬೇಕಾದರೆ ಫಾರೆಸ್ಟ್ ಉತ್ಪತ್ತಿಯಿಂದ ಗ್ರಾಂಟು ಕೊಡಬೇಕೆಂದು ಒತ್ತಿ ಹೇಳಲು ಬಯಸುತ್ತೇನೆ.

4-00 P.M.

ಸಹಕಾರ ಇಲಾಖೆಯ ಬಗ್ಗೆ ಹೇಳುವುದಾದರೆ, ನಾನು ಕೆಲವು ಸಹಕಾರ ಸಂಘಗಳನ್ನು ನೋಡಿದ್ದೇನೆ. ಕೆಲವು ಚಲೋ ಕೆಲಸ ಮಾಡುತ್ತಿವೆ. ಆದರೆ ಕೆಲವು ಸಂಘಗಳು one man society ಗಳಾಗಿವೆ. ಈಗಾಗಲೇ ಮಾನ್ಯ ಸದಸ್ಯರು ಉದಾಹರಣೆ ಕೊಟ್ಟಿದ್ದಾರೆ. ಒಂದೇ ಮನೆಯವರು ಮುಖ್ಯಸ್ಥರು ಸಹಕಾರ ಸಂಘ ಮಾಡಿಕೊಂಡು ಲಾಭ ಪಡೆಯುತ್ತಿದ್ದಾರೆ. ಹೀಗಾಗಬಾರದು. ಇದಕ್ಕೆ ಕಠಿಣ ಶಿಕ್ಷೆಯನ್ನು ಸರ್ಕಾರ ಯೋಚನೆ ಮಾಡಿ ಇದನ್ನು ಹತೋಟಿಗೆ ತರಬೇಕು. ಸಹಕಾರ ಇಲಾಖೆಯಿಂದ ಜನರಿಗೆ ಏನು ಸಹಾಯ ಸಿಕ್ಕಬೇಕೋ ಅದು ಸಿಕ್ಕುವಂತೆ ಆಗಬೇಕೆಂದು ಹೇಳುತ್ತೇನೆ.

[MR. SPEAKER in the Chair].

ಸಹಕಾರ ಸಂಘಗಳು ಕೆಡುವುದಕ್ಕೆ ಸೆಕ್ರೆಟರಿಗಳು ಬಹಳ ಮಟ್ಟಿಗೆ ಕಾರಣ, ಅವರು ರೈತರಿಗೆ ಮೋಸ ಮಾಡುತ್ತಿದ್ದಾರೆಂಬ ಬಗ್ಗೆ ಕೆಲವು ನಿದರ್ಶನಗಳು ಬಂದಿವೆ. ಮಂತ್ರಿಗಳು ನಮ್ಮ ಭಾಗಕ್ಕೆ ಬಂದಿದ್ದಾಗ ಉದಾಹರಣೆಗಳನ್ನು ಕೊಟ್ಟಿದ್ದೇನೆ. ಇದನ್ನು ಸರಿಪಡಿಸಬೇಕೆಂದು ಹೇಳಿ ನನಗೆ ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The Minister will now commence the reply.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.— ನಿನ್ನೆಯ ದಿವಸ ಈ ಚರ್ಚೆ ಈ ದಿನ ಐದು ಗಂಟೆಯವರೆಗೆ ಆಗಬೇಕೆಂದಿತ್ತು. ನಿನ್ನೆ ನಾವು ಒಬ್ಬೊಬ್ಬರಿಗೆ 20 ನಿಮಿಷ ಸಾಕೆಂದು ಒಪ್ಪಿಕೊಂಡಿದ್ದೆವು. ಈಗ ಬಹಳ ಜನ ಮಾತನಾಡುವವರಿದ್ದಾರೆ. ಈಗ ಕೊನೆಯ ಪಕ್ಷ ನಾಲ್ಕೈದು ಜನರಿಗಾದರೂ ಮಾತನಾಡಲು ಅವಕಾಶ ಕೊಡಬೇಕು. Let the debete go on up to 5 O'Clock.

Mr. SPEAKER.—I said that at 4 O'clock, the Government reply would commence.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾವು ತೀರ್ಮಾನ ತೆಗೆದುಕೊಂಡದ್ದು.........

Mr. SPEAKER.—What happened yesterday everybody knows, but today something has happenend. Probably, the hon. member was not present then and he feels that becausc he was not present then the decision of the House is not binding on him. It is the decision of the House. I put it to the house and took the sence of the House.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸಭೆ ತೀರ್ಮಾನ ತೆಗೆದುಕೊಂಡದ್ದು ನನ್ನ ಮೇಲೆ binding ಅಲ್ಲವೆಂದು ಹೇಳುವುದಿಲ್ಲ. ನಾವೂ ಸರ್ಕಾರದವರಿಗೆ ಸಹಕಾರ ಕೊಟ್ಟಿದ್ದೇವೆ. ವ್ಯವಸಾಯ ಇಲಾಖೆ ಸಹಕಾರ ಇಲಾಖೆ, ಎನ್.ಇ.ಎಸ್.ಇ. ವೆಲ್ಲ ಹೇಗೆ ಕೆಲಸ ಮಾಡುತ್ತಿವೆ ಎನ್ನುವುದನ್ನು ಹೇಳುವುದಕೆ ನಮಗೆ ಅವಕಾಶ ಬೇಕು. ತಾವು ತೀರ್ಮಾನವಾಗಿದೆಯೆಂದು, ನಾನು ಅದಕ್ಕೇನೂ ಹೇಳುವುದಿಲ್ಲ. ಸರ್ಕಾರವನ್ನು ಕೇಳಿ ನಮಗೆ ಅವಕಾಶ ಮಾಡಿ ಕೊಡಬೇಕೆಂದು ನನ್ನ ಸೂಚನೆ.

Mr. SPEAKER.—The Members already requested me.

Sri C. J. MUCKANNAPPA.—I am making a repeated request because it may prevail on the goodself. If it does not prevail, we cannot do anything.

Mr. SPEAKER.—Kindly resume your seat. I will tell what I am doing.

Before the Minister begins, I wish to point out that one impression that the member has got that it lies in me, is not correct. It lies with the House I asked the House and fixed it. The Ministers want three hours for the reply. How much time they are going to take for the reply? I am yet to see. There is no rule by which I can put time limit upon Minister's reply. So far as members are concerned, under the rules it is left to my discretion, that discretion I exercise after consulting the House. Beyond that, what is it that I can do?

Sri K. LAKKAPPA (Hebbur).—They are also members of the House.

Sri C. J. MUCKANNAPPA.—You could have allowed another five more members to speak, ಅದಕ್ಕೆ 15 ನಿಮಿಷ ಮಿತಿ ಇಡಿ ಎಂದು ಹೇಳಿದೆವು......

Mr. SPEAKER.—The hon. member knows that one member suggested half-an-hour.

Sri C. J. MUCKANNAPPA.—Sri Keshavamurthy has been trying to speak for the last 10 days.

Mr. SPEAKER.—The hon. member is not entitled to point out that. Sri Keshavamurthy belongs to a Party. His Leader is sending names. So if Sri Keshavamurthy has any complaint, it is against his leader and not against the House.

Sri C. J. MUCKANNAPPA.—Why does the chair say like that.

Mr. SPEAKER.—The hon. member you referred to Sri Keshavamurthy's instance.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಾದರೆ ನಮಗೆ ಈ ಸಭೆಯಲ್ಲಿ ಅಷ್ಟು ಸ್ವಾತಂತ್ರ್ಯವಿಲ್ಲವೆ ?

Mr. SPEAKER.—One member's swatantrya cannot standing itself; it has to be co-ordinated with that of other members.

ಶ್ರೀ ಎಂ. ಎ. ಕೃಷ್ಣಪ್ಪ.—ಪಶು ಸಂಗೋಪನೆಯ ವಿಚಾರದಲ್ಲಿ ಮಾನ್ಯ ಸದಸ್ಯರು ಒಳ್ಳೆಯ ಅಭಿಪ್ರಾಯವನ್ನೂ ಒಳ್ಳೆಯ ಸಲಹೆಗಳನ್ನೂ ಸರ್ಕಾರಕ್ಕೆ ಕೊಟ್ಟಿದ್ದಾರೆ. ಈ ಸಮಯದಲ್ಲಿ ಮಾನ್ಯ ಸಭೆಗೆ ನನ್ನ ಪ್ರಾರ್ಥನೆ ಇಷ್ಟೆ : ಪಶು ಪಾಲನೆ, ಪಶು ಸಂಗೋಪನೆ ಬಹು ಮುಖ್ಯವಾದ ಇಲಾಖೆ. ರೈತ ದೇಶಕ್ಕೆ ಬೆನ್ನು ಮೂಳೆಯಾದರೆ ಪಶು ಸಂಗೋಪನೆ ರೈತನ ಮೂಳೆ...

Sri S. GOPALA GOWDA.—On a point of order, Sir.

Mr. SPEAKER.—Let it be a point of order and nothing else.

ಶ್ರೀ ಎಸ್. ಗೋಪಾಲಗೌಡ.—ತಾವು ಈ ಕಾಲವನ್ನು ಹಂಚುವ ವಿಷಯದಲ್ಲಿ ಸಭೆಯ ಅಭಿಪ್ರಾಯವನ್ನು ಪಡೆದು ಮಾಡುತ್ತಿರುವುದಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದಿರಿ. ಈ ಬೆಳಿಗ್ಗೆ ಕೂಡ ನಾನು ಸಭೆಯ ಪರವಾಗಿ ಪ್ರಾರ್ಥನೆ ಮಾಡಿಕೊಂಡೆ. ಐದು ಗಂಟೆಯ ತನಕ ಸದಸ್ಯರು ಭಾಷಣಗಳನ್ನು ಮಾಡುತ್ತೇವೆ, ಸರ್ಕಾರ ಎರಡು ಗಂಟೆಯ ಕಾಲ ಉತ್ತರ ಕೊಡಲಿ ಎಂದು. ಆದರೆ ತಾವು ಪುನಃ ನಾಲ್ಕು ಗಂಟೆ ಎಂದು ಗೊತ್ತುಮಾಡಿದಿರಿ. ಸಭೆ ಎಂದರೆ, ಮಂತ್ರಿಗಳು ಎಂದರೆ, ನಾನು ಒಪ್ಪುವುದಿಲ್ಲ ಇದಕ್ಕೆ ಮೂರು ದಿವಸ ಎಂದು ಇಟ್ಟೆವು. ಆ ಮೂರು ದಿವಸದಲ್ಲಿ ಕಾರ್ಯಕ್ರಮ ಬದಲಾವಣೆಯಾಗಿದೆ. ಸಾಧ್ಯವಾದಷ್ಟು ಎಲ್ಲರಿಗೂ ಭಾಗವಹಿಸಲು ಅವಕಾಶ ದೊರೆಯುತ್ತದೆ, ಕಾರ್ಯಕ್ರಮ ಅದರಿಂದ ನಡೆಯುತ್ತದೆ ಎಂದು ಅದನ್ನೊಪ್ಪಿದೆವು. ಆದರೆ ಅದರಂತೆ ನಡೆಯದೆ ಇರುವುದರಿಂದ, ಇದು ಅಕ್ರಮ, ಸರಿಯಾದ ಕ್ರಮವಲ್ಲ. ಖೋತಾ ನಿರ್ಣಯವನ್ನು ಮಂಡಿಸಿದವರಿಗೆ ಅವರ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಅವಕಾಶ ಕೊಡಬೇಕಾಗುತ್ತೆಂದು ನನ್ನ ಅಭಿಪ್ರಾಯ.

(Sri S. M. Krishna rose)

Mr. SPEAKER.—Is the hon. member raising a fresh point of order?

Sri S. M. KRISHNA (Maddur).—I am supporting the point of order.

Mr. SPEAKER.—There is nothing like supporting a point of order. If I want clarification I will ask for it.

ಶ್ರೀ ಎಸ್. ಎಂ. ಕೃಷ್ಣ.—ನಿನ್ನೆ ನನಗೆ ಗೊತ್ತಿರುವಂತೆ, ಈ ಸಭೆಯನ್ನು ಮುಂದುವರಿಸಿ ಐದು ಗಂಟೆಯವರೆಗೆ ಸದಸ್ಯರು ಮಾತನಾಡಬಹುದೆಂದಿದ್ದೆವು. ಆದರೆ ಈಗ ತಿಳಿಸಿರುವಂತೆ ನಾಲ್ಕುಗಂಟೆಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ಹೀಗೆ ನಿನ್ನೆಯ ಪ್ರಕಾರ ಐದು ಗಂಟೆಗೆ ಮಂತ್ರಿಗಳ ಉತ್ತರ ಪ್ರಾರಂಭವಾಗುತ್ತದೆಂದಿದ್ದುದು ಮತ್ತೆ ಈಗ ನಾಲ್ಕುಗಂಟೆಗೆ ಅವರ ಉತ್ತರ ಪ್ರಾರಂಭ ವಾಗುತ್ತದೆಂದರೆ, ಈ ಮನೋಭಾವ ನಮ್ಮಲ್ಲಿ ಕೆಲವರಿಗೆ ವಿಸ್ಮಯವನ್ನುಂಟು ಮಾಡಿದೆ. ಆದುದರಿಂದ ದಯೆಯಿಟ್ಟು ತಾವು ಸರ್ಕಾರದ ಹಿತವನ್ನು ಕಾಪಾಡುವುದೊಂದೇ ಅಲ್ಲ, ನಮ್ಮ ಹಿತವನ್ನೂ ಕೂಡ ಇದುವರೆಗೆ ಕಾಪಾಡಿಕೊಂಡು ಬಂದಿದ್ದೀರಿ, ಇನ್ನುಮುಂದೆ ಕೂಡ ಅದೇರೀತಿ ಮಾಡುತ್ತೀರಿ ಎಂಬ ನಂಬಿಕೆ ಸಹ ನಮಗಿದೆ. ತಾವು ಕೊಟ್ಟಿರುವ ರೂಲಿಂಗನ್ನು ನಾನು ಪ್ರಶ್ನೆ ಮಾಡುತ್ತಿಲ್ಲ. ಆದರೆ ನಾವು ಸರ್ಕಾರದಿಂದ ನಿರೀಕ್ಷೆ ಮಾಡುವುದು ಕೊಂಚಮಟ್ಟಿಗಾದರೂ ನಮ್ಮ ವಿಚಾರದಲ್ಲಿ ಸಹಾನುಭೂತಿ. ಅದನ್ನು ತೋರಿಸುವ ಮನೋಭಾವ ತಮ್ಮಲ್ಲಿದ್ದರೆ ಸಾಕು ಎಂಬುದೇ ನನ್ನ ಆಶೆ.

ಶ್ರೀ ಎಂ. ವಿ. ಕೃಷ್ಣಪ್ಪ.—ಮಾನ್ಯ ಸದಸ್ಯರು 9 ಗಂಟೆಗಳ ಕಾಲ ಮಾತನಾಡಿದ್ದಾರೆ. ಅವರು ಮಾಡಿರುವ ಆರೋಪಗಳಿಗೆ ಸರ್ಕಾರ ಉತ್ತರ ಕೊಡಬೇಕು. 3-4 ಮುಖ್ಯ ಇಲಾಖೆಗಳ ವಿಷಯದಲ್ಲಿ 4 ಮಂತ್ರಿಗಳು ಉತ್ತರ ಕೊಡಲು 3 ಗಂಟೆಯಾದರೂ ನಮಗೆ ಬೇಕು. ಚರ್ಚೆಮಾಡು ವಾಗ ಬಯ್ದಿರುವುದಕ್ಕೆ ಉತ್ತರ ಕೊಡಬೇಕಾದ್ದೂ ನಮ್ಮ ಕರ್ತವ್ಯ.

Sri S. M. KRISHNA.—Sir, I take objection to that word "ಬಯ್ದಿರು ವುದು"

Sri M. V. KRISHNAPPA.—If you take objection, I will withdraw that word.

Sri K. LAKKAPPA.—I rise to a point of order, Sir. ಮಾನ್ಯ ಮಂತ್ರಿಗಳು ಈ ಸಭೆಯ ಘನತೆ ಗೌರವಕ್ಕೆ ಬೆಲೆ ಕೊಡದೆ ಸದಸ್ಯರು ಬಯ್ದರೆಂದು ಹೇಳಿದರು. ನಾವೇನು ಬಯ್ದಿರುವುದು ? ಆ ರೀತಿ ಅವರು ಹೇಳಬಹುದೆ ?

Mr. SPEAKER.—The members have to raise a point of order and not pass remarks. Has the hon. member got anything to say that "ಬಯ್ದಿರುವುದು" is unparliamentary ?

Sri K. LAKKAPPA.—The Learned Speaker has several times stated that the hon'ble members must use dignified language, to maintain the dignity of the House.........

Mr. SPEAKER.—I am grateful to the hon. members for having brought to my notice this fact. In fact, in the ruling that I am going to give next week, I will touch on these matters.

ಶ್ರೀ ಎಂ. ವಿ. ಕೃಷ್ಣಪ್ಪ.—'ಬಯ್ದಿರುವುದು' ಎಂದು ಹೇಳಿದ್ದು ಅನ್ ಪಾರ್ಲಿಮೆಂಟರಿಯಾದರೆ ನಾನು ಆ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ.

ಶ್ರೀ ವಿ. ಎಂ. ದೇವ್ (ಗುಬ್ಬಿ).—ಮಂತ್ರಿಗಳು ಬಯ್ದರು ಎಂದು ಹೇಳದೆ ಒಳ್ಳೆಯ ಮನೋ ಭಾವದಿಂದ, ಹಾಗೆ ತಿಳಿದುಕೊಳ್ಳದೆ ಉತ್ತರ ಕೊಡಬೇಕು.

Mr. SPEAKER.—I have not given my ruling on the point raised by Sri Gopala Gowda.

Sri M. V. KRISHNAPPA.—Sir, Government requires more than 2½ hours. Hon'ble Members have made criticism for a period of nine hours and to reply appropriately all the four Ministers require four hours.

Sri C. J. MUCKANNAPPA.—If the Government are so serious, we are prepared to sit for another hour more.

ಶ್ರೀ ಜಿ. ವಿ. ಗೌಡ.—ಸಾಮಾನ್ಯವಾಗಿ ಬೇಡಿಕೆಗಳನ್ನು ಕ್ಲಬ್ ಮಾಡುವಾಗ ಹಿಂದೆ ಬೇರೆ ರೀತಿ ಮಾಡುತ್ತಿದ್ದರು. ಪಶುಪಾಲನೆ ಮತ್ತು ವ್ಯವಸಾಯ.........

Mr. SPEAKER.—What is it that the member is saying ? Is he going to give me his views or his proposal ?

Sri G. V. GOWDA.—At least in the future.........

Mr. SPEAKER.—Let us go through the present point.

With regard to the point raised by Sri Gopala Gowda, I do not think that there is any point of order in it. Because he is under the impression that the House agreed that the debate would go on till 5 o'clock and thereafter the Ministers would reply. My question with regard to the time that might be required by Hon'ble Ministers was a sort of tentative assessment. There cannot be a complete assessment until the debate is over. Today's debate, they could not anticipate and find out what they have to say and what they have not to say. I asked yesterday that we may apportion the time as to how much time is required for members, whether they require 20 minutes or more. Whenever it is said that a certain time is required, it is not a rigid thing, which can be taken as a term of contract and therefore binding. Yesterday, there was nothing of that type. Knowing the situation and generally assessing the sense of the House, I said at that time that we could go on till 5 P.M. That was not a ruling. I must give the Ministers a chance to reply so that anyting said against them may be defended. More or less, you have put them on the defensive. A person who is put on defence should get every opportunity to defend himself. That is an elementary principle of debate. How can I permit the suggestion that is made that we may sit for an hour more ? It has come for the first time now. To say that the Ministers should not be given time, and that I should put it to them to cut down their reply—all this is not possible. This sort of a thing has not happened for the first time. Our Legislature is not new, nor is it sitting for the first time. We had all our past experience. Has there been at any time any occasion when a Minister was denied the chance to reply ? To the extent that he desires, I should give him time. Again, I am very much embarassed when you say that I must be pleased to persuade the Ministers and that it is in my discretion. It is not in my discretion. The matter rests with the House and not with the Speaker. I am here to regulate the debate. If I try to be of use, it is only with a view to help the debate so that maximum utility may be had. I have absolutely no powers. My powers are zero. My discretion which is subsisting in me is really no discretion. I am not expected to participate, but in seeing that order is maintained, and that rules are observed. In the observance of the rules, I should see that no disturbance is made when a person is speaking. That is what I have been finding it difficult to enforce. And, it is due affection on my part for the members. I treat them equally as my own-brothers. It is not as if there should be no disturbance. The debate becomes lively sometimes

if there are one or two interruptions. But to degenerate to a level of this type is a thing I do not understand. I do not know why it happens. The Minister will kindly begin now.

ಶ್ರೀ ಎಂ. ವಿ. ಕೃಷ್ಣಪ್ಪ.—ಪಶುವೈದ್ಯ ಮತ್ತು ಪಶು ಸಂಗೋಪನ ವಿಷಯದಲ್ಲಿ ಮಾನ್ಯ ಸದಸ್ಯರು ಅನೇಕ ಉಪಯುಕ್ತವಾದ ಸಲಹೆಗಳನ್ನು ಕೊಟ್ಟಿದ್ದಾರೆ.

Sri C. J. MUCKANNAPPA.—What is a ruling Sir ?

Mr. SPEAKER.—The point of order has been ruled out.

Sri C. J. MUCKANNAPPA.—The chair did not say so.

Mr. SEPEAKER.—I said that I was unable to accept. I will now say again that there is no point of order.

ಶ್ರೀ ಎಸ್. ಗೋಪಾಲ ಗೌಡ.—ನಾವು ಕೆಲವರು ಹೆಚ್ಚು ಸಲ ಈ ಚರ್ಚೆಯಲ್ಲಿ ಭಾಗವಹಿಸುತ್ತಿದ್ದೇವೆ. ಅದಕ್ಕೆ ಕೆಲವು ಕಾರಣಗಳಿವೆ. ನಾವು ಜೋತಾ ಸೂಚನೆಗಳನ್ನು ಕಳುಹಿಸಿರುತ್ತೇವೆ. ಆದುದರಿಂದ ಆ ವಿಷಯದ ಮೇಲೆ ಸ್ವಲ್ಪ ಹೇಳಬೇಕಾದ್ದಿರುತ್ತದೆ. ಎಲ್ಲ ವಿಷಯಗಳ ಮೇಲೂ ನಾವು ಮಾತನಾಡಬೇಕಾಗಿಲ್ಲ. ಬೇರೆಯವರು ಹೇಳಿದ್ದನ್ನು ಹೇಳಬೇಕಾದ್ದಿಲ್ಲ. ಆದರೆ ನಾವು ಹೇಳಬೇಕಾದ್ದನ್ನು ಹೇಳುವುದು ನಮ್ಮ ಕರ್ತವ್ಯ. ಅದಕ್ಕೆ ತಮ್ಮಲ್ಲಿ ಪ್ರಾರ್ಥನೆ ಮಾಡುವುದು, ಬೆಳಿಗ್ಗೆಯೇ ನಿಮ್ಮನ್ನು ಕರೆಯುತ್ತೇನೆ ಅಥವಾ ಇಲ್ಲ ಎಂದು ಸೂಚನೆ ಕೊಟ್ಟರೆ, ನಾವು ನಮ್ಮ ಇತರ ಕೆಲಸಗಳಿಗೆ ಗಮನ ಕೊಡಬಹುದು. ಇದೇ ನಾನು ತಮ್ಮಲ್ಲಿ ಮಾಡಿಕೊಳ್ಳತಕ್ಕ ಪ್ರಾರ್ಥನೆ. ಮೂರುಗಂಟೆ ಕಾಲವಿರುವಾಗ 20 ನಿಮಿಷವಾದರೂ ಕೊಡಲಿ ಎಂದು ನಾನು ಕೇಳಿದೆನೇ ಹೊರತು ಇನ್ನೇನೂ ಇಲ್ಲ. ಈಗ ಅವಕಾಶ ದೊರೆಯಲಿಲ್ಲ. ವಾಸ್ತವವಾಗಿ ಕೇಳುವಂಥಾದ್ದೇನೂ ಇಲ್ಲ. ಆದುದರಿಂದ ನಾನು ಹೊರಗೆ ಹೋಗುವುದಕ್ಕೆ ಈಗ ಅಪ್ಪಣೆ ಕೊಡಬೇಕೆಂದು ಕೇಳಿ ಹೊರಡುತ್ತೇನೆ.

Mr. SPEAKER.—Let the Hon'ble Member resume his seat.

ಶ್ರೀ ವಿ. ಎಂ. ದೇವ್.—ಹೌಸ್ ಆಫ್ ಕಾಮನ್ಸ್‌ನಲ್ಲಿ ರಾತ್ರಿಯೆಲ್ಲಾ ಕುಳಿತುಕೊಳ್ಳುತ್ತಾರೆ. ನಮಗೆ ಒಂದು ಗಂಟೆಯಾದರೂ ಜಾಸ್ತಿ ಅವಕಾಶ ಕೊಡಬೇಕು. It was unforeseen that they would begin at 4 O'clock.

Mr. SPEAKER.—I have understood the member fully—new situation—unforeseen circumstances.

ಶ್ರೀ ಎಂ. ವಿ. ಕೃಷ್ಣಪ್ಪ.—ಗೋಪಾಲನ ವಿಷಯದಲ್ಲಿ ಮಾತನಾಡುವಾಗಲಾದರೂ ಸಹ ಗೋಪಾಲಗೌಡರು ಇರಬೇಕೆಂದು ಅವರಲ್ಲಿ ಮೊದಲನೆಯದಾಗಿ ಪ್ರಾರ್ಥನೆ.

Mr. SPEAKER.—Sri Gopala Gowda observed that he would like to be told in the morning as to whether he would get a chance by the evening. Is it possible for me ?

Sri C. J. MUCKANNAPPA.—Certainly it is possible.

Mr. SPEAKER.—Do I need that interjection ?

Sri C. J. MUCKANNAPPA.—I am not here to set right the mistakes of the Speaker. There is a different place for that.

Mr. SPEAKER.—I am aware of your right to take it. I will leave it at that. You will kindly realise that when I say something if you do not have patience, I cannot possibly help. If you don't have patience, I am not permitting any interjection.

Now I said, 'it may not be possible for me'. The interjection was 'certainly, Sir'; how is it possible ? How do I know at what time the member will conclude ? How many minutes he will take ?

Sri C. J. MUCKANNAPPA.—The chair has got every right. Please do not drag me into that arena, Sir.

Mr. SPEAKER.—The member should not put that question. When Sri Gopala Gowda has said something, I am bound to answer. I am saying that Sri Gopala Gowda's idea that he will not sit down and hear the Debate is something which does not appeal to me. I would make a personal request that he should remain and see if there is anything. The other work may be important. But I say that the work of this House is also equally important. We are here as representatives discussing the budget. Therefore, I would suggest to him that he may not retire for the rest of the day.

Sri C. J. MUCKANNAPPA.—Is it the intention of the Government that we should not be given time ?

Mr. SPEAKER—I have got too high a regard and too great an opinion about the intelligence of the Hon'ble Member because I know that he understands what he means.

Sri C. J. MUCKANNAPPA.—No Sir, if I had been intelligent, I would have been occupying some higher place.

Mr. SPEAKER.—Nobody will agree with the member if he says that he is not intelligent.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಇಲ್ಲಿ ಬಂದಿರತಕ್ಕ ಸದಸ್ಯರು ಮಾತನಾಡುವುದಕ್ಕೆ ಅವಕಾಶವೇ ಕೊಡಬಾರದು. ಇಲ್ಲಿ ಒಂದು ಅವಕಾಶವನ್ನು ಉಪಯೋಗಿಸಿಕೊಂಡು ನಾವು ಏನು ಬೇಕಾದರೂ ಮಾಡಬಹುದು ಎಂಬ ಸರ್ಕಾರದ ಈ ಒಂದು ಮನೋಭಾವ ಏನಿದೆ ಅದಕ್ಕೆ ವಿರುದ್ಧ...

Mr. SPEAKER.—If the Hon'ble Minister has not yielded, his continuing to speak with a loud voice will not be good. He may ask the Minister to yield.

Sri C. J. MUCKANNAPPA.—In these things, one may not be very rigid. If a particular member gets up in the house here, if you begin to say that the Minister has not yielded, what right you have got to speak and all that, it is rather difficult. Even now Sir, with a protest against the adament behaviour of the Government in shutting out the Members of this House in participating in this discussion, on the following Demands, I along with my friends stage a walk-out.

Mr. SPEAKER.—Protests are not always welcome and they may be used with greater caution.

(At this stage Sri C. J. Muckannappa, Sri Deo, Sri S. Gopala Gowda and others left the House).

ಶ್ರೀ ಎಂ. ವಿ. ಕೃಷ್ಣಪ್ಪ.—ಪಶುಪಾಲನೆ ವ್ಯವಸಾಯಗಾರರಿಂದ ಕೂಡಿರುವ ಈ ದೇಶದಲ್ಲಿ ಬಹಳ ಮುಖ್ಯವಾದುದು. ನಾನು ನೋಡಿರುವಂತೆ ಪ್ರಪಂಚದ ನಾನಾದೇಶಗಳಲ್ಲಿ ಎಲ್ಲೆಲ್ಲಿ ವ್ಯವಸಾಯ ಮುಂದುವರಿದಿದೆಯೋ ವ್ಯವಸಾಯವನ್ನೇ ನಂಬುವವರು ಸುಖ ಸಂತೋಷದಿಂದ ಇದ್ದಾರೊ ಅಲ್ಲೆಲ್ಲಾ ಪಶು ಸಂಪತ್ತನ್ನು ಬಹಳವಾಗಿ ಅಭಿವೃದ್ಧಿ ಪಡಿಸಿಕೊಂಡಿದ್ದಾರೆ. ನಮ್ಮ ದೇಶದಲ್ಲೂಕೂಡ ಪರದೇಶಗಳಿಗಿಂತಲೂ ಪಶುಗಳ ವಿಷಯದಲ್ಲಿ ಬಹಳ ಗೌರವದಿಂದ ಅವನ್ನು ಬೆಳೆಸಿಕೊಂಡು ಬಂದಿದ್ದೇವೆ. ಆದರೆ ಈ ಪಶುಗಳು ಕಾರಣಾಂತರದಿಂದ, ಈಗ ದೇಶಕ್ಕೆ ಎಷ್ಟು ಉಪಯೋಗಕರವಾಗಿ ಇರಬೇಕೊ ಅಷ್ಟು ಉಪಯೋಗಕರವಾಗಿ ಇಲ್ಲ ಎಂಬುದು ವ್ಯವಸಾಯಗಾರರಾದ ಮಾನ್ಯ ಸದಸ್ಯರಿಗೆ ಗೊತ್ತಿದೆ. ಪದೇ ಪದೇ ಹೇಳುತ್ತಾ ಇದ್ದೇನೆ ರೈತ ದೇಶಕ್ಕೆ ಬೆನ್ನು ಮೂಳೆಯಾದರೆ ರೈತನಿಗೆ ಬೆನ್ನು ಮೂಳೆ ಇದ್ದಹಾಗೆ ಪಶುಗಳು ಇವೆ. ಪ್ರಪಂಚದ ಯಾವದೇಶದಲ್ಲಿ ರೈತ ಸುಖವಾಗಿದ್ದಾನೋ ಅವನಿಗೆ ಮುಖ್ಯವಾದ ಉತ್ಪನ್ನ ಪಶುಗಳಿಂದ ಬರುತ್ತದೆ. ಈ ದೇಶದಲ್ಲಿ ಪಶು ಸಂಗೋಪನ ಮತ್ತು ಪಶು ವೈದ್ಯದ ವಿಷಯದಲ್ಲಿ ಆಗಾಗ್ಗೆ ಕೆಲವು ಟೀಕೆಗಳು ಬರುತ್ತಿವೆ. ರೈತನಿಗೆ ಅನುಕೂಲವಾಗುವಂತೆ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿಲ್ಲ

ಪರಿಣತರು, ತಜ್ಞರು ಇಲ್ಲ. ಎಂದು ಆರೋಪಣೆ ಇದೆ. ಈ ವಿಷಯದಲ್ಲಿ ಮಾನ್ಯಸದಸ್ಯರು ಅಕ್ಕರೆಯಿಂದ ಮುತುವರ್ಜಿ ವಹಿಸಿ ಮಾತನಾಡಿದುದನ್ನು ಸ್ವಾಗತಿಸುತ್ತೇನೆ. ಒಂದು ಪ್ರಾರ್ಥನೆ ಇಷ್ಟೆ. ನಮಗೆ ಎಷ್ಟು ತೊಂದರೆಗಳಿವೆ ಎಂಬುದನ್ನು ತಿಳಿದುಕೊಳ್ಳಬೇಕು. ಮನುಷ್ಯ ಸಾಮಾನ್ಯವಾಗಿ ಪಶುಗಳನ್ನು ಅನಾದರಣೆ ಮಾಡುತ್ತಾ ಬಂದಿದ್ದಾನೆ. ನಮ್ಮ ಸಂಸ್ಥಾನದ ವಿಷಯ ತೆಗೆದುಕೊಳ್ಳುವುದಾದರೆ. ಮನುಷ್ಯನಿಗಾಗಿ ವೈದ್ಯ ಇಲಾಖೆಗೆ 8 ಕೋಟಿ ರೂಪಾಯಿಗಳನ್ನು ಖರ್ಚುಮಾಡುತ್ತಾ ಇದ್ದೇವೆ. ಪಶು ಸಂಗೋಪನ ಮತ್ತು ಪಶು ವೈದ್ಯ ಇಲಾಖೆಗೆ 1 ಕೋಟಿ 40 ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. 560 ಆಸ್ಪತ್ರೆಗಳು ಇವೆ. 55 full key village centres ಇವೆ. 250 sub-centres ಇವೆ. ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್ಸ್ 14-15 ದೊಡ್ಡ ಫಾರಂಗಳು ಇವೆ. ಇನ್ನೂ ಅನೇಕ ಕುರಿ, ಕೋಳಿ, ಹಂದಿ, ಫಾರಂಗಳು ಇವೆ. ಈ ಪಶು ವೈದ್ಯ ಇಲಾಖೆ ಎಷ್ಟು ದೊಡ್ಡದು ಎಂಬುದು ನಮಗೆ ಗೊತ್ತಿದೆ. 2 ಕೋಟಿ 30 ಲಕ್ಷ ಜನರು ಇದ್ದಾರೆ ಅಷ್ಟೆ ಹೆಚ್ಚು ಕಡಮೆ ದನಗಳೂ ಇವೆ. 2 ಕೋಟಿ 30 ಲಕ್ಷ ಜನಗಳಿಗೆ 8 ಕೋಟಿ ರೂಪಾಯಿ ಡಾಕ್ಟರೂ ಮತ್ತು ಔಷಧಿಗಳಿಗೆ ಖರ್ಚು ಮಾಡಿದರೆ 2 ಕೋಟಿ 30 ಲಕ್ಷ ಪಶುಗಳಿಗೆ 1 ಕೋಟಿ 40 ಲಕ್ಷ ರೂಪಾಯಿ ಖರ್ಚುಮಾಡುತ್ತೇವೆ. ಇದರಲ್ಲಿ ಪಶುಸಂಗೋಪನೆಯೂ ಸೇರಿಕೊಂಡಿದೆ. Breeding as well as diarying ಆಸ್ಪತ್ರೆಗಳನ್ನು ನಡೆಸುವುದಕ್ಕೆ ತಜ್ಞರು ಇಲ್ಲ. ಅಕಸ್ಮತ್ತಾಗಿ ಇದ್ದರೂ ಹಣ ಇಲ್ಲದೆ ಔಷಧಿ ಇಲ್ಲ, ಸಲಕರಣೆಗಳು ಇಲ್ಲ. ಕಟ್ಟಡದ ಫಂಡೂ ಇಲ್ಲ. ವೆಟರ್ನರಿ ಇಲಾಖೆಯ ಬಡ್ಜೆಟ್ ಅಂಕಿ ಅಂಶ ನೋಡಿದರೆ ಆಸ್ಪತ್ರೆ ಕಟ್ಟುವುದಕ್ಕೆ ಮೂರು ಕಾಸು ಇಲ್ಲ. ಎಷ್ಟೋ ಆಸ್ಪತ್ರೆಗಳನ್ನು ದಾನಿಗಳು ಕಟ್ಟಿಸಿದ್ದಾರೆ. ಈ ರೀತಿ ಪಶು ಅಭಿವೃದ್ಧಿಗೆ ಅನಾದರಣೆ ಮಾಡುತ್ತಾ ಬಂದದ್ದರಿಂದ 1 ಕೋಟಿ 40 ಲಕ್ಷ ರೂಪಾಯಿಗಳನ್ನು ಕೊಟ್ಟು full fledged ಆಸ್ಪತ್ರೆ ಪ್ರಾರಂಭ ಮಾಡಿ ಕೆಲಸ ಕಾರ್ಯಗಳನ್ನು ಮಾಡಿಸಿ ಎಂದರೆ ಯಾರಿಂದಲೂ ಸಾಧ್ಯವಾಗುವುದಿಲ್ಲ. ಈ ರೀತಿ ನಮ್ಮ ಕಷ್ಟ ಹೋಗಲಾಡಿಸಬೇಕೆಂದೇ ಹೋಬಳಿ ಹೋಬಳಿಯಲ್ಲಿ ಪಶು ವೈದ್ಯಶಾಲೆಯನ್ನು ಮಾಡಿದ್ದೇವೆ. 460 ಪಶು ವೈದ್ಯಶಾಲೆಗಳು ನಡೆಯುತ್ತಾ ಇವೆ. ಹಣದ ಅಭಾವದಿಂದ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಸೆಂಟರ್ಸ್‌ಗೆ ಸಾಕಾದಷ್ಟು ಸಲಕರಣೆಗಳನ್ನು ಒದಗಿಸಲು ಸಾಧ್ಯವಾಗಿಲ್ಲ. ವೆಟರ್ನರಿ ಕಾಲೇಜನ್ನು ಬಹಳ ಪುರಾತನವಾಗಿಯೇ ಸ್ಥಾಪನೆಮಾಡಿದ್ದೇವೆ. ಎಷ್ಟು ಜನ ಡಾಕ್ಟರುಗಳು ಇರಬೇಕೋ ಅಷ್ಟು ಇಲ್ಲ. ಹೋದವರ್ಷ ಇಪ್ಪತ್ತೈದು ಜನ ಗ್ರಾಜುಯೇಟ್ಸ್ ಆಗಿದ್ದಾರೆ ಈ ವರ್ಷ 50 ಜನ ಗ್ರಾಜುಯೇಟ್ಸ್‌ಗಳಾಗಿ ಬರುವವರಿದ್ದಾರೆ. ಇನ್ನು ಒಂದೆರಡು ವರ್ಷಗಳಲ್ಲಿ ಮೈಸೂರು ಸಂಸ್ಥಾನದಲ್ಲಿರುವ 500-600 ಎಲ್ಲಾ ಆಸ್ಪತ್ರೆಗಳಲ್ಲೂ ವೆಟರ್ನರಿ ಡಾಕ್ಟರುಗಳು ಇರುವ ಪರಿಸ್ಥಿತಿ ಬರುತ್ತದೆ ಅದರಲ್ಲಿ ಅನುಮಾನವಿಲ್ಲ. ಆದರೆ ಡಾಕ್ಟರುಗಳು ಮತ್ತು ಔಷಧಿ ಸಲಕರಣೆಗಳಿದ್ದರೂ ಕೂಡ ಒಳ್ಳೆಯ ಕಟ್ಟಡ ಕಟ್ಟಿಸದಿದ್ದರೆ ಈ ತೊಂದರೆ ಬಗೆಹರಿಯುವುದಿಲ್ಲ. ಸರ್ಕಾರದವರು ಹಣ ಖರ್ಚುಮಾಡಿಲ್ಲ ಎಂದು ಅಲ್ಲ ಪೂರ್ವದಿಂದಲೂ ಎಂದರೆ ಅಶೋಕನ ಕಾಲದಿಂದಲೂ ಪಶುಗಳ ಮೇಲೆ ಅಕ್ಕರೆಯಿಂದ, ಪ್ರೇಮದಿಂದ ಹಣ ಖರ್ಚು ಮಾಡಿದ್ದರೂ ಕೂಡ ಎಷ್ಟು ಹಣ ಬೇಕೋ ಅಷ್ಟು ಇಲ್ಲದ ಕಟ್ಟಡಗಳನ್ನು ಕಟ್ಟಿಲ್ಲ. ಯಾರಾದರೂ ದಾನಿಗಳು ಮುಂದೆ ಬಂದು ಒಂದು ಮುರುಕಲು ಮನೆ ಕೊಡಬೇಕು ಅಲ್ಲಿ ಆಸ್ಪತ್ರೆ ಸ್ಥಾಪನೆ ಮಾಡಬೇಕು. ಈ ಒಂದು ಪರಿಸ್ಥಿತಿಯಲ್ಲಿ ಯಾವ ದಕ್ಷ ಅಧಿಕಾರಿಯೇ ಆಗಲೀ ಮಂತ್ರಿಯೇ ಆಗಲೀ ಬಂದರೂ ಕೂಡ ಈ ಇಲಾಖೆಯಲ್ಲಿ ಸಾಕಾದಷ್ಟು ಹಣ ಇಲ್ಲದೆ ಸರಿಯಾಗಿ ನಡೆಸುವುದಕ್ಕಾಗುವುದಿಲ್ಲ ಎಂದು ಮೊದಲನೆಯದಾಗಿ ತಮ್ಮ ಗಮನಕ್ಕೆ ತರುತ್ತೇನೆ.

ಈ ದೇಶದಲ್ಲೂ ಬೇಕಾದಷ್ಟು ದನಗಳಿವೆ. ಒಳ್ಳೆಯ ಜಾತಿ ದನಗಳೂ ಇವೆ. ಇವುಗಳಲ್ಲಿ ಮುಖ್ಯವಾದವು ಹಳ್ಳಿಕಾರ್, ಅಮೃತಮಹಲ್ ಜಾತಿ ದನಗಳು ನಮ್ಮಲ್ಲಿವೆ. ಇನ್ನು ಉತ್ತರ ಕರ್ಣಾಟಕದಲ್ಲಿ ರಾಯಚೂರು, ಬಿಜಾಪುರ, ಗುಲ್ಬರ್ಗ ಇಂತಹ ಕಡೆಗಳಲ್ಲೂ ಕಿಲಾರಿ-ದೇವಣಿ ಇತ್ಯಾದಿ ಒಳ್ಳೆ ತಳಿ ದನಗಳಿರುತ್ತವೆ. ಇನ್ನು ಮಲೆನಾಡು ಪ್ರದೇಶದಲ್ಲೂ ಮಂಗಳೂರು ಪ್ರಾಂತ್ಯದಲ್ಲೂ ಮಲೆನಾಡು ಗಿಡ್ಡ ಎಂದು ಒಂದು ಜಾತಿ ದನಗಳಿರುತ್ತವೆ. ಹೀಗೆ ನಮ್ಮಲ್ಲೂ ನಾಲ್ಕೈದು ಜಾತಿಯ ಒಳ್ಳೇ ದನಗಳಿವೆ. ಆದರೆ ಇವುಗಳೆಲ್ಲ ಈಗ ಲಾಪ್‌ಸೈಡೆಡ್ ದನಗಳಾಗಿವೆ. ಆದರೆ ಇವುಗಳೆಲ್ಲ ಇಲ್ಲಿಯ ತನಕ ಕೇವಲ ಒಳ್ಳೆಯ ಹೋರಿಗಳನ್ನು ಮಾತ್ರ ಕೊಡುತ್ತಿದ್ದವು. ಆದರೆ ಅಷ್ಟು ಹೆಚ್ಚು ಹಾಲನ್ನು ಕರೆಯುತ್ತಿರಲಿಲ್ಲ. ಆದರೆ ಈಗ ಈ ದನಗಳು ಒಳ್ಳೆಯ ಹಾಲನ್ನು ಸಹ ಕೊಡುವ ಹಾಗೆ ಈ ತಳಿಯನ್ನು ಉತ್ತಮ ಮಾಡತಕ್ಕ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಈ ವಿಚಾರದಲ್ಲಿ ಈ ದಿವಸ ಕೇಂದ್ರ ಸರ್ಕಾರದವರು ಎಲ್ಲ ರಾಜ್ಯ ಸರ್ಕಾರಗಳಿಗೂ ಈ ಪಶು ವೈದ್ಯ ಶಾಲೆಗಳನ್ನು ರಿವ್ಯೂ ಮಾಡಿ ಕೇವಲ ಉತ್ತಮ ತಳಿ ಹೋರಿಗಳೊಂದನ್ನೇ ತಯಾರಿಸದೆ ಒಳ್ಳೆ ಹಾಲನ್ನೂ ಸಹ ಕೊಡತಕ್ಕಂಥ ತಳಿಗಳನ್ನು ಬೆಳೆಸಬೇಕೆಂತ ಹೇಳಿದ್ದಾರೆ. ಆದುದರಿಂದ ನಾವೀಗ ಈ ಎರಡನ್ನೂ ಅಭಿವೃದ್ಧಿಗೆ ತರಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ. ನಾನು ಈ ಹಿಂದೆ

(ಶ್ರೀ ಎಂ. ವಿ. ಕೃಷ್ಣಪ್ಪ)

ಒಂದಾವರ್ತಿ ಸ್ವಿಟ್‌ಸರ್‌ಲೆಂಡಿಗೆ ಹೋಗಿದ್ದಾಗ ಅಲ್ಲಿ ಒಬ್ಬ ಶ್ರೀಮಂತರ ಮನೆಯಲ್ಲಿ ಎರಡು-ಮೂರು ದಿವಸ ಉಳಿದಿದ್ದೆ. ಅವರ ಮನೆಯಲ್ಲಿ ಅಸ್ಟ್ರಿನ್ ಬ್ರೆಜಿಯರ್ ಎಂಬ ಒಂದು ಜಾತಿ ಹಸು ಇತ್ತು. ಆ ಹಸು ದಿನ ಒಂದಕ್ಕೆ 30 ಸೇರು ಹಾಲನ್ನು ಕರೆಯುತ್ತಿತ್ತು. ಆದರೆ ಅದೇ ಆಸ್ಟ್ರಿನ್ ಬ್ರೆಜಿಯರ್ ಜಾತಿ ಆಕಳು ಇಲ್ಲಿಗೆ 60-70 ವರ್ಷಗಳ ಹಿಂದೆ ಕೇವಲ ದಿನಕ್ಕೆ 2-3 ಸೇರು ಹಾಲನ್ನು ಮಾತ್ರ ಕರೆಯುತ್ತಿತ್ತಂತೆ. ಆದರೆ ಅದೇ ತಳಿ ಹಸುವನ್ನು ಈ ದಿವಸ ದಿನಕ್ಕೆ 30 ಸೇರು ಹಾಲು ಕರೆಯು ವಂತೆ ಅಭಿವೃದ್ಧಿ ಮಾಡಿದ್ದಾರೆ. ಆದರೆ ಈ ದಿವಸ ನಾವಾದರೂ ನಮ್ಮ ದೇಶದಲ್ಲಿ ಈ ಮೂರನ್ನು ಅಂದರೆ Three in one ಸ್ಕೀಮನ್ನು ಜಾರಿಗೆ ತಂದು ನಮ್ಮ ಹಸುಗಳನ್ನು ಅಭಿವೃದ್ಧಿ ಮಾಡಿ, ಒಳ್ಳೇ ಹೋರಿಗಳನ್ನು ಬೆಳೆಸುವಂತೆ ಮಾಡಬೇಕೆಂತ ಇದ್ದೇವೆ.

4-30 P.M.

It should be a meniature of a Sindhri Factory. You know Sindhri factory supplies 415 lakhs tons of fertiliser. It should be a Chittaranjan factory where locomotives are manufactures. Our bullocks should be as strong as that.

ಚಿತ್ತರಂಜಿನಿ ಎಂತ ಲೋಕೋಮೋಟೀವ್ ರೈಲ್ವೆ ಎಂಜಿನ್‌ಗಳನ್ನು ತಯಾರಿಸುವ ಕಾರ್ಖಾನೆ ಯಿದೆ. ಈ ದಿವಸ ಹಿಂದೂಸ್ಥಾನದಲ್ಲಿ ರೈಲ್ವೆ ಎಂಜಿನ್‌ಗಳು ಎಷ್ಟು ಭಾರವನ್ನು ಎಳೆಯುತ್ತವೆಯೋ ಅದರ 6 ರಷ್ಟು ಗೂಡ್ಸ್‌ಗಳ ಭಾರವನ್ನು ಹಿಂದೂಸ್ಥಾನದಲ್ಲಿ ಈ ದಿವಸ ಈ ಎತ್ತುಗಳು ಎಳೆಯುತ್ತಿವೆ.

So, the idea is that our cow should be three in one :

It should be a meniature of a Sindhri factory, a Chittaranjan factory and a Aarey colony, that is, for milk.

ಹೇಗೆ ನಮ್ಮ ಹಸುಗಳು ಇನ್ನುಮುಂದೆ ಒಂದೊಂದು ಹಸುವೂ ದಿನಕ್ಕೆ 7-8 ಸೇರು ಹಾಲು ಕರೆಯುವುದರ ಜೊತೆಗೆ ಒಳ್ಳೇ ಹೋರಿ ಕರುಗಳನ್ನು ಅಂದರೆ ರೈತನ ಕೆಲಸಕ್ಕೆ ಭದ್ರವಾಗಿರುವಂಥ ಹೋರಿಗಳನ್ನು ಮತ್ತು ರೈತನ ಬೆಳೆಗೆ ಸಾಕಾಗುವಷ್ಟು ಗೊಬ್ಬರವನ್ನು ಸಹ ಒದಗಿಸುವಂತೆ ನಮ್ಮ ತಳಿಗಳನ್ನು ಉತ್ತಮ ಮಾಡಲು ಒಂದು ಯೋಜನೆಯನ್ನು ತಯಾರಿಸಲು ನಾವೀಗ ಹೊರಟಿದ್ದೇವೆ.

ಈ ಭಾಗದಲ್ಲಿ ಈಗಾಗಲೇ ನಮ್ಮ ಕೆಲ ಕೆಲವು ಯೋಜನೆಗಳು ಅಲ್ಲಲ್ಲೇ ಸಕ್ಸಸ್ ಆಗುತ್ತಿವೆ. ಈ ದಿವಸ ಈ ಕ್ರಾಸ್‌ಬ್ರೀಡ್ ಹಸುಗಳನ್ನು ತಯಾರಿಸತಕ್ಕ ಒಂದು ದೊಡ್ಡ ಕೇಂದ್ರ ಬೆಂಗಳೂರಿನಲ್ಲಿದೆ. ಇದಕ್ಕಾಗಿ ನಾವು 8 ಗೂಳಿಗಳನ್ನು ಆರ್ಡರ್ ಮಾಡಿ ತರಿಸಿ ಆ ನಮ್ಮ ಆಡುಗೋಡಿಯಲ್ಲಿ ಇಟ್ಟಿದ್ದೇವೆ. ಈಗಾಗಲೇ ನಮ್ಮ ಬೆಂಗಳೂರಿನಲ್ಲಿ ಈ ಗೂಳಿಗಳಿಂದ ಉತ್ಪತ್ತಿ ಯಾದಂತ 40 ಸಾವಿರ ಕ್ರಾಸ್‌ಬ್ರೀಡ್ ಹಸುಗಳಿರುತ್ತವೆ. ಇವು ಜಾತಿಯಲ್ಲಿ ಆ ಯೂರೋಪಿನ್ ಹಸುಗಳಿದ್ದಂತೆ ಕಾಣುತ್ತಿವೆ. ಈ 40 ಸಾವಿರ ಕ್ರಾಸ್‌ಬ್ರಿಡ್ ಆಕಳುಗಳು ಈ ದಿವಸ ಬೆಂಗಳೂರಿನಲ್ಲಿ ಇಲ್ಲದೆ ಹೋಗಿದ್ದರೆ ಈ ಹತ್ತು ವರ್ಷಗಳಿಂದ ವಿಶೇಷವಾಗಿ ಬೆಳೆಯುತ್ತಿರುವ ಈ ಬೆಂಗಳೂರು ನಗರದಲ್ಲಿ ಹಾಲಿಗೆ ಬದಲು ಬರಿ ನೀರನ್ನು ಕುಡಿದುಕೊಂಡಿರಬೇಕಾಗಿತ್ತು. ಈಗಲಾದರೂ ಆ ನೀರು ಮಿಶ್ರಿತ ಹಾಲು ದೊರೆಯುತ್ತಿದೆ. ಆದರೆ ಈ ದಿವಸ ನಾವು ಈ ಆಕಳುಗಳ ತಳಿಯನ್ನು ಅಭಿವೃದ್ಧಿ ಮಾಡದೆ ನಾವು ಆ ನಮ್ಮ ಹಳ್ಳಿಕಾರ್ ದನಗಳನ್ನೇ ನಂಬಿಕೊಂಡಿದ್ದರೆ ನಮಗೆ ಏನೂ ಪ್ರಯೋಜನವಾಗುತ್ತಿರಲಿಲ್ಲ. ಈಗ ನಮ್ಮ ಮಲೆನಾಡಿನಲ್ಲಿರತಕ್ಕ ಆ ಕರುಗಳನ್ನು ಹೀಗೆ ಅಭಿವೃದ್ಧಿಮಾಡಬೇಕಾಗಿದೆ. ಈ ಬಗ್ಗೆ ಈಗಾಗಲೇ ಒಂದು ಯೋಜನೆ ಸಿದ್ಧವಾಗಿ ಅದು ಕೇಂದ್ರ ಸರ್ಕಾರದಿಂದಲೂ ಅಂಗೀಕಾರ ಪಡೆದಿದೆ. ಈ ದಿವಸ ಮಲೆನಾಡಿನಲ್ಲಿರತಕ್ಕ ಹಸುಗಳು ದಿನಕ್ಕೆ ಕೇವಲ 1-2 ಸೇರು ಹಾಲನ್ನು ಕರೆಯುತ್ತಿವೆ-ಅವೇ ಹೆಚ್ಚು. ಆದರೆ ಈಗಾಗಲೆ ನಾವು ಈ ಮಲೆನಾಡಿನ ಹಸುಗಳ ಅಭಿವೃದ್ಧಿಗಾಗಿ ಬೆಂಗಳೂರಿನಿಂದ ಮಂಗಳೂರಿಗೆ ಜರ್ಸಿಬುಲ್‌ಗಳಿಂದ ಉತ್ಪತ್ತಿಯಾದ ಕ್ರಾಸ್‌ಬ್ರೀಡ್ 100-150 ಹಸುಗಳನ್ನು ಕಳುಹಿಸಿದ್ದೇವೆ. ಅಲ್ಲಿಯೂ ಒಂದು ಕೇಂದ್ರವಿದೆ. ಈಗ ಆ ಹಸುಗಳು ಕರುಹಾಕಿ-ಆ ಕರುಗಳು ಮತ್ತೆ ಕರು ಹಾಕಿರುತ್ತವೆ. ಈ ಹಸುಗಳೆಲ್ಲ ಆ ಮಲೆನಾಡು ಗಿಡ್ಡದ ತಳಿಗೆ ಸೇರಿದವುಗಳಾಗಿದ್ದರೂ ದಿನಕ್ಕೆ 32 ಪೌಂಡ್ ಹಾಲು ಕೊಡುತ್ತಿವೆ. ಆದರೆ ಇದೇ ಹಸುವಿನ ತಾಯಿ ದಿನಕ್ಕೆ 3 ಪೌಂಡ್ ಹಾಲನ್ನು ಕೊಡುತ್ತಿತ್ತು. ಈ ದಿವಸ ಆ ಮಂಗಳೂರಿನಲ್ಲಿರತಕ್ಕ ಹಸುಗಳು ದಿನಕ್ಕೆ 33-34 ಪೌಂಡ್ ಹಾಲನ್ನು ಕರೆಯುತ್ತಿವೆ.

ಈಗಾಗಲೇ ಈ ಉತ್ತಮ ತಳಿ ಹಸುಗಳನ್ನಿಡಲು ಆ ಮಲೆನಾಡಿಗೆ ಸಂಬಂಧಪಟ್ಟ ಹಾಗೆ-ಹಾಸನ ಸಕಲೇಶಪುರ-ಶಿವಮೊಗ್ಗ ಮತ್ತು ಉಡುಪಿ ಈ ಸ್ಥಳಗಳಲ್ಲಿ ಸೆಂಟರುಗಳನ್ನು ತೆರೆಯಲಾಗಿದೆ. ಈ ಕೇಂದ್ರಗಳ ಸ್ಥಾಪನೆಗಾಗಿ ಕೇಂದ್ರ ಸರ್ಕಾರ ಧನ ಸಹಾಯ ನೀಡುವುದಾಗಿ ಭರವಸೆ ಕೊಟ್ಟಿದೆ. ಈ ಬಗ್ಗೆ ಒಂದು ದೊಡ್ಡ ಸ್ಕೀಮನ್ನೇ ತಯಾರಿಸಿದ್ದೇವೆ. ಅದಕ್ಕೆ ಕೇಂದ್ರ ಸರ್ಕಾರದ ಅಪ್ರೂವಲ್ ಸಹ ದೊರೆತಿದೆ. ಆ ಮಲೆನಾಡಿನಲ್ಲಿ ದನಗಳಿಗೆ ಬೇಕಾದ ಒಳ್ಳೆಯ ಹುಲ್ಲು ದೊರೆಯುತ್ತದೆ. ಆ ಹುಲ್ಲು ಬೆಳೆಸುವ ಕಾರ್ಯವನ್ನು ಸಹ ಕೈಗೊಂಡು ಇದರ ಜೊತೆಯಲ್ಲೇ ನಾವು ಅದನ್ನು ಮುಂದು ವರಿಸಬೇಕೆಂದಿದ್ದೇವೆ. ನಮ್ಮಲ್ಲಿರತಕ್ಕ 23 ಕೀ ಸೆಂಟರ್ ವಿಲೇಜ್‌ಗಳಲ್ಲಿ ಈ ದಿವಸ 2 ಲಕ್ಷ ಒಳ್ಳೆ ದನಗಳನ್ನು ಹೆಚ್ಚಿಗೆ ಬೆಳೆಸಿರುತ್ತೇವೆ. ಈ ಸೆಂಟರುಗಳಲ್ಲಿ ಅಮೃತಮಹಲ್ ಮತ್ತು ದೇವಣಿ ಜಾತಿ ದನಗಳನ್ನು ಕ್ರಾಸ್‌ಬ್ರೀಡ್ ಮಾಡಿ ಮತ್ತೆ ಇವುಗಳಿಂದ 2 ಲಕ್ಷ ಕರುಗಳು ಹುಟ್ಟಿರುತ್ತವೆ. ಈ ಬಗ್ಗೆ ಈಗಾಗಲೇ 52 full-fledged artificial insemination centre ಗಳನ್ನು ಮಾಡಿರು ವುದರ ಜೊತೆಗೆ 250 ಸಬ್‌ಸೆಂಟರುಗಳನ್ನು ಮಾಡಿ ಅವುಗಳಿಗೆ ಸರಬರಾಯಿ ಮಾಡಲು 100 ಬ್ರೀಡಿಂಗ್ ಬುಲ್‌ಗಳನ್ನು ತಂದಿದ್ದೇವೆ. ಒಂದು ಗೂಳಿ ನ್ಯಾಚುರಲ್ ಆಗಿ ಎಷ್ಟು ಗರ್ಭೋತ್ಪತ್ತಿ ಮಾಡಬಹುದೋ ಅಷ್ಟರಲ್ಲೇ ಆರ್ಟಿಫಿಷಿಯಲ್ ಇನ್‌ಸೆಮಿನೇಷನ್ ಪ್ರಕಾರ ಗರ್ಭದಾನ ಮಾಡಿದರೆ ಆ ಸ್ಕೀಮನ್ನೇ 10–12 ಆಕಳುಗಳಿಗೆ ಉಪಯೋಗಿಸಬಹುದೆಂದು ತಿಳಿದುಬಂದಿದೆ. ಆದುದರಿಂದ ನಾವೀಗ ಈ ಗೂಳಿಗಳನ್ನು ಸರಬರಾಯಿ ಮಾಡತಕ್ಕ ಕೆಲಸವನ್ನು ಕಡಮೆ ಮಾಡುತ್ತಿದ್ದೇವೆ. ನಾವು ಹೋದ ವರ್ಷ 10 ರೂರಲ್ ಡಿಸ್ಪೆನ್ಸರಿಗಳನ್ನು ಕೊಟ್ಟಿದ್ದೆವು. ಈ ವರ್ಷ 25 ಕೊಟ್ಟಿದ್ದೇವೆ. ಮುಂದಿನ ವರ್ಷವೂ 25-30 ಡಿಸ್ಪೆನ್ಸರಿಗಳನ್ನು ಕೊಡಬೇಕೆಂದಿದ್ದೇವೆ. ಹೀಗೆ ಎಲ್ಲ ವಿಚಾರದಲ್ಲೂ ಈ ಇಲಾಖೆಯ ಡೆವಲಪ್‌ಮೆಂಟ್ ಆಗುತ್ತಿದೆ. ಇನ್ನು ಈ ಹಸುಗಳ ತಳಿಗಳನ್ನು ಸಾಕಷ್ಟು ಅಭಿವೃದ್ಧಿ ಮಾಡಲಾಗಿದೆ. ಈ ಕಾರ್ಯ ಇನ್ನೂ ಬೆಳೆಯಬೇಕು. ಆದರೆ ಈ ದಿವಸ ಪಶುಸಂಗೋಪನ ಕಾರ್ಯದಲ್ಲಿ ತೊಡಗಿರತಕ್ಕ ಜನರಿಗೆ ಅದರಲ್ಲೂ ಹಾಲನ್ನು ಮಾರಾಟ ಮಾಡಿ ಜೀವನ ಮಾಡತಕ್ಕ ಜನರಿಗೆ ನ್ಯಾಯ ವಾಗಿ ಎಷ್ಟು ದುಡ್ಡು ಅವರು ಮಾರತಕ್ಕ ಹಾಲಿಗೆ ದೊರೆಯಬೇಕೋ ಅಷ್ಟು ಸರಿಯಾಗಿ ದೊರೆತರೆ ಆತನ ಕೈಲಿ ವಾರಕ್ಕೆ ಹೇಗೂ 60 70 ರೂ.ಗಳು ಓಡಾಡುವಂತಾಗುತ್ತದೆ. ಅದರಿಂದ ಆತನಿಗೂ ಒಂದು ಉತ್ಸಾಹ ಬಂದು ಅವನೂ ಸಹ ಈ ಹಸುಗಳ ಸಾಕುವಿಕೆಯಲ್ಲಿ ಸಾಕಷ್ಟು ನಿಗಾ ವಹಿಸು ತ್ತಾನೆ. ಅವುಗಳಿಗೆ ಸರಿಯಾಗಿ ಹುಲ್ಲು-ಹಿಂಡಿ-ತೌಡು ಇತ್ಯಾದಿಗಳನ್ನೆಲ್ಲಾ ಹಾಕೇ ಹಾಕುತ್ತಾನೆ. ಅವುಗಳನ್ನು ಚೆನ್ನಾಗಿ ಅಭಿವೃದ್ಧಿಗೂ ತರುತ್ತಾನೆ. ಅವು ಒಳ್ಳೆಯ ಹಾಲನ್ನು ಸಹ ಕೊಡುತ್ತವೆ. ನಾವೇನೂ ಹೆಚ್ಚಿನ ಪ್ರೋತ್ಸಾಹ ಅವನಿಗೆ ಕೊಡಬೇಕಾದ್ದಿಲ್ಲ.

Dairy development ಬಹಳ ಹಿಂದೆ ಉಳಿದಿತ್ತು. ಮೈಸೂರು ಸಂಸ್ಥಾನದೊಳಗೆ ಈಗ ಒಂದು ವರ್ಷದಲ್ಲಿ ಭಾರಿ ಕೆಲಸ ನಡೆದಿದೆ. ರಾಷ್ಟ್ರದಲ್ಲಿ ಬೊಂಬಾಯಿ ಹತ್ತಿರ ಅರೇ ಕಾಲೋನಿ, ಕಲ್ಕತ್ತದಲ್ಲಿ ಅರೀನ್‌ಘಟ್ಟ ಕಾಲೋನಿ ಮತ್ತು ಮದ್ರಾಸಿನಲ್ಲಿ ಮಾದಾವರಂನಲ್ಲಿ ಕಾಲೋನಿಗಳನ್ನು ಪ್ರಾರಂಭ ಮಾಡಿದವರು ನಾವೇ. ನಾನು ಚೇರ್ಮನ್ ಆಗಿ ದೆಹಲಿಯಲ್ಲಿ ಒಂದು milk scheme ಪ್ರಾರಂಭ ಮಾಡಿದೆ. ಅದರಿಂದ ಒಂದು ದಿವಸಕ್ಕೆ ಹತ್ತು ಲಕ್ಷ ಪೌಂಡ್ ಹಾಲನ್ನು ಹಂಚುತ್ತಿದ್ದಾರೆ. ಈಗ ಬೆಂಗಳೂರು ಡೈರಿ ಸ್ಕೀಂ ತೆಗೆದುಕೊಂಡಿದ್ದೇವೆ. ಇದಕ್ಕೆ ಈಗಾಗಲೇ 60-70 ಲಕ್ಷ ರೂಪಾಯಿ ಖರ್ಚಾಗಿ ಕಟ್ಟಡ ಪೂರ್ತಿಯಾಗುವುದರಲ್ಲಿದೆ. 35 ಲಕ್ಷ ರೂಪಾಯಿ ಮೌಲ್ಯದ ಯಂತ್ರೋಪಕರಣ ಗಳು UNICEF ಮತ್ತು ಪ್ರಪಂಚದ ಎಲ್ಲ ಭಾಗಗಳಿಂದಲೂ ಬರುತ್ತದೆ. ಒಟ್ಟು ಒಂದೂವರೆ ಕೋಟಿ ರೂಪಾಯಿನಷ್ಟು ಬಂಡವಾಳ ಹಾಕಿ ಬೆಂಗಳೂರು ಮಿಲ್ಕ್ ಸ್ಕೀಂ ಮೂರು ನಾಲ್ಕು ತಿಂಗ ಳಲ್ಲಿ ಸಿದ್ಧವಾಗುತ್ತದೆ. ಬೇಸಿಗೆಯಲ್ಲಿ ಇದು ಸಿದ್ಧವಾಗುವುದರಿಂದ ಅಕ್ಟೋಬರ್ ನವೆಂಬರ್ ತಿಂಗಳಲ್ಲಿ ಇದರ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ನಮ್ಮ ಸ್ನೇಹಿತರಾದ ರಾಮಕೃಷ್ಣಹೆಗ್ಗಡೆಯವರ ಸಂಗಡ ಮಾತನಾಡಿ 100 Milk Producers Co-operative Societies ಪ್ರಾರಂಭ ಮಾಡಲು ವ್ಯವಸ್ಥೆ ಮಾಡಿದ್ದೇವೆ. ಇವು ಗಳಿಗೆ ಒಂದೊಂದಕ್ಕೂ 60-70 ಸಾವಿರ ರೂಪಾಯಿ ಸಾಲವಾಗಿ ಕೊಡುತ್ತೇವೆ. ಇದು ಮೂರು ವರ್ಷಗಳಲ್ಲಿ ವಾಪಸ್ಸು ಕೊಡುವಂಥ medium term loan. ನಾಳೆಯ ದಿವಸ ನನ್ನ ಛೇಂಬರಿ ನಲ್ಲಿ ಒಂದು ಮೀಟಿಂಗ್ ಇದೆ. ಕೇಂದ್ರದ ಅಧಿಕಾರಿಗಳು ಬರುತ್ತಾರೆ, Mayor, Commissioner ಮತ್ತು ಸಂಬಂಧಪಟ್ಟ ಇಲಾಖೆಯವರೆಲ್ಲ ಬರುತ್ತಾರೆ.

ಇದಲ್ಲದೆ Milch Cattle Market ಒಂದನ್ನು ಪ್ರಾರಂಭ ಮಾಡಬೇಕೆಂಬ ಉದ್ದೇಶವಿದೆ. ಈಗ ಯಾರಾದರೂ ಹಸು ಅಥವಾ ಎಮ್ಮೆಯನ್ನು ಕೊಂಡುಕೊಳ್ಳಬೇಕಾದರೆ ಎಲ್ಲಿಗೆ ಹೋಗಬೇಕೋ ಗೊತ್ತಾಗುವುದಿಲ್ಲ. ಹಸು, ಎಮ್ಮೆ ಬೇಕಾದವರಿಗೆ ಅನುಕೂಲವಾಗುವಂತೆ ಈ ಯೋಜನೆ ಮಾಡ ಲಾಗಿದೆ. Milk Producers Co-operative Societies ಗಳವರು ತಮಗೆ ಹಸು, ಎಮ್ಮೆ ಬೇಕಾದರೆ ಇಲ್ಲಿಗೆ ಹೋಗಿ ಕೊಂಡುಕೊಳ್ಳಬಹುದು. ಈಗಾಗಲೇ ಮದ್ರಾಸ್ ಮತ್ತು ಬೊಂಬಾಯಿ

(ಶ್ರೀ ಎಂ. ವಿ. ಕೃಷ್ಣಪ್ಪ)

ಗಳಲ್ಲಿ ಈ ತರಹ ಪದ್ಧತಿ ಇದೆ. ಈ ಮಾರುಕಟ್ಟೆಗೆ ಹೋಗಿ ಹಸು ಬೇಕು ಎಂದರೆ ಎರಡು ದಿನ ಹಾಲು ಕರೆದು ತೋರಿಸುತ್ತಾರೆ. ಅನಂತರ ದುಡ್ಡು ಕೊಟ್ಟು ತರಬಹುದು. ಇದರಲ್ಲಿ ಮೋಸಕ್ಕೆ ಅವಕಾಶವಾಗುವುದಿಲ್ಲ. ಇದರಿಂದ ಸಾಲದ ರೂಪವಾಗಿ ನಾವು ಕೊಡತಕ್ಕ 80-90 ಲಕ್ಷ ರೂಪಾಯಿ ಸದುಪಯೋಗವಾಗುತ್ತದೆ. ಇಲ್ಲದೆ ಇದ್ದರೆ ಸಾಲ ತೆಗೆದುಕೊಂಡದ್ದು ಬೇರೇ ರೀತಿಯಲ್ಲಿ ಉಪಯೋಗವಾಗುತ್ತದೆ.

ಹಳ್ಳಿಗಳಲ್ಲಿ ಸ್ಥಾಪಿತವಾಗುವ ಸೊಸೈಟಿಗಳಿಂದ ಬೆಳಗ್ಗೆ ಮತ್ತು ಸಾಯಂಕಾಲ ವ್ಯಾನುಗಳು ಹೋಗುತ್ತವೆ. ಇದಕ್ಕಾಗಿ 30 ವ್ಯಾನುಗಳನ್ನು ಕೊಂಡುಕೊಳ್ಳಬೇಕಾಗಿದೆ. ಇವು ಪ್ರತಿದಿನವೂ ಬೆಳಗ್ಗೆ ಮತ್ತು ಸಂಜೆ ಹಾಲನ್ನು ಸಂಗ್ರಹಿಸಿಕೊಂಡು ಬರುತ್ತವೆ. ಬೇರೆ ಸಹಕಾರ ಸಂಘಗಳಂತೆ ಇವು ಇರುವುದಕ್ಕಾಗುವುದಿಲ್ಲ. ಪೋಸ್ಟ್ ಆಫೀಸಿಗಾದರೂ ಒಂದು ದಿವಸ ರಜ ಇರಬಹುದು. ಆದರೆ ಈ ಸೊಸೈಟಿಗಳಿಗೆ ಒಂದು ದಿವಸವೂ ರಜಾ ದೊರೆಯುವ ಹಾಗಿಲ್ಲ. They must be living societies. They must be active both in the morning and evening to collect milk. ಬೆಂಗಳೂರು ಒಂದು ಮಾಡಲ್ ಆಗಿ ಮಾಡಿಕೊಂಡು, ಅನಂತರ ಈ ಯೋಜನೆಯನ್ನು ಮೈಸೂರು, ಹುಬ್ಬಳ್ಳಿ-ಧಾರವಾಡ, ಮಂಗಳೂರು-ಮಂಗಳೂರಿನಲ್ಲಿ ಈಗಾಗಲೇ foundation ಹಾಕಿದ್ದೇವೆ—ಗುಲ್ಬರ್ಗ, ಕೆ.ಜಿ.ಎಫ್, ಬೆಳಗಾಂವ, ಹೀಗೆ ಒಂದು ಲಕ್ಷ ಜನಸಂಖ್ಯೆಗೆ ಸಮೀಪವಿರುವ ಪಟ್ಟಣಗಳಲ್ಲಿ ಮುಂದಿನ ಮೂರು ನಾಲ್ಕು ವರ್ಷಗಳಲ್ಲಿ ಈ ತರಹ ಯೋಜನೆಯನ್ನು ಪ್ರಾರಂಭ ಮಾಡಬೇಕೆಂದಿದ್ದೇವೆ. ಡೈರಿ ಅಭಿವೃದ್ಧಿಯಾದರೆ ಹೆಚ್ಚು ಹಾಲು ಉತ್ಪತ್ತಿಯಾಗಿ ಜನಗಳಿಗೆ ಹಣ ಬರುತ್ತದೆ. 20-30 ಸೇರು ಹಾಲು ಕೊಡುವ ಹಸುವನ್ನು ಕಟುಕನೂ ಕೊಲ್ಲುವುದಿಲ್ಲ. ಅದು ಗಣಿ ಇದ್ದ ಹಾಗೆ. ಕೆಲಸಕ್ಕೆ ಬಾರದ ದನಗಳಿದ್ದರೆ, ಎಷ್ಟೇ ಪ್ರಚಾರವನ್ನು ನಾವು ಮಾಡಿದರೂ ಅದನ್ನು ಕೊಲ್ಲಲು ಮಾರುತಾರೆ. Therefore we must make the cow more precious. ಎಷ್ಟು ಒಳ್ಳೆಯ ಹಸುಗಳಿದ್ದರೆ, ಅದರಿಂದ ಜನಗಳಿಗೂ ಭಾರಿ ವಿಶ್ವಾಸ ಬರುತ್ತದೆ. ಈ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ಡೈರಿ ಪ್ರಾಜೆಕ್ಟ್‌ಗಳು ಚೆನ್ನಾಗಿ ನಡೆಯುತ್ತವೆ, ಅದರಲ್ಲಿ ಯಾವ ತರಹ ಅನುಮಾನಕ್ಕೂ ಅವಕಾಶವಿಲ್ಲ.

ಇನ್ನು jercy bulls ವಿಷಯ ಅನಿಮಲ್ ಹಸ್ಬೆಂಡ್ರಿ ಇಲಾಖೆಯಲ್ಲಿ ಜಗಳವಿದೆ ಎಂದು ಹೇಳಿದರು. ಆ ಇಲಾಖೆಯಲ್ಲಿ ಜಗಳವಿಲ್ಲವೆಂದಲ್ಲ, ಯಾವ ಇಲಾಖೆಯಲ್ಲಿ ಜಗಳವಿಲ್ಲ? ನಮ್ಮ ಮನೆಯಲ್ಲಿ ಜಗಳವಿಲ್ಲವೇ, ನಿಮ್ಮ ಮನೆಯಲ್ಲಿ ಜಗಳವಿಲ್ಲವೇ? ಹಳ್ಳಿಗಳ ಕತೆ ಹೇಳುವಂತೆ ಒಕ್ಕಲಿಗರ ಜಗಳ, ವೈಶ್ಯರ ಜಗಳ ಎಂಬಂತಾಗಿದೆ. ಇದರಲ್ಲಿ ವ್ಯತ್ಯಾಸವೇನೆಂದರೆ ವೈಶ್ಯರಲ್ಲಿ ಜಗಳ ಬಂದಾಗ ಅವರು ಮನೆಯ ಬಾಗಿಲು ಹಾಕಿಕೊಳ್ಳುತ್ತಾರೆ. ಅವರು ಜಗಳವಾಡುವುದು ಯಾರಿಗೂ ಕೇಳಿಸುವುದಿಲ್ಲ, ತಿಳಿಯುವುದಿಲ್ಲ. ಒಕ್ಕಲಿಗರಲ್ಲಿ ಜಗಳ ಬಂದರೆ ಅವರು ಬೀದಿಗೆ ಬಂದು ಕೂಗಾಡುತ್ತಾರೆ. ಹಾಗೆಯೇ ಪಶುಸಂಗೋಪನ ಇಲಾಖೆಯಲ್ಲಿನ ಜಗಳ ಒಕ್ಕಲಿಗರ ಜಗಳದ ಹಾಗೆ ಬೀದಿಗೆ ಬಂತು, ಪ್ರಪಂಚಕ್ಕೆಲ್ಲ ತಿಳಿಯುವ ಹಾಗೆ ಆಯಿತು. ಈ ಇಲಾಖೆಯಲ್ಲಿರುವವರೆಲ್ಲ technical people. ಇವರಿಗೆ ಶಿಫಾರಸ್ಸಿನಿಂದ ಸ್ಥಾನಮಾನಗಳು ದೊರೆಯುವುದಿಲ್ಲ; ಯೋಗ್ಯತೆಯಿಂದ ದೊರೆಯುತ್ತದೆ. ಅವರೆಲ್ಲ ಏಕ್‌ದಂ ಕೆಟ್ಟುಹೋಗಿದ್ದಾರೆಂದು ಹೇಳುವುದು ಕಷ್ಟ. ರಾಜಕಾರಣಿಗಳು ಮಧ್ಯೆ ಪ್ರವೇಶಿಸದೆ ಹೋದರೆ ಅವರು ಸರಿಯಾಗಿ ನಡೆದುಕೊಳ್ಳುತ್ತಾರೆ.

ಜೆರ್ಸಿ ಗೂಳಿಗಳ ವಿಚಾರದಲ್ಲಿ ಒಂದು ಕ್ರಾಂತಿ ಎದ್ದ ಹಾಗೆ ಒಂದು adjournment motion ತಂದರು. ಇದು ಅವರು ಹೇಳಿದಷ್ಟು serious ಎಂದು ತಿಳಿದುಕೊಳ್ಳುವುದಿಲ್ಲ. ಇವು ಕೇಂದ್ರಸರ್ಕಾರದ್ದು.

Sri SIDDIAH KASIMATH.—The director himself has given it in the newspaper.

Sri M. V. KRISHNAPPA.—We have spent not even a single pie over the Jersey bulls. ನಾನು ಕೇಂದ್ರದಲ್ಲಿದ್ದಾಗ ಈ ಯೋಜನೆಯನ್ನು ಮಂಜೂರು ಮಾಡಿದೆವು. ಆದುದರಿಂದ ನನಗೆ ಅದರಲ್ಲಿರುವಷ್ಟು ಅಕ್ಕರೆ ಬೇರೆಯವರಿಗಿಲ್ಲ. ಪ್ರತಿಯೊಂದು ಗೂಳಿಯೂ ಕೋಟ್ಯಂತರ ರೂಪಾಯಿ ಬೆಲೆ ಇರುವಂಥವು. ಹಿಂದೆ ಎಂಟು ಗೂಳಿಗಳನ್ನು ತಂದಿದ್ದು ಅದರಿಂದ ಒಂಬತ್ತು ವರ್ಷಗಳಲ್ಲಿ 40 ಸಾವಿರ ಹಸುಗಳು ಉತ್ಪತ್ತಿಯಾದುವು. ಈಗ ಹಿಂದೂಸ್ಥಾನಕ್ಕೆ ಬಂದಂಥ ಗೂಳಿಗಳಲ್ಲಿ ನೂರು ಗೂಳಿಗಳು ನಮಗೆ ಬಂದಿವೆ, 200 ಗೂಳಿಗಳನ್ನು ಹಿಮಾಚಲ ಪ್ರದೇಶದಲ್ಲಿಟ್ಟಿದ್ದಾರೆ. ಅದರ ಬಗ್ಗೆ ನಾವು ಗಮನ ಕೊಡುವುದಿಲ್ಲವೆಂದು ತಿಳಿದುಕೊಳ್ಳಬಾರದು. It is more precious to me than any one else. ಅಮೆರಿಕದ ಒಂದೊಂದು ಫಾರಂ

ನವರೂ ಇವುಗಳನ್ನು ದಾನವಾಗಿ ಕೊಟ್ಟಿದ್ದಾರೆ. ವಿಮಾನದ ಮೂಲಕ ನೂರು ಗೂಳಿಗಳನ್ನು ತರುವಾಗ ಒಂದು ದಾರಿಯಲ್ಲಿಯೇ ಸತ್ತುಹೋಯಿತು. ಅವು ಬಹಳ poor condition ನಲ್ಲಿದ್ದುವು. ಮೇವು ತಿಂದು ಎಷ್ಟೋ ದಿನಗಳಾಗಿವೆ ಎನ್ನುವ ಹಾಗೆ ಇದ್ದುವು. ನಾಲ್ಕೈದು ತಿಂಗಳಲ್ಲಿ ಬಹಳ ಚೆನ್ನಾಗಿ pik-up ಆದುವು. ಈಗ ಬಹಳ ಚೆನ್ನಾಗಿ ಬರುತ್ತಿವೆ. ಶ್ರೀವರ್ಮಾ ಕಾಶೀಮಠ ಅವರು ಇವುಗಳಿಗೆ rinder-pest ರೋಗ ಬಂತು ಎಂದು ಹೇಳಿದರು. ಈ ರೋಗ ಬರಬಾರದೆಂದು preventive vaccination ಮಾಡಿದೆವು. ಹಾಗೆ ವ್ಯಾಕ್ಸಿನೇಟ್ ಮಾಡಿದ ಮೇಲೆ ಅದರ ಮೈಯಲ್ಲಿ ಆ ರೋಗದ ಚಿಹ್ನೆಗಳು ಕಾಣಿಸಿದವು. When vaccinated it bring the symptomes of that disease on the body. ಅವುಗಳಿಗೆ rinder-pest ಬರಲಿಲ್ಲ. Rinder-pest has been completely eradicated from South India today after a fight lasting ten years. ಈಗ rinder-pest ಇಲ್ಲವೇ ಇಲ್ಲ; ರೋಗ ಬರಕೂಡದು ಎನ್ನುವುದಕ್ಕಾಗಿ ಇಲ್ಲಿ vaccinate ಮಾಡಿದ್ದು, ನಾವು ವ್ಯಾಕ್ಸಿನೇಷನ್ ಮಾಡಿಲ್ಲ ಇದು ಆದದ್ದು U. P. ನಲ್ಲಿ Izatnagar ಮತ್ತು ಮುಂಚೇಶ್ವರದಲ್ಲಿ. ಇವೆಲ್ಲ ಅಮೆರಿಕಾದಿಂದ ಬಂದ ದನಗಳು. ನಮ್ಮ ದೇಶಕ್ಕೆ ಬಂದಾಗ ಇವು ಇಲ್ಲಿಯ ಪರಿಸ್ಥಿತಿಗೆ ಸ್ವಲ್ಪ ಕಷ್ಟವಾಗಿರಬಹುದು.

Because of long neglect, they have developed immunity from diseases. Resistance power ನಮ್ಮ ಭಾಗದ ದನಗಳಲ್ಲಿರುವಂತೆ ಈ ಅಮೆರಿಕಾದ ದನಗಳಿಗೆ ಇಲ್ಲ. They have not got resistance power. ಏನೋ ಸ್ವಲ್ಪ ವ್ಯಾಕ್ಸಿನೇಷನ್‌ನಲ್ಲಿ ಹೆಚ್ಚು ಕಡಿಮೆಯಾಗಿರಬಹುದು. ಸ್ವಲ್ಪ ಡೋಸೇಜು ವ್ಯತ್ಯಾಸವಾಗಿರಬಹುದು. ನಮ್ಮಲ್ಲೂ ಕೋಳಿಗಳಿಗೆ ವ್ಯಾಕ್ಸಿನೇಷನ್ ಮಾಡುವಾಗ ಶೇಕಡ ಹತ್ತು ಹದಿನೈದು ಭಾಗದಷ್ಟು ಕೋಳಿಗಳು ಸತ್ತು ಹೋಗುತ್ತವೆ. ಹಿಂದೆ ಎಂ. ಪಿ. ಗಳೊಬ್ಬರಿಗೆ ಒಂದು ಪೆನ್‌ಸಿಲಿನ್ ಇಂಜಕ್ಷನ್ ಕೊಟ್ಟಾಗಲೂ ಸತ್ತು ಹೋದರು. ಹೀಗೆ ಸತ್ತುಹೋಗುತ್ತದೆ ಎಂದು ಭಾವನೆ ಮಾಡಿಕೊಳ್ಳಬೇಕಾಗಿಲ್ಲ.

They have not got resistance power. ಇದು ಒಂದು ತರದ ದೊಡ್ಡ ರೋಗ. ಇಂತಹ ರೋಗ ಬರಬಾರದು, ಬಂದಿದೆ. ಇದರಲ್ಲಿ ಇಲ್ಲಿಯವರೆಗೆ ಒಂಭತ್ತು ಮಾತ್ರ ಸತ್ತಿವೆ. ಇನ್ನು ಅರವತ್ತು ಎಪ್ಪತ್ತು ಸಾಯುವುದರಲ್ಲಿವೆ ಎಂದು ಮಾನ್ಯ ಸದಸ್ಯರು ಭಾವನೆ ಮಾಡಿಕೊಳ್ಳಬಾರದು. ಸಾಯುವುದನ್ನೇ ದೊಡ್ಡದಾಗಿಟ್ಟುಕೊಳ್ಳಬಾರದು. ಸಂಸ್ಥಾನದಲ್ಲಿ ಎಲ್ಲರೂ ಸಾಯುವುದನ್ನೇ ಜಾಸ್ತಿಯಾಗಿ ಹೇಳುತ್ತಾರೆ. ಏನೋ ದೇವರ ದಯೆಯಿಂದ ಬದುಕಲಿ ಎಂದು ಹೇಳುವುದಿಲ್ಲ ಚೆನ್ನಾಗಿದ್ದರೂ, ಚೆನ್ನಾಗಿರುವ ಮಾತನ್ನು ಹೇಳುವುದಿಲ್ಲ. ಇನ್ನು 90 ದನಗಳಿವೆ. ಅವು ಬದುಕುತ್ತವೆ ಎಂದು ನಾನು ಆಶೆ ಪಡುತ್ತೇನೆ. ಒಂಭತ್ತೇನೋ ಸತ್ತವು. ಇಲ್ಲ ಎಂದು ಹೇಳುತ್ತಿಲ್ಲ.

It is a very highly technical matter. In fact, it is a research. In a way it helps the veterinary science. ಇವಕ್ಕೆ ರೆಸಿಸ್ಟೆನ್ಸ್ ಪವರ್ ಇಲ್ಲದೇ ಹೋಗಿರಬಹುದು.

It helps the veterinary science. ಅಷ್ಟೊಂದು ದೊಡ್ಡದಾಗಿ ಇಲ್ಲಿ ರೋಗ ಬಂದಿಲ್ಲ. ಇಲ್ಲಿರುವ ಅಧಿಕಾರಿಗಳು ಈ ದನಗಳನ್ನು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಈ ಸಭೆಯನ್ನು ಶುರುವಾದ 22 ದಿನಗಳಲ್ಲಿ ನಾನು ನಾಲ್ಕು ಸಲ ಹೆಸರುಘಟ್ಟಕ್ಕೆ ಸರ್‌ಪ್ರೈಸ್ ಆಗಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಇಲ್ಲಿ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದಾರೆ. ಅದರಲ್ಲೇನೂ ಅನುಮಾನವಿಲ್ಲ. ಇದರಲ್ಲಿ ಇನ್ನಾವುದೂ ಇಲ್ಲ. ಬೇರೆ ಇಲಾಖೆಗಳಲ್ಲಿರುವಂತೆಯೇ ಈ ಇಲಾಖೆಯಲ್ಲಿಯೂ ಐದಾರು ವರ್ಷಗಳಿಂದ ಸ್ವಲ್ಪ ಜಗಳ ಪ್ರಾರಂಭವಾಗಿತ್ತು. We will certainly try to punish those people who are responsible for it. ಯಾವ ಡಿಪಾರ್ಟುಮೆಂಟಿನಲ್ಲಿ ತಾನೇ ಜಗಳವಿಲ್ಲ. ನಾನಾಗಲೇ ಹೇಳಿದಂತೆ ವೈಶ್ಯರು ಮನೆಯೊಳಗೆ ಬಾಗಿಲು ಹಾಕಿಕೊಂಡು ಜಗಳವಾಡುತ್ತಾರೆ. ಒಕ್ಕಲಿಗರು ಹೊರಗಡೆ ನಿಂತು ಜಗಳ ಮಾಡುತ್ತಾರೆ. ಈ ಡಿಪಾರ್ಟುಮೆಂಟು ಚೆನ್ನಾಗಿ ಕೆಲಸ ಮಾಡುತ್ತಿದೆ. ನಮ್ಮಲ್ಲಿ ಅಂತಹ ಆಫೀಸರುಗಳು ಯಾರಾದರೂ ಇದ್ದರೆ ಅಂತಹ ಆಫೀಸರುಗಳಿಗೆ warning ನ್ನು ಕೊಡಬೇಕೆಂದು ನಮ್ಮ ಸೆಕ್ರೆಟರಿಗಳಿಗೂ ತಿಳಿಸಲಾಗಿದೆ. They must square up all these differences. ಇಲ್ಲದಿದ್ದರೆ ಗಂಗೆಯಲ್ಲಿ ಕೂಡ ಮೂರು ಸಲ ಮುಳುಗಿದರೂ ಗಂಗಾಮಾತೆ ಎತ್ತುತ್ತಾರಂತೆ. ಆದರೆ ನಾಲ್ಕೈದು ಸಲ ಮುಳುಗಿದರೆ ಏನೂ ಮಾಡುವುದಿಲ್ಲವಂತೆ. ಹಾಗೆ ಇಲ್ಲಿಯೂ ಮಾಡಿದರೆ they will find their own way. ಇಲಾಖೆಯಲ್ಲಿ ಕೆಲಸ ಚೆನ್ನಾಗಿಯೇ ನಡೆಯುತ್ತಿದೆ. ಇಷ್ಟು ಪಶುಸಂಗೋಪನ ಇಲಾಖೆಯ ಬಗ್ಗೆ ಹೇಳುತ್ತೇನೆ. ಕಡೆಯದಾಗಿ ಶ್ರೀಮಾನ್ ಮಧ್ವರಾಜ್ ರವರು fisheries ಬಗ್ಗೆ ಒಂದು ಸಲಹೆ ಮಾಡಿದ್ದಾರೆ.

ಶ್ರೀ ಪಿ. ಎಂ. ದೇವ್.—ನೀವು ವೆಟರ್ನರಿ ಆಸ್ಪತ್ರೆಗಳನ್ನು ಪ್ರತಿಯೊಂದು ಜಿಲ್ಲೆಯಲ್ಲಿಯೂ ತೆರೆದಿದ್ದೀರಿ. ಆದರೆ ಅಲ್ಲಿರುವ ಅಧಿಕಾರಿಗಳು ಹಳ್ಳಿಗಳ ಕಡೆ ತಿರುಗಲು ಒಂದೊಂದು ಜೀಪನ್ನು ಕೊಡಬೇಕೆಂದು ಸಲಹೆ ಮಾಡಿದ್ದರೂ ತಾವೇನೂ ಅದರ ಬಗ್ಗೆ ಹೇಳಲಿಲ್ಲ. ತಾವೆಲ್ಲ ಪಟ್ಟಣದ ಕಡೆಗೆ ಗಮನ ಕೊಡುತ್ತಿದ್ದೀರೇ ಹೊರತು, ಬೇರೆ ಕಡೆ ಇರುವ ಹಳ್ಳಿಗಳ ಕಡೆಗೆ ಗಮನ ಕೊಡುತ್ತಿಲ್ಲ. ನಿಮ್ಮ ಗಮನ ಎಲ್ಲ ಕಡೆಗೂ ಇರಬೇಕು. ಹೀಗೆ ಓಡಾಡಲು ಇಲ್ಲಿನ ಭಾಗಗಳಿಗೆ ಒಂದೊಂದು ಜೀಪನ್ನು ಕೊಡುವಂತೆ ಮಾಡಿ.

ಶ್ರೀ ಎಂ. ವಿ. ಕೃಷ್ಣಪ್ಪ.—ಡೈರಿ ಸ್ಕೀಮು ಬಂದಿರುವುದು ಪಟ್ಟಣಗಳಿಗೋಸ್ಕರವಲ್ಲ. ನೂರು ಸೊಸೈಟಿಗಳನ್ನು ಪಟ್ಟಣದಲ್ಲಿ ಮಾಡಿದರೆ 300 ಸೊಸೈಟಿಗಳು Rural parts ಗಳಲ್ಲೇ ಆಗುತ್ತವೆ. ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಇಷ್ಟೊಂದು ದುಡ್ಡು ಕೊಟ್ಟು ಮಾಡುತ್ತಿರುವುದು. ಬೆಂಗಳೂರಿಗೋಸ್ಕರವೇ ಎಂದು ಮಾಡುತ್ತಿಲ್ಲ. ಬೆಂಗಳೂರಿನಲ್ಲಿರುವ Dairy Scheme ultimately it helps the rural population. It is mainly for the benefit of the rural population that the milk schemes are thought of.

ಮಾನ್ಯ ಸದಸ್ಯರು ಹೇಳಿದಂತಹ ಅನೇಕ ಸಲಹೆಗಳನ್ನು ನಾವು ಪ್ರತಿಯೊಂದನ್ನೂ ನೋಡಿ ಅದಕ್ಕೆ ತಕ್ಕ ಕ್ರಮಗಳನ್ನು ತೆಗೆದುಕೊಂಡು ಮಾಡಲು ಪ್ರಯತ್ನ ಪಡುತ್ತೇವೆ.

ಕಡೆಯದಾಗಿ ಮಾನ್ಯ ಸದಸ್ಯರಾದ ಶ್ರೀಮಾನ್ ಮಧ್ವರಾಜ್‌ರವರು fisheries ಬಗ್ಗೆ ಒಂದು ವಿಚಾರ ಹೇಳಿದರು. fisheries ಎಂದರೆ ಮೀನವನ್ ಆಗಿದ್ದದ್ದು ಈಗ ಚೆನ್ನಾಗಿ ಮಾನವನ್ ಆಗಿದೆ. ಹಿಂದೆ ಮತ್ಸ್ಯಾವತಾರ ಆಗಿದ್ದುದು ನೀರಿನಲ್ಲೇ. ಮೀನವನ್ ಆಗಿರುವುದು ಮಾನವನ್ ಆಗಿರುವಂತೆ ಉಪಯೋಗಿಸಿಕೊಳ್ಳಬೇಕಾದರೆ ಮೀನುಗಳನ್ನು Exploit ಮಾಡದೇ ಬೇರೆ ಮಾರ್ಗವಿಲ್ಲ.

Life has started from the sea. We have over-exploited the land with this huge population. ಕರಾವಳಿಯಲ್ಲಿ ಎಂದರೆ sea coast ನಲ್ಲಿ fishermen ಗಳು ಮನೆಗಳನ್ನು ಕಟ್ಟಿಕೊಂಡು ಕೆಲವರಿದ್ದಾರೆ. ಕೆಲವರು ಮನೆಗಳಿಲ್ಲದೆ ಟೆಂಟುಗಳನ್ನು ಹಾಕಿಕೊಳ್ಳಲು ಅವರಿಗೆ ಅವಕಾಶವನ್ನು ಕೊಡುತ್ತಿಲ್ಲ ಎಂದು ಹೇಳಿದರು. ರೆವೆನ್ಯೂ ಮಂತ್ರಿಯಾದುದರಿಂದ ಇಲ್ಲಿ ಭೂಮಿ ಕೊಡುವ ವಿಷಯ ಅರ್ಥಮಾಡಿಕೊಂಡಿದ್ದೇನೆ. ಈ ಜನಗಳ ತೊಂದರೆಯ ಬಗ್ಗೆ ನಾನು ಜಿಲ್ಲಾಧಿಕಾರಿಗಳಿಗೆ ಫೋನಿನ ಮೂಲಕ ಕೇಳಿ ವಿಚಾರಿಸಿದ್ದರಲ್ಲಿ ಇದರ ಬಗ್ಗೆ ಹಿಂದೆ ಒಂದು G. O. ಆಗಿದೆ. ಅದರಲ್ಲಿ 100 yards from the sea we should not allow any one to build anything. ಎಂದು ಹೇಳಿದಾಗ ನಾನು ಅವರಿಗೆ ಈ ರೀತಿ ಇಲ್ಲಿನ ಜನಕ್ಕೆ ತೊಂದರೆ ಮಾಡುವುದಕ್ಕಾಗುವುದಿಲ್ಲ. ಇಂತಹ ಜನ ಮೀನಿನ ಕಸಬಿನಲ್ಲಿರುವವರು ಸೌತ್ ಕೆನರಾದಲ್ಲಿದ್ದಾರೆ. ನಾರ್ತ್ ಕೆನರಾದಲ್ಲಿಯೂ ಇದ್ದಾರೆ. ಇಂತಹ ಜನಕ್ಕೆ ನೆರವಾಗುವ ರೀತಿಯಲ್ಲಿ ಅವರ ಸೌಕರ್ಯಕ್ಕೋಸ್ಕರ ಮನೆ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಈ ಜನರು ಯಾವಾಗಲೂ ಸಮುದ್ರದ ನೀರಿನ ಮೇಲೆಯೇ ಇರುತ್ತಾರೆ. ಏನೋ ಒಂದು ನಾಲ್ಕು ತಿಂಗಳು ಕಾಲ ಮನೆಯೊಳಗೆ ಬಂದು ಇರೋಣ ಎಂದು ಮನೆಗಾಗಿ ಭೂಮಿ ಕೇಳಿದರೆ ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಇದು ಮೂಲಭೂತವಾದ ಹಕ್ಕನ್ನೇ ಕಿತ್ತುಕೊಂಡ ಹಾಗಾಗುತ್ತದೆ. ಈ ವಿಷಯದಲ್ಲಿ ತಕ್ಕ ಕ್ರಮ ತೆಗೆದುಕೊಳ್ಳುತ್ತೇವೆ. ಇಷ್ಟನ್ನು ಹೇಳಿ ನನ್ನ ಇಲಾಖೆಗೆ ಸೇರಿದಂತೆ ಇರುವ ಒಂದು ಕೋಟಿ ನಲವತ್ತು ಮೂರು ಲಕ್ಷ ಚಿಲ್ಲರೆ ಇರುವ ಬೇಡಿಕೆಯನ್ನು ಈ ಮಾನ್ಯ ಸಭೆ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

5 P.M.

ಶ್ರೀ ಜಿ. ನಾರಾಯಣಗೌಡ (ವ್ಯವಸಾಯ ಶಾಖೆಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ವ್ಯವಸಾಯ ಇಲಾಖೆ ಬೇಡಿಕೆ ಮೇಲೆ ಮಾತನಾಡುತ್ತಾ ಮಾನ್ಯ ಸದಸ್ಯರುಗಳು ಅನೇಕ ಉಪಯುಕ್ತವಾದ ಸಲಹೆಗಳನ್ನೂ ರಚನಾತ್ಮಕವಾದ ಟೀಕೆಯನ್ನೂ ಮಾಡಿದ್ದಾರೆ. ಈ ಉಪಯುಕ್ತವಾದ ಸಲಹೆ ಮತ್ತು ರಚನಾತ್ಮಕವಾದ ಟೀಕೆ ಮಾಡಿರುವುದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಅನೇಕ ಮಾನ್ಯ ಸದಸ್ಯರು ವ್ಯವಸಾಯ ಇಲಾಖೆ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಮಾತನಾಡಿದ್ದಾರೆ. ನಮ್ಮ ದೇಶ ವ್ಯವಸಾಯವೇ ಪ್ರಾಮುಖ್ಯವಾಗಿರುವ ದೇಶ. ನೂರಕ್ಕೆ 85ರಷ್ಟು ಮಂದಿ ವ್ಯವಸಾಯದಲ್ಲಿ ತೊಡಗಿರುತ್ತಾರೆ. ಹಾಗೂ ದೇಶದಲ್ಲಿ ನೂರರಲ್ಲಿ ನೂರು ಜನಕ್ಕೆ ಆಹಾರ ಒದಗಿಸಿ ಕೊಡುವವರಾಗಿದ್ದಾರೆ. ಆದುದರಿಂದ ಅನೇಕ ಮಾನ್ಯ ಸದಸ್ಯರು ಇದರಲ್ಲಿ ಆಸಕ್ತಿ ವಹಿಸಿ ತಮ್ಮ ಸಲಹೆಗಳನ್ನು ಕೊಟ್ಟಿರುವುದು ಬಹಳ ಶ್ಲಾಘನೀಯ. ಮೊದಲನೇ ಮತ್ತು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಸಹ ಹೆಚ್ಚು ಆಹಾರ ಉತ್ಪಾದನೆ ಮಾಡಿಲ್ಲ ಎಂದು ಕೆಲವು ಸದಸ್ಯರು ಆರೋಪಿಸಿದ್ದಾರೆ. ನಾನು ಈ ಸಂದರ್ಭದಲ್ಲಿ ಅಂಕಿಅಂಶಗಳನ್ನು ಕೊಟ್ಟು ಹೆಚ್ಚು ಉತ್ಪತ್ತಿಯಾಗಿದೆ

ಎನ್ನುವುದನ್ನು ತೋರಿಸುತ್ತೇನೆ. ನಾವು ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ 97 ಸಾವಿರ ಟನ್ ಉತ್ಪತ್ತಿ ಮಾಡುವ ಗುರಿ ಇಟ್ಟುಕೊಂಡಿದ್ದೆವು. ಆ ಗುರಿ ಮೀರಿ 1.5 ಲಕ್ಷ ಟನ್ ಅಷ್ಟು ನಾವು ಉತ್ಪತ್ತಿ ಮಾಡಿದ್ದೇವೆ, ಹಾಗು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ 5.1 ಲಕ್ಷ ಟನ್ ಉತ್ಪಾದನೆ ಮಾಡುವ ಗುರಿ ಇಟ್ಟುಕೊಂಡಿದ್ದೆವು. ಅದಕ್ಕೆ ಮಿಗಿಲಾಗಿ 6 ಲಕ್ಷ ಟನ್ ಉತ್ಪತ್ತಿ ಮಾಡಿದ್ದೇವೆ. ಹಾಗು ಮೂರನೇ ಯೋಜನೆಯ ಮೊದಲನೇ ವರ್ಷದಲ್ಲಿ ತಮಗೆಲ್ಲರಿಗೂ ಗೊತ್ತಿರುವ ಹಾಗೆ 63,000 ಟನ್ ಹೆಚ್ಚು ಉತ್ಪತ್ತಿ ಮಾಡಿದ್ದೇವೆ. 1961-62ರಲ್ಲಿ 1.4 ಲಕ್ಷ ಟನ್ ಉತ್ಪತ್ತಿ ಆಗುವುದರಲ್ಲದೆ. 1962-63ನೇ ಸಾಲಿನಲ್ಲಿ 10 ಲಕ್ಷ ಟನ್‌ದಷ್ಟು ಉತ್ಪತ್ತಿ ಹೆಚ್ಚು ಮಾಡಬೇಕೆಂಬ ಗುರಿ ಇಟ್ಟುಕೊಂಡಿದ್ದೇವೆ. ಈ ಗುರಿ ಸಾಧಿಸಲು ಪ್ರಯತ್ನಪಡುತ್ತಿದ್ದೇವೆ. ಆಹಾರ ಉತ್ಪತ್ತಿ ಮಾಡುವ ವಿಷಯದಲ್ಲಿ, ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ, ಅದನ್ನು ಮಾತಿನಿಂದಾಗಲಿ, ಮಾಟದಿಂದಾಗಲಿ ಉತ್ಪತ್ತಿ ಮಾಡುವುದಕ್ಕಾಗುವುದಿಲ್ಲ. ನಾವು ಎಷ್ಟು ಶ್ರದ್ಧೆವಹಿಸಿ ದುಡಿದರೂ ಕೂಡ, ನಮಗೆ ಪ್ರಕೃತಿ ಸಹಾಯ ಬೇಕು. ಈ ಕಾರ್ಯದಲ್ಲಿ ಅನೇಕ ತೊಂದರೆಗಳಿವೆ. ಅವುಗಳನ್ನೆಲ್ಲ ನಿವಾರಿಸಿಕೊಂಡು ನಾವು ಮುಂದುವರಿದರೆ ಉತ್ಪತ್ತಿ ಕಡೆ ನಾವು ಹೋಗುವೆವು, ನಮಗೆ ಇರುವ ಭೂಮಿ, ನೀರಿನ ಸೌಕರ್ಯ ಇವುಗಳ ಮೇಲೆ ಆಹಾರ ಉತ್ಪತ್ತಿ ಅವಲಂಬಿಸಿರುತ್ತದೆ. ನಮ್ಮ ದೇಶದಲ್ಲಿರುವ ಹೆಚ್ಚು ಭೂಮಿಗೆ ನೀರಿನ ಸೌಕರ್ಯವಿಲ್ಲದ್ದರಿಂದ ಮಳೆಯ ನೀರಿನ ಆಧಾರವನ್ನು ಪಡೆದು ಆಹಾರ ಉತ್ಪತ್ತಿ ಮಾಡುತ್ತಿದ್ದೇವೆ. ಆದುದರಿಂದ ಹೆಚ್ಚು ನೀರಿನ ಸೌಲಭ್ಯ ಪಡೆದು ಅನುಕೂಲ ಮಾಡಿಕೊಡುವ ಕಡೆ ನಾವು ಗಮನ ಕೊಡಬೇಕಾಗಿದೆ. ಮಳೆಯ ಸಹಾಯವನ್ನೇ ಅವಲಂಬಿಸಿರುವ ಭೂಮಿ ಗುಂಟ ಬದು ಹಾಕಿ ನೀರು ನಿಲ್ಲುವ ಹಾಗೆ ಮಾಡಬೇಕಾದುದು ನಮ್ಮ ಕರ್ತವ್ಯ. ಈ Soil Conservation Scheme ತೆಗೆದುಕೊಂಡು ಬಂದು ಒಂದು ಲಕ್ಷ ಎಕರೆ ಭೂಮಿಯಲ್ಲಿ ಇದನ್ನು ಕಾರ್ಯಗತ ಮಾಡಿದ್ದೇವೆ. ಆದರೆ ನಾವು ಈ ಕಾರ್ಯಕ್ರಮದಲ್ಲಿ ಹೆಚ್ಚು ಯಶಸ್ಸು ಪಡೆದಿಲ್ಲ ಎಂದು ಮಾನ್ಯ ಸದಸ್ಯರಾದ ಶ್ರೀ ಸುಂಠನಕರ ಹೇಳಿದರು. ನಾನು ಅವರಿಗೆ ಹೇಳುತ್ತೇನೆ. ಇದನ್ನು ಯಶಸ್ವಿಯಾಗಿ ಮಾಡುವುದಕ್ಕೆ ಸರಿಯಾಗಿ ತರಬೇತಿ ಪಡೆದ ಜನ ಇಲ್ಲದೇ ಇರುವ ಕಾರಣ ಈಗ ಅವರಿಗೆ ತರಬೇತಿಕೊಡಲು ಅಲ್ಲಲ್ಲಿ ಸ್ಕೂಲುಗಳನ್ನು ಪ್ರಾರಂಭಮಾಡಿ ತರಬೇತಿ ಮಾಡುತ್ತಾ ಇದ್ದೇವೆ. ಒಂದು ವರ್ಷದಲ್ಲಿ 120 ಜನ ತರಬೇತಿ ಪಡೆಯುವ ಸಂಭವವಿದೆ. ಈ ಜನ ತರಬೇತಿಯಾದ ಮೇಲೆ ನಾವು ಇದಕ್ಕೆ ಹೆಚ್ಚು ಹೆಚ್ಚಾಗಿ ಗಮನಕೊಟ್ಟು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಇವಕ್ಕಾಗಿ 2.29 ಕೋಟಿ ರೂ. ಇಟ್ಟುಕೊಂಡಿದ್ದೇವೆ. ಅದಲ್ಲದೆ ಪ್ರತಿ ವರ್ಷ ಮೂರು ಲಕ್ಷ ಎಕರೆ ಭೂಮಿಯೊಳಗೆ ಬದು ಹಾಕುವುದಕ್ಕೆ ಪ್ರಯತ್ನಪಡುತ್ತೇವೆ. ಹಾಗು ತಮಗೆಲ್ಲರಿಗೂ ಗೊತ್ತಿರುವ ಹಾಗೆ ಬರಗಾಲ ಪ್ರದೇಶದಲ್ಲಿ ಮತ್ತು ಹಿಂದುಳಿದ ಪ್ರದೇಶದಲ್ಲಿ ಈ ಯೋಜನೆಯಿಂದ ಬಹಳ ಪ್ರಯೋಜನವಾಗುತ್ತದೆ. ಇದನ್ನು ಹೆಚ್ಚಾಗಿ ಅಲ್ಲಲ್ಲಿ ಪ್ರಯೋಗ ಮಾಡಬೇಕೆಂದು ಸರ್ಕಾರ ಯೋಚನೆ ಮಾಡಿದೆ.

ಎರಡನೇದಾಗಿ ಆಹಾರ ಉತ್ಪಾದನೆಗೆ ಭೂಮಿ ಎಷ್ಟು ಪ್ರಾಮುಖ್ಯವೋ ಹಾಗೆಯೇ ನೀರೂ ಸಹ ಅಷ್ಟೇ ಪ್ರಾಮುಖ್ಯವಾಗಿದೆ. ಮೇಜರ್ ಮತ್ತು ಮೀಡಿಯಮ್ ಇರಿಗೇಷನ್ ಪ್ರಾಜೆಕ್ಟುಗಳಿಂದ ನೀರು ಒದಗಿಸುವುದನ್ನು ಕಲ್ಪನೆ ಮಾಡಿಕೊಂಡು ಅದರಿಂದ ಎಷ್ಟು ಸಾಧ್ಯವೋ ಅಷ್ಟು ನಾವು ಆಹಾರ ಉತ್ಪತ್ತಿ ಮಾಡುವುದು ಆಗುತ್ತದೆ. ಹಾಗೆಯೇ ಮೇಜರ್ ಪ್ರಾಜೆಕ್ಟುಗಳಿಂದ ಸಹ ಎಲ್ಲ ಕಡೆಗಳಲ್ಲೂ ಸಾಧ್ಯವಿರುವವರೆಗೆ ಫೀಡರ್ ಚಾನೆಲ್ಸ್ ಮಾಡಿ ನೀರಿನ ಸೌಲಭ್ಯ ಮಾಡಿ ಕೊಡುವುದಕ್ಕೆ ಯೋಚನೆ ಮಾಡಿ 3.5 ಕೋಟಿ ರೂ. ಇದಕ್ಕೆ ಸರ್ಕಾರ ಖರ್ಚು ಮಾಡುತ್ತದೆ. ಇದರಿಂದ ಉಪಯೋಗವಾಗಿದೆ ಎಂದು ಮಾನ್ಯ ಮಿತ್ರರೊಬ್ಬರು ಹೇಳಿರುವುದು ಶ್ಲಾಘನೀಯವಾದುದು. ಸರ್ವೇ ಸಾಧಾರಣವಾಗಿ ಇದನ್ನು ಬಳ್ಳಾರಿ ಹತ್ತಿರ ಪ್ರಾರಂಭ ಮಾಡಿದ್ದಾರೆ. ರಾಯಚೂರು ಜಿಲ್ಲೆಯಲ್ಲಿಯೂ, ಘಟಪ್ರಭಾ ಹತ್ತಿರ ಇರುವ ಪ್ರದೇಶದಲ್ಲಿ ಸಹ ಇದನ್ನು ಪ್ರಾರಂಭ ಮಾಡುವವರಾಗಿದ್ದೇವೆ. ಮೈನರ್ ಇರಿಗೇಷನ್ ಮೂಲಕ ಬೇಕಾದಷ್ಟು ಸೌಲಭ್ಯ ಹೊಂದಿ ಆಹಾರ ಉತ್ಪತ್ತಿ ಜಾಸ್ತಿಯಾಗಿದೆ ಎಂದು ನನ್ನ ಮಾನ್ಯ ಮಿತ್ರರಾದ ಶ್ರೀಮಾನ್ ಆಲೂರು ಹನುಮಂತಪ್ಪನವರು ತಿಳಿಸಿದ್ದಾರೆ. ಮೈನರ್ ಇರಿಗೇಷನ್ ಬಾಬಿನಲ್ಲಿ ಹಲವಾರು ವರ್ಷಗಳಿಂದ ನೀರಾವರಿ ಬಾವಿಗಳನ್ನು ಕೊಡುತ್ತಿದ್ದೇವೆ. ನೀರಾವರಿ ಬಾವಿಗಳನ್ನು ಕೊಟ್ಟು ನೀರನ್ನು ಒದಗಿಸುವುದಕ್ಕೋಸ್ಕರ ಈಗ ಪಂಪ್‌ಸೆಟ್ ಕೊಡುತ್ತಾ ಇದ್ದೇವೆ. ಹಾಗೆಯೇ ಇದಕ್ಕೆ ಇರುವ ನಿರ್ಬಂಧ, ನಿಬಂಧನೆಗಳನ್ನು ಸಡಲಿಸಿ ಕಾರ್ಯಗತ ಮಾಡುತ್ತಲಿದ್ದೇವೆ. ಸಾಧಾರಣವಾಗಿ ಮೂರನೇ ಪಂಚವಾರ್ಷಿಕ ಯೋಜನೆ ಮುಗಿಯುವುದರೊಳಗಾಗಿ 30,000 ಬಾವಿಗಳನ್ನು ಕೊಡುತ್ತೇವೆ. ಈ ಯೋಜನೆ ಇದೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ನೀರಾವರಿ ಬಾವಿ ಇದ್ದುಬಿಟ್ಟರೆ ನೀರನ್ನು ಮೇಲಕ್ಕೆ ಹೇಗೆ ಎತ್ತುವುದು ಎಂಬ ಪ್ರಶ್ನೆ ರೈತರಿಗೆ ಇರುತ್ತದೆ. ಅದಕ್ಕಾಗಿಯೇ ಸರ್ಕಾರದವರು ಪಂಪ್‌ಸೆಟ್ ತಂದು ಇಟ್ಟುಕೊಳ್ಳಲು ರೈತರಿಗೆ ಸಾಲದ ರೂಪದಲ್ಲಿ ಹಣ ಒದಗಿಸುವ ಯೋಜನೆ ಮಾಡಿದೆ.

(ಶ್ರೀ ಜಿ. ನಾರಾಯಣಗೌಡ)

ಪಂಪ್‌ಸೆಟ್ಟುಗಳ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ನಾವು ಈಗ ವಿದ್ಯುಚ್ಛಕ್ತಿಯಿಂದ ನಡೆಸಲ್ಪಡುತ್ತಿರುವ ಪಂಪ್‌ಸೆಟ್ಟುಗಳು ಮತ್ತು ಡೀಜೆಲ್ ಆಯಿಲ್‌ನಿಂದ ನಡೆಸಲ್ಪಡುತ್ತಿರುವ ಇಂಜಿನ್‌ಗಳು ಇವೆರಡನ್ನೂ ರೈತರಿಗೆ ಕೊಡುತ್ತಿದ್ದೇವೆ. ಈ ವಿಷಯದಲ್ಲಿ ನಾನು ಮಾನ್ಯ ಸದಸ್ಯರಿಗೆ ಹೇಳಬೇಕಾದರೆ ಡೀಜೆಲ್ ಇಂಜಿನ್ ಪಂಪ್‌ಸೆಟ್ಟುಗಳಿಗೋಸ್ಕರವಾಗಿ ದೇಶಾದ್ಯಂತ ನಮಗೆ 2,300 ಅರ್ಜಿಗಳು ಬಂದಿದ್ದವು. ಅದರೊಳಗೆ 592 ಡೀಜೆಲ್ ಇಂಜಿನ್‌ಗಳನ್ನು ಇದುವರೆಗೆ ನಾವು ರೈತರಿಗೆ ಸಪ್ಲೈಮಾಡಿದ್ದೇವೆ.

ಒಬ್ಬ ಮಾನ್ಯ ಸದಸ್ಯರು.—ಯಾವ ವರ್ಷದಲ್ಲಿ 592 ಪಂಪ್‌ಸೆಟ್ಟುಗಳನ್ನು ರೈತರಿಗೆ ಸಪ್ಲೈ ಮಾಡಿದ್ದೀರಿ ?

ಶ್ರೀ ಜಿ. ನಾರಾಯಣಗೌಡ.—ಇದೇ ವರ್ಷದಲ್ಲಿ ಸಪ್ಲೈ ಮಾಡಿದ್ದೇವೆ. ಎಲೆಕ್ಟ್ರಿಕ್ ಪಂಪ್ ಸೆಟ್ಟುಗಳನ್ನು ಸಪ್ಲೈ ಮಾಡತಕ್ಕ ವಿಚಾರ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಹಿಂದೆ ಪಂಪ್ ಸೆಟ್ಟುಗಳನ್ನು ಕೊಂಡುಕೊಳ್ಳುವುದಕ್ಕೆ ಬಹಳ ತೊಂದರೆ ಇತ್ತು. ಡಿಪಾಜಿಟ್ ಮಾಡಬೇಕಾಗಿತ್ತು. ಎನ್‌ಕಂಬರೆನ್ಸ್ ಸರ್ಟಿಫಿಕೇಟ್ ಮತ್ತು ಸಾಲ್ವೆನ್ಸಿ ಸರ್ಟಿಫಿಕೇಟ್ ತೆಗೆದುಕೊಳ್ಳಬೇಕಾಗಿತ್ತು. ಇದಕ್ಕೆಲ್ಲಾ ಹಣ ಖರ್ಚಾಗುತ್ತಿತ್ತು. ರೈತ ಬಾವಿಯನ್ನು ತೆಗೆಯುವುದಕ್ಕೆ ಸಾಲ ತೆಗೆದುಕೊಳ್ಳಲು ಆಸ್ತಿಯನ್ನು ಆಧಾರಮಾಡಿ ಸಾಲವನ್ನು ತೆಗೆದುಕೊಂಡಿದ್ದರೆ, ಮತ್ತೆ ಪಂಪ್‌ಸೆಟ್ಟು ತೆಗೆದುಕೊಳ್ಳಲು ಸಾಲಕ್ಕೆ ಆಧಾರ ಮಾಡಲು ಬೇರೆ ಆಸ್ತಿ ಇಲ್ಲದಿದ್ದರೆ ಅವನು ಪಂಪ್‌ಸೆಟ್ಟನ್ನು ತೆಗೆದುಕೊಳ್ಳುವ ಹಾಗೇ ಇರಲಿಲ್ಲ. ಅಡೀಷನಲ್ ಸೆಕ್ಯೂರಿಟಿಗೆ ಯಾರೂ ಇರುತ್ತಾ ಇರಲಿಲ್ಲ. ಇದನ್ನೆಲ್ಲಾ ಸರ್ಕಾರದವರು ಯೋಚನೆ ಮಾಡಿ ಅಡೀಷನಲ್ ಸೆಕ್ಯೂರಿಟಿ ಸಹಿತ ಇಲ್ಲದೆ ಪಂಪ್‌ಸೆಟ್ಟನ್ನು ಕೊಡಬಹುದು ಎಂದು ತೀರ್ಮಾನ ಮಾಡಿ ಕಡೆಗೆ ಅವನು ಇನ್‌ಷೂರ್ ಮಾಡಿದರೆ ಅವನಿಗೆ ಪಂಪ್‌ಸೆಟ್ಟು ಕೊಡಲು ಬಾವಿ ಇದ್ದರೆ ಸಾಕು, ಅವನು ಸ್ವಂತ ಮಾಡುವ ಜಮೀನಾಗಲೀ ಅಥವಾ ಗೇಣಿಗೆ ಮಾಡುವ ಜಮೀನಾಗಲೀ ಇದ್ದರೆ ಸಾಕು, ಅಂಥವರಿಗೆಲ್ಲ ಪಂಪ್‌ಸೆಟ್ ಕೊಡಬಹುದು ಎಂದು ತೀರ್ಮಾನ ಮಾಡಿದ್ದೇವೆ. ಇನ್‌ಷೂರೆನ್ಸ್ ಪ್ರೀಮಿಯಂ ಸಹಿತ ತೀರಾ ಕಡಿಮೆ. ಎರೆಕ್ಷನ್ ಮತ್ತು ಟ್ರಾನ್ಸಿಸ್ಟ್‌ಗೆ 100 ರೂ. ಬೆಲೆ ಬಾಳುವ ಒಂದು ಪಂಪ್‌ಸೆಟ್ಟಿಗೆ 65 ನಯೇಪೈಸೆ. ಆಮೇಲೆ ಬರ್ಗ್ಲೆರಿ ಮತ್ತು ತೆಫ್ಟ್ ಇತ್ಯಾದಿ ಗಳಿಗೋಸ್ಕರ 25 ನಯೇಪೈಸೆ. ಅದರಲ್ಲಿ ಪಂಪ್‌ಸೆಟ್ಟು ಚಾವಣಿ ಇರುವ ಮನೆಯಲ್ಲಿದ್ದರೆ 25 ನಯೇಪೈಸೆ. ಚಾವಣಿ ಇಲ್ಲದೆ ಇರುವ ಮನೆಯಲ್ಲಿದ್ದರೆ 37 ನಯೇ ಪೈಸೆ ಎಂದು ಎರೆಕ್ಷನ್ ಮತ್ತು ಟ್ರಾನ್ಸಿಸ್ಟ್‌ಗೋಸ್ಕರ ಇಷ್ಟು ಇನ್‌ಷ್ಯೂರೆನ್ಸ್ ಪ್ರೀಮಿಯಮ್ ಕೊಡಬೇಕೆಂದು ಇದೆ. ರೂಲ್ಸ್‌ಗಳನ್ನು ಇಷ್ಟು ಸಡಲಿಸಿ ನಾವು ಪಂಪ್‌ಸೆಟ್ಟುಗಳನ್ನು ರೈತರಿಗೆ ಕೊಡುತ್ತಿದ್ದೇವೆ. ಏನು ಕೊಟ್ಟರೂ ಸಹ ಟೀಕೆ ಇದ್ದೇ ಇರುತ್ತದೆ.

ಇನ್ನು ಸರ್ಕಾರದವರು ಬಾವಿ ತೆಗೆಯಲು ರೈತನಿಗೆ ಸಾಲ ಕೊಟ್ಟು, ಪಂಪ್‌ಸೆಟ್ಟು ಕೊಟ್ಟು ಒಂದು ವೇಳೆ ಸರಿಯಾದ ನೀರಿನ ವಸತಿ ಇಲ್ಲದೆಹೋದರೆ ಅದನ್ನು ಹೋಗಲಾಡಿಸಲು ಬೋರ್‌ವೆಲ್ ಸಿಸ್ಟಮ್‌ನಲ್ಲಿ ಬೇರೆ ಹಣವನ್ನು ಸ್ಯಾಂಕ್ಷನ್ ಮಾಡಬಹುದು. ಇದರಿಂದ ರೈತನಿಗೆ ಎರಡು ರೀತಿಯ ಅನುಕೂಲ ಆಗುತ್ತದೆ. ಮೊದಲನೆಯದಾಗಿ ಸರ್ವೀಸ್ ವೆಲ್ ಎಂದು ಮಾಡಿಕೊಳ್ಳಬಹುದು. ಆಮೇಲೆ ಬಾವಿ ಪ್ರಾರಂಭವಾಡಿ ಜಲಾಧಾರಕ್ಕೆ ಕೊರತೆಬಿದ್ದಾಗ ಬೋರ್‌ವೆಲ್ ಮಾಡಿಕೊಳ್ಳ ಬಹುದು. ಇರುವ ಬಾವಿಗೇನೇ ಬೇರೆ ಬೋರ್‌ಮಾಡಿ ನೀರನ್ನು ಪಡೆಯಬಹುದು. ರಿಜರ್ವಾಯರ್ ಇರುತ್ತದೆ. ಅದರಿಂದ ಬೇಕಾದರೂ ಪಡೆಯಬಹುದು. ಎರಡು ಮೂರು ತರದಲ್ಲಿ ಅನುಕೂಲ ವಾಗುತ್ತದೆ. ಇದಕ್ಕೂ ಸಹಿತ 100 ಕ್ಕೆ 25 ರೂಪಾಯಿ ಸಬ್ಸಿಡಿ ಸಿಕ್ಕುತ್ತದೆ. ಇಷ್ಟು ಅನುಕೂಲ ಗಳನ್ನು ಸರ್ಕಾರದವರು ರೈತನಿಗೆ ಮಾಡಿಕೊಟ್ಟಿದ್ದಾರೆ. ಇದು ನೀರಿನ ವಸತಿಯ ವಿಷಯ ಆಯಿತು.

ಆಮೇಲೆ ಸುಧಾರಿಸಿದ ಬೀಜಗಳು ವ್ಯವಸಾಯದ ಉಪಕರಣಗಳು ಹಾಗೂ ಗೊಬ್ಬರ ಇವು ಬಹಳ ಪ್ರಾಮುಖ್ಯವಾದುವುಗಳು. ಈ ವಿಷಯದಲ್ಲಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ವೆಂಕಟೇಗೌಡರು ಕೂಡ ಒಂದೊಂದು ತಾಲ್ಲೂಕಿನಲ್ಲಿ ಒಂದು ಲಕ್ಷ ಎಕರೆಗೆ ಒಂದೊಂದು ಸೀಡ್‌ಫಾರಮ್ ಮಾಡಬೇಕೆಂದು ಹೇಳಿದ್ದಾರೆ. ಆದರೆ ಇದನ್ನು ಮಾಡು ವುದು ಬಹಳ ಕಷ್ಟವಾಗಿದೆ. ಏತಕ್ಕೆಂದರೆ ಅನೇಕ ಸಂದರ್ಭಗಳಲ್ಲಿ ನಮಗೆ ಸೀಡ್‌ಫಾರಮ್ ಮಾಡುವುದಕ್ಕೆ ಉತ್ತಮವಾದ ಜಮೀನು ಸಿಕ್ಕುವುದಿಲ್ಲ. ಹೀಗೆ ನಾನಾ ಅನಾನುಕೂಲಗಳು ಇರು ತ್ತವೆ. ಎಲ್ಲೆಲ್ಲಿ ನಮಗೆ ಅನುಕೂಲಗಳು ಸಿಕ್ಕುತ್ತವೆಯೋ ಅಲ್ಲೆಲ್ಲಾ ನೋಡಿ ಸರ್ವೇ ಮಾಡಿ

ಸಾಧಾರಣವಾಗಿ ಎಲ್ಲಾ ಭಾಗಗಳಿಗೂ ಅನ್ವಯವಾಗುವ ಹಾಗೆ ಅಲ್ಲಲ್ಲೇ ಸೀಡ್ ಫಾರಮ್‌ಗಳನ್ನು ಮಾಡಿದ್ದೇವೆ. ಇಂಥಾ ಸೀಡ್ ಫಾರಮ್‌ಗಳು ಒಟ್ಟು ನಮ್ಮ ದೇಶದಲ್ಲಿ ಇವೊತ್ತಿನ ದಿವಸ 61 ಇವೆ. ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಕೆಲವು ಸೀಡ್ ಫಾರಮ್‌ಗಳನ್ನು ಮಾಡುವವ ರಾಗಿದ್ದೇವೆ. ಇನ್ನು ಉತ್ತಮ ತಳಿ ಬೀಜಗಳನ್ನು ತಯಾರುಮಾಡುವುದಕ್ಕೆ ಸಂಶೋಧನಾಲಯ ಗಳು ಬಹಳ ಪ್ರಾಮುಖ್ಯವಾದುವುಗಳು. ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ಹಾಗೆ ಹತ್ತಿ, ಕಬ್ಬು, ರಾಗಿ, ಬತ್ತ, ಜೋಳ ಮುಂತಾದ ಅನೇಕ ಬೆಳೆಗಳಿಗೆ ಅನೇಕ ಸಂದರ್ಭಗಳಲ್ಲಿ ಬೇರೆ ಬೇರೆ ತಳಿಯನ್ನು ನಾವು ಕಂಡುಹಿಡಿಯಬೇಕಾಗುತ್ತದೆ. ಈ ತಳಿಯನ್ನು ನಾವು ಹೆಚ್ಚಿಗೆ ಮಲ್ಟಿಪ್ಲೈ ಮಾಡುವುದಕ್ಕೆ ಸೀಡ್‌ಫಾರಮ್‌ಗಳಿಗೆ ಕೊಟ್ಟರೆ ಸಾಧ್ಯವಾಗುತ್ತದೆ. ಮಾನ್ಯ ಸದಸ್ಯರು ಕೆಲವರು ಹೇಳಿದರು, ಕೆಲವು ಸಂದರ್ಭಗಳಲ್ಲಿ ಸಂಶೋಧನಾಲಯಗಳಲ್ಲಿ ಸರಿಯಾದ ತಳಿಯನ್ನು ಕಂಡುಹಿಡಿ ಯುತ್ತಿಲ್ಲ ಎಂದು. ಈ ವಿಷಯದಲ್ಲಿ ಸ್ವಲ್ಪಮಟ್ಟಿಗೆ ಟೀಕೆಯನ್ನು ಮಾಡಿದರು. ಬಹುಶಃ ಒಂದು ಉದಾಹರಣೆ ಕೊಟ್ಟರೆ ಮಾನ್ಯ ಸದಸ್ಯರೆಲ್ಲರಿಗೂ ಅದು ವಿಶದವಾಗುತ್ತದೆ.

ಹತ್ತಿ ವಿಷಯದೊಳಗೆ ಅನೇಕ ಮಾನ್ಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದರು. ಈಗ ಧಾರವಾಡ ಡಿಸ್ಟ್ರಿಕ್ಟ್ ಒಂದನ್ನೇ ತೆಗೆದುಕೊಂಡರೂ ಕೂಡ ಜಯಧರ ಮತ್ತು ಲಕ್ಷ್ಮಿ ಹತ್ತಿ ಬಹಳ ಶ್ರೇಷ್ಠವಾದದ್ದು. ಅದು ಒಳ್ಳೆಯ ಬೆಳೆ ಬರುತ್ತದೆ ಎಂಬುದಾಗಿ ಒಂದಾನೊಂದು ಕಾಲದಲ್ಲಿ ಕೆಲವರು ಹೇಳುತ್ತಿದ್ದರು. ಆದರೆ ಈಗ ಈ ಹತ್ತಿಯ ಬೆಳೆ ಡಿಟೇರಿಯೋರೇಟಾಗಿದೆ. ಇದರಲ್ಲಿ ಹೆಚ್ಚಿಗೆ ಬೆಳೆ ಬರುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಇದಕ್ಕೆ ಅನೇಕ ಕಾರಣಗಳಿವೆ. ಈಗ ಸರ್ವೇ ಸಾಧಾರಣವಾಗಿ ಒಂದು ಬೆಳೆ 10 ವರ್ಷ ಚೆನ್ನಾಗಿ ಬೆಳೆಯುತ್ತದೆ. ಆಮೇಲೆ ಕುಗ್ಗುತ್ತಾ ಬರು ತ್ತದೆ. ಆದ್ದರಿಂದ ಸಂಶೋಧನೆಯ ಕಡೆ ಹೆಚ್ಚು ಗಮನ ಕೊಡಬೇಕಾಗುತ್ತದೆ. ಆದ್ದರಿಂದ ಈ ಸಂಶೋಧನಾಲಯಗಳ ಕಡೆಗೂ ನಾವು ಹೆಚ್ಚು ಗಮನವನ್ನು ಕೊಡುತ್ತಿದ್ದೇವೆ.

ಮಾನ್ಯ ಸದಸ್ಯರಾದ ಶ್ರೀ ಬೊಮ್ಮಣ್ಣನವರು ಅರಸೀಕೆರೆ ವಿಷಯ ಹೇಳಿದರು. ಅಲ್ಲಿ ಬೀಜದ ತೆಂಗಿನಕಾಯಿ ಸರಿಯಾದ್ದು ಕೊಡದೆ ಅನ್ಯಾಯವಾಗಿದೆಯೆಂದು ಹೇಳಿದರು. ನನ್ನ ಗಮನಕ್ಕೆ ಬಂದಿದೆ, ನಾನು ಅನ್ಯಾಯವಾಗದ ಹಾಗೆ ನೋಡಿಕೊಳ್ಳುತ್ತೇನೆ.

ನಾವು ಬೀಜ ಕೊಡುತ್ತೇವೆ. ಬೀಜ ಕೊಟ್ಟಮೇಲೆ ಗೊಬ್ಬರದ ಪ್ರಶ್ನೆ. ಈಗ ನಮಗೆ ಗೊಬ್ಬರ ಅಂದರೆ ಕಾಂಪೋಸ್ಟ್ ಗೊಬ್ಬರ, ಹಸಿರೆಲೆ ಗೊಬ್ಬರ, ಇದರ ಜೊತೆಗೆ ಕೃತಕ ಗೊಬ್ಬರ, ಇಷ್ಟನ್ನೂ ರೈತನಿಗೆ ಕೊಡುವುದಕ್ಕೆ ಅನುಕೂಲ ಮಾಡಿದ್ದೇವೆ. ಹಸಿರೆಲೆ ಒಂದೇ ತಯಾರು ಮಾಡತಕ್ಕಂಥಾದ್ದು. ಕೃತಕ ಗೊಬ್ಬರ ಮಾತ್ರ ನಾವು ತರಿಸಿಕೊಡಬೇಕಾಗಿದೆ. ಕೃತಕ ಗೊಬ್ಬರ ಸರಿಯಾಗಿ ಸಿಗುತ್ತಾ ಇಲ್ಲ ಎಂದು ಮಾನ್ಯ ಸದಸ್ಯರು ಟೀಕೆ ಮಾಡಿದರು. ಬಹುಶಃ ಅಂಕಿ ಅಂಶಗಳನ್ನೇ ಕೊಟ್ಟರೆ ಅವರಿಗೆ ಗೊತ್ತಾಗಬಹುದು. ಕೃತಕ ಗೊಬ್ಬರ ನಮಗೆ ಇಂಡಿಯಾ ಸರ್ಕಾರದವರು ಏನು ಕಳುಹಿಸಿಕೊಡು ತ್ತಾರೆಯೋ ಆ ಕೃತಕ ಗೊಬ್ಬರ ನಮ್ಮ ದೇಶಾದ್ಯಂತ ಸಾಕಾದಷ್ಟು ಪ್ರಮಾಣದಲ್ಲಿ ಆಗುತ್ತಾ ಇಲ್ಲ. ಆದ್ದರಿಂದ ನಮಗೆ ಅಲ್ಲಿ ಏನು ತಯಾರಾಗುತ್ತೋ, ಏನು ಬರಬೇಕಾಗಿತ್ತೋ, ಅದು ಬರುತ್ತಾ ಇದೆ. ಹಾಗೆಯೇ ಎರಡನೇ ಪಂಚವಾರ್ಷಿಕ ಯೋಜನೆ ಅವಧಿಯೊಳಗೆ ನಮಗೆ ಬೇಕಾದ 3,67,500 ಟನ್ನಿಗೆ ಇಂಡಿಯಾ ಸರ್ಕಾರದಿಂದ 2 04,267 ಟನ್ ಮಾತ್ರ ಬಂದಿದೆ. ಈ ವರ್ಷದಲ್ಲಿ 3,64,000 ಟನ್ನಿನಲ್ಲಿ 1,44,000 ಟನ್ ಈಗಾಗಲೇ ನಾವು ಇಂಡೆಂಟ್ ಮಾಡಿದ್ದೇವೆ; ಸ್ವಲ್ಪ ಹೆಚ್ಚು ಕಡಿಮೆ ಅದೂ ಬರ ಬಹುದು ಅನ್ನುವ ಆಸೇನೂ ಇದೆ. ಆದರೆ ಕೃತಕ ಗೊಬ್ಬರ ಎಷ್ಟೇ ತಯಾರಿಸಿದರೂ ಅದರ ಹಂಚಿಕೆ ಸರಿಯಾಗಿ ಆಗುತ್ತಾ ಇಲ್ಲ ಅನ್ನುವ ದೂರುಗಳಿವೆ. ಸಾಧಾರಣವಾಗಿ ಕೃತಕ ಗೊಬ್ಬರ ತರಿಸಿ State Marketing Society ಮೂಲಕವಾಗಲಿ, ಅಥವಾ Taluk Marketing Society ಮೂಲಕವಾಗಲಿ ಹಂಚುತ್ತೆ; ಅನೇಕ ಸಂದರ್ಭಗಳಲ್ಲಿ Service Co-operative Society ಗಳ ಮೂಲಕ ಹಂಚಲಾಗುತ್ತದೆ. ಕೆಲವು ಸ್ಥಳಗಳಲ್ಲಿ Service Co-operative Society ಗ್ರಾಮಾಂ ತರ ಪ್ರದೇಶಗಳಿಗೆ ಹಂಚಲು ಮುಂದೆ ಬರುತ್ತಾ ಇಲ್ಲ. ಇಂಥ ಸಂದರ್ಭಗಳಲ್ಲಿ Taluk Marketing Society ಗಳು ಅವರಿಗೆ ಕೊಡಬಹುದು ಅನ್ನುವ ಒಂದು ಯೋಜನೆ ಮಾಡಿದ್ದೇವೆ.

ಆಮೇಲೆ ಗೊಬ್ಬರಕ್ಕೇ ನೇರವಾಗಿ ನಾವು ಈಚೆಗೆ ಲೋನ್ ಕೊಡುವ ಒಂದು ಅವಕಾಶ, ಒಂದು ಯೋಜನೆ ಸಹಿತ ಯೋಚನೆ ಮಾಡಿದ್ದೇವೆ. ಅದನ್ನು ಕಾರ್ಯಗತ ಮಾಡಬೇಕೆಂದು ಮಾಡಿಕೊಂಡಿ ದ್ದೇವೆ. ಹೀಗೆ ನಮ್ಮ ಫಾರಂ ಅಥವಾ ಕಂಪೋಸ್ಟ್ ಗೊಬ್ಬರವನ್ನು ತಯಾರು ಮಾಡುವುದಕ್ಕೆ ಯಾವ ಗ್ರಾಮಪಂಚಾಯಿತಿ ಮುಂದೆ ಬರುತ್ತೋ ಅಂಥ ಗ್ರಾಮಪಂಚಾಯಿತಿಗೆ ಸ್ವಲ್ಪ ಸಹಾಯ ಮಾಡುವುದಕ್ಕೆ ಸರ್ಕಾರ ಯೋಚನೆ ಮಾಡಿದೆ.

ಈಗ ಬೀಜದ ವಿಷಯದಲ್ಲಿ ತಾವು ಹೇಳಬಹುದು, ಅನೇಕ ಸಂದರ್ಭಗಳಲ್ಲಿ ಎಲ್ಲ ರೈತರಿಗೂ ಬೇಕಾದಷ್ಟು ಬೀಜ ಸಿಗುತ್ತಾ ಇಲ್ಲವೆಂದು. ಒಂದುವೇಳೆ ನಮ್ಮ ರಾಜ್ಯದ ರೈತರಿಗೆ ಬೇಕಾದಷ್ಟು ಬೀಜ ಇಲ್ಲದೇ ಇರಹುದು. ಅದನ್ನು ತಾವು ಆಲೋಚನೆ ಮಾಡಬೇಕು ಅನೇಕ ಸಂದರ್ಭಗಳಲ್ಲಿ

(ಶ್ರೀ ಜಿ. ನಾರಾಯಣಗೌಡ)

ರೈತರುಗಳು ಅದನ್ನು ಮಲ್ಟಿಪ್ಲೈ ಮಾಡಿ ಬೇರೆ ಕಡೆಗೆ ಕಳುಹಿಸುವ ಸಂದರ್ಭವೂ ಇದೆ. ರೈತರುಗಳಿಗೆ ಹಾಗೆ ಮಾಡಬೇಕೆಂದು ಹೇಳಿ ತಾವು ಸಹಾಯಮಾಡಬೇಕೆಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇಷ್ಟು ಎಲ್ಲಾ ಆಯಿತು—ರೈತನಿಗೆ ನೀರಿನ ವಸತಿ ಇದೆ, ಬೀಜ ಇದೆ, ಗೊಬ್ಬರ ಕೊಡುತ್ತೇವೆ. ಅವನ ಪೈರೂ ಆಯಿತು. ಆದರ ಆ ಪೈರಿಗೆ ರೋಗ ಬರುವ ಸನ್ನಿವೇಶ ಇದೆ. ಈ ರೋಗ ರುಜಿನಗಳ ನಿವಾರಣೆಗೋಸ್ಕರ ನಾವು ಹೆಚ್ಚುಗಮನ ಕೊಡಬೇಕಾದುದು ನಮ್ಮ ಕರ್ತವ್ಯ. ಅದಕ್ಕೋಸ್ಕರ ನಾವು ಕ್ರಿಮಿಕೀಟಗಳ ನಿಷೇಧಕ್ಕೆ ಬೇಕಾದ ಔಷದಿಗಳನ್ನೂ ಮತ್ತು ಸ್ಪ್ರೇಯರುಗಳನ್ನು, ಸಬ್‌ಸಿಡಿ ಕೊಟ್ಟು ಬಂದಂಥ ಮಾನ್ಯ ಸದಸ್ಯರು ಹತ್ತಿ ಬೆಳೆಗೆ ಅಲ್ಲ ಬಹಳ ಅನಾಹುತವಾಗಿದೆಯೆಂದು ಹೇಳಿದರು ನಾವು ಮೊದಲೇ ಏರಿಯಲ್ ಸ್ಪ್ರೇಯಿಂಗ್ ಮಾಡಬೇಕೆಂದು ಯೋಚನೆ ಮಾಡಿದ್ದೆವು. ಅದು ಸರ್ಕಾರದಿಂದಲೂ ಸ್ಯಾಂಕ್ಷನ್ ಆಗಿತ್ತು. ಬಹುಶಃ ಕಾರಣಾಂತರಗಳಿಂದ ಏರಿಯಲ್ ಸ್ಪ್ರೇಯಿಂಗ್ ಆಗಲಿಲ್ಲ. ಅದರ ಕಡೆಗೆ ಗಮನ ಮುಂದೆ ಕೊಡುತ್ತೇವೆಂದು ನಾನು ತಮಗೆ ಭರವಸೆ ಕೊಡುತ್ತೇನೆ.

ಹೀಗೆಯೇ ಈಗ ಪವರ್ ಸ್ಪ್ರೇಯರ್ಸ್ ಏನಿದೆ ಅವುಗಳನ್ನು ಹೆಚ್ಚಿಗೆ ತರಿಸಿಕೊಡಿ ಎಂದು ನಮ್ಮ ರೈತರು ಕೇಳುತ್ತಾ ಇದ್ದಾರೆ. ಈ ಪವರ್ ಸ್ಪ್ರೇಯರ್ಸ್ ಮತ್ತು ಡಸ್ಟರ್‌ಗಳಿಗೆ ನಮಗೆ ಫಾರಿನ್ ಎಕ್ಸ್‌ಚೇಂಜ್ ಬೇಕಾಗುತ್ತದೆ. ಆದರೂ ಡಸ್ಟರಿಗೆ ಇಂಡಿಯಾ ಸರ್ಕಾರದ ಅನುಮತಿ ಸಹಿತ ನಾವು ಕೇಳಿದ್ದೇವೆ.

ಹೀಗೆ ನಾವು ಅದನ್ನೆಲ್ಲಾ ಒಂದುವೇಳೆ ಮಾಡಿದರೂ ಸಹಿತ, ಈಗ ಏನಾಗಿದೆಯೆಂದರೆ, ನಮ್ಮ ರೈತನಿಗೆ ಅನೇಕ ಸಂದರ್ಭಗಳಲ್ಲಿ ನಾವೇ ಆಗಲಿ, ಇಲಾಖೆಯವರೇ ಆಗಲಿ, ತಾವೇ ಆಗಲಿ, ಯಾರಾದರೂ ಹೇಳಿದರೆ ಅಷ್ಟು ಬೇಗನೆ ಅದನ್ನು ಗಮನಕ್ಕೆ ತೆಗೆದುಕೊಳ್ಳುವ ಶಕ್ತಿ ಇಲ್ಲ. ಇದಕ್ಕೆ ಕಾರಣ ಅವನಿಗೆ ಹೆಚ್ಚು ವಿದ್ಯೆ ಇಲ್ಲದಿರುವುದು. ಅದಕ್ಕೋಸ್ಕರ ನಮ್ಮ ದೇಶದೊಳಗೆ ಎರಡು ಕಾಲೇಜುಗಳನ್ನು ನಡೆಸುತ್ತಾ ಇದ್ದೇವೆ. ಹಾಗೆಯೇ ಆರು ಅಗ್ರಿಕಲ್ಚರಲ್ ಸ್ಕೂಲುಗಳನ್ನು ನಾವು ನಡೆಸುತ್ತಾ ಇದ್ದೇವೆ. ಈ ಮೂರನೆಯ ಯೋಜನೆಗಳಿಗೆ ಸಹಿತ ಕೆಲವು ಸ್ಕೂಲುಗಳನ್ನು ಕೊಡಬೇಕು ಅಂತ ನಾವು ಮನಸ್ಸು ಮಾಡಿದ್ದೇವೆ. ಈ ಸ್ಕೂಲುಗಳಲ್ಲಿ ಮುಖ್ಯವಾಗಿ ರೈತರಿಗೆ ಹೆಚ್ಚು ಅವಕಾಶ ಕೊಡುವ ಸಂದರ್ಭಗಳು ಇವೆ.

ರೈತರಿಗೋಸ್ಕರವಾಗಿ ಎರಡು ಮೂರು ತಿಂಗಳು ತರಬೇತಿ ಕೊಡುವ ಟ್ರೈನಿಂಗ್ ಸೆಂಟರುಗಳನ್ನು ಏರ್ಪಡಿಸಬೇಕೆಂದು ಯೋಚನೆ ಮಾಡುತ್ತಾ ಇದ್ದೇವೆ. ಈಗ ನಾನು ಹೇಳಬಹುದು. ರಾಮಕೃಷ್ಣಪುರದಲ್ಲಿ ಈಚೆಗೆ ಇಂಡಿಯಾದೇಶದ ಕೃಷಿಕ ಸಮಾಜದ ನೆರವನ್ನು ಪಡೆದು, ಹಾಗೂ ನಮ್ಮ ಸರ್ಕಾರ ಸ್ವಲ್ಪ ನೆರವು ಕೊಟ್ಟು ಒಂದು ಟ್ರೈನಿಂಗ್ ಸೆಂಟರ್ ಮಾಡಿದ್ದೇವೆ. ಇಲ್ಲಿ ಟ್ರೈನಿಂಗ್ ಸೆಂಟರಿಗೆ ಇಪ್ಪತ್ತು ಮಂದಿ ರೈತರ ಮಕ್ಕಳು ಆಗಲೇ ಬಂದಿದ್ದಾರೆ. ಅವರಿಗೆ ತಿಂಗಳಿಗೆ 30 ರೂ. ಭತ್ಯವನ್ನು ಕೊಡುತ್ತಾ ಇದ್ದೇವೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ, ಹೀಗೆ ನಮ್ಮ ರೈತರ ವಿದ್ಯಾಭ್ಯಾಸ ಮುಂದುವರಿದರೇನೇ ನಮ್ಮಲ್ಲಿ ಅಹಾರೋತ್ಪತ್ತಿ ಕಡೆ ಹೆಚ್ಚು ಗಮನ ಕೊಡುತ್ತಾರೆ. ಕೆಲವರು ಹೇಳಿದರು; ವಿದ್ಯಾಭ್ಯಾಸ ಕೊಟ್ಟರೆ ಅನೇಕರು ನೌಕರಿಗೆ ಹೋಗುವುದಕ್ಕೆ ಪ್ರಾರಂಭ ಮಾಡುತ್ತಾರೆ, ಅದಕ್ಕೋಸ್ಕರ ಹೆಚ್ಚಿಗೆ ಈ ವಿದ್ಯಾಭ್ಯಾಸ ಬೇಕಾಗಿಲ್ಲ ಅಂತ. ಆದರೆ ಎಲ್ಲರೂ ವಿದ್ಯಾವಂತರಾದರೆ ನೌಕರಿಗೆ ಹೋಗಬೇಕು ಅನ್ನತಕ್ಕಂಥ ಹಂಬಲ ಕಡಿಮೆಯಾಗುತ್ತದೆ. ತಮಗೆಲ್ಲರಿಗೂ ಗೊತ್ತಿರುವ ಹಾಗೆ ಅದರಿಂದಲೇ, ಈ ಮಾನ್ಯ ಸಭೆಯೊಳಗೆ ನಾನು Agricultural University Bill ಒಂದನ್ನು ಇಂಟ್ರಡ್ಯೂಸ್ ಮಾಡಿದ್ದೇನೆ. ಅದಕ್ಕೆ ಬಹುಶಃ ತಮ್ಮೆಲ್ಲರ ಸಹಕಾರ ಇರುವುದು ಎಂದು ನಾನು ತಿಳಿದುಕೊಂಡಿದ್ದೇನೆ.

ಆಮೇಲೆ ನಿಮಗೆ ಅಗ್ರಿಕಲ್ಚರಲ್ ಸ್ಕೂಲುಗಳು ಆರು ಇವೆ ಅಂತ ಈಗ ನಾನು ಏನು ಹೇಳಿದ್ದೆನೋ, ಅವೂ ಅಲ್ಲದೆ, Soil management ಮತ್ತು Irrigation ನಲ್ಲಿ ತರಬೇತಿ ಕೊಡುವುದಕ್ಕೋಸ್ಕರ, ಬಳ್ಳಾರಿ ಡಿಸ್ಟ್ರಿಕ್ಟಿನಲ್ಲಿ ಮೋಕದೊಳಗೆ, ರಾಯಚೂರು ಡಿಸ್ಟ್ರಿಕ್ಟಿನಲ್ಲಿ ಗಂಗಾವತಿಯಲ್ಲಿ ಬಿಜಾಪುರ ಡಿಸ್ಟ್ರಿಕ್ಟಿನಲ್ಲಿ ಮುಧೋಳನಲ್ಲಿ, ಮೂರು ಸ್ಥಳಗಳಲ್ಲಿ, ತರಬೇತಿ ಸೆಂಟರುಗಳನ್ನೂ ಸಹ ನಾವು ಏರ್ಪಾಡು ಮಾಡಿದ್ದೇವೆ.

5-30 P.M.

ಇನ್ನು ಕೆಲವು ಮಾನ್ಯ ಸದಸ್ಯರು, ಈ ಇಲಾಖೆಯೊಳಗಿನ ನೌಕರರಿಗೆ ಒಂದು ರೀತಿಯ ಅತೃಪ್ತಿ ಉಂಟಾಗಿದೆ, ಇನ್ನೂ ಸೀನಿಯಾರಿಟಿ ಪಟ್ಟಿ ತಯಾರಾಗಿಲ್ಲ ಎನ್ನುವ ವಿಷಯಗಳನ್ನು ನನ್ನ ಗಮನಕ್ಕೆ ತಂದಿದ್ದಾರೆ. ಅದು ಸರ್ಕಾರಕ್ಕೂ ಚೆನ್ನಾಗಿ ಗೊತ್ತಿದೆ. ಸರ್ಕಾರದವರು ಆ ಬಗ್ಗೆ

ತೀವ್ರವಾಗಿ ಆಲೋಚಿಸಿ ಬಹಳ ಬೇಗನೆ ಒಂದು ತೀರ್ಮಾನಕ್ಕೆ ಬರುತ್ತಾರೆಂಬುದು ತಮಗೆಲ್ಲರಿಗೂ ಗೊತ್ತಿದೆ. ಈ ವಿಷಯವಾಗಿ ಹೈಕೋರ್ಟಿಗೆ ರಿಟ್ ಅರ್ಜಿಗಳು ಹೋಗಿವೆ. ಆದ್ದರಿಂದ ಅದು ಹಾಗೆಯೇ ಮುಂದುವರಿಸಿಕೊಂಡು ಬಂದಿದೆ. ಆದರೂ ಕೂಡ ಈ ಬಗ್ಗೆ ಹೆಚ್ಚಿಗೆ ಗಮನ ಈ ವಿಚಾರವನ್ನು ಬೇಗನೆ ಬಗೆಹರಿಸುವುದಕ್ಕೆ ಕೂಡಲೇ ಒಂದು ತೀರ್ಮಾನವನ್ನು ತಗೆದುಕೊಳ್ಳುತ್ತೇವೆಂದು ನಾನು ಹೇಳುತ್ತೇನೆ. ಹಿಂದೆ ಬಡ್ಜೆಟ್ ಭಾಷಣದ ಮೇಲೆ ಮಾತನಾಡಿದ ಶ್ರೀಮಾನ್ ಎಸ್. ಎಂ. ಕೃಷ್ಣ ಅವರು ಮತ್ತು ಶ್ರೀ ಜಿ. ಮಾದೇಗೌಡರು ಮಂಡ್ಯಾದಲ್ಲಿ ಸಾಂದ್ರ ಬೇಸಾಯ ಕ್ರಮವನ್ನೇನು ತಂದಿದ್ದೇವೆಯೋ ಆ ಬಗ್ಗೆ ವಿಶೇಷವಾಗಿ ಟೀಕೆ ಮಾಡಿದರು. ಅದರ ವಿಷಯ ಹೇಳುವುದು ಇಷ್ಟೇ. ನಾವು ಇಂಡಿಯಾ ಸರ್ಕಾರದ ನೆರವನ್ನು ಪಡೆದು ಸಾಧಾರಣವಾಗಿ 5 ಕೋಟಿ 61 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಐದು ವರ್ಷಗಳಿಗೆ ಸಾಂದ್ರ ಬೇಸಾಯ ಅಭಿವೃದ್ಧಿಗೋಸ್ಕರವಾಗಿ ಅವರಿಂದ ತಗೆದುಕೊಂಡಿದ್ದೇವೆ. ಈ ವಿಚಾರ ತಮಗೆಲ್ಲರಿಗೂ ಗೊತ್ತಿದೆ. ಅವರಿಗೂ ಗೊತ್ತು. ಆ ಒಂದು ಯೋಜನೆ ಈಗ ತಾನೇ ಪ್ರಾರಂಭವಾಗಿದೆ, ಇನ್ನೂ ಮುಂದೆ ನೋಡೋಣ ಎಂಬ ವಿಷಯವನ್ನು ಹೇಳಿದರು. ಇದರಿಂದ ಏನು ಭಾವನೆ ಬಂದಿದೆ ಎಂದರೆ ಅಧಿಕಾರಿಗಳು ಅಲ್ಲಿ ಹೋಗಿ ಎಲ್ಲಾ ಅವರೇ ಕೆಲಸ ಮಾಡಿ ರೈತನ ಮನೆ ಬಾಗಿಲಿಗೆ ಅಥವಾ ಅವನು ಇದ್ದ ಕಡೆ ಆಹಾರ ಪದಾರ್ಥಗಳನ್ನು ಸೇರಿಸುವ ವ್ಯವಸ್ಥೆ ಮಾಡಬೇಕು ಎಂಬುದಾಗಿ ಅವರು ಮಾತನಾಡಿದ ಹಾಗೆ ಹೇಳಿದರು. ಪ್ಯಾಕೇಜ್ ಡೀಲ್ ಪ್ರೋಗ್ರಾಂ ಮುಖ್ಯವಾಗಿ ಅವನು ಹೆಚ್ಚು ಬೆಳೆಯುವುದಕ್ಕೆ ಅವಕಾಶವಾಗಲಿ ಎಂದು ಮಾಡಿದ್ದು. ಆದ್ದರಿಂದ ಅವನಿಗೆ ಫರ್ಟಿಲೈಜರ್ಸ್‌ನ್ನು ಹೆಚ್ಚಿಗೆ ಸರಬರಾಜು ಮಾಡಬೇಕು. ಸುಧಾರಿಸಿದ ಬೀಜ ಮತ್ತು ಸುಧಾರಿಸಿದ ಸಲಕರಣೆಗಳು ಮತ್ತು ಟೆಕ್ನಿಕಲ್ ನೋ-ಹೌ ಅವರ ಸಹಾಯ ಇವೆಲ್ಲಾ ಕೊಡುವುದಕ್ಕೋಸ್ಕರ ಸರ್ಕಾರ ಹೆಚ್ಚು ಪ್ರಯತ್ನ ಮಾಡುತ್ತಿದೆ. ಇದರಿಂದ ಹೆಚ್ಚಿಗೆ ಆಹಾರೋತ್ಪತ್ತಿ ಮಾಡಲಿ ಎಂಬುದೇ ಸರ್ಕಾರದ ಧ್ಯೇಯ. ಆದ್ದರಿಂದ ನಾನು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸಭೆಯ ಮುಂದೆ ಹೇಳಬೇಕಾಗಿದೆ. ಈಗ ಮಂಡ್ಯಾ ಜಿಲ್ಲೆಯಲ್ಲಿ ಪ್ರಾರಂಭವಾಗಿರುವ ಐದು ವರ್ಷಗಳ ಏನೊಂದು ಯೋಜನೆ ಹಾಕಿದ್ದಾರೋ ಅದನ್ನು ಸರ್ವೆ ಸಾಧಾರಣವಾಗಿ ನಾಲ್ಕು ವರ್ಷಗಳಿಗೆ ಇಳಿಸಿದ್ದೇವೆ. ಏಕೆಂದರೆ ಮೊದಲನೆ ವರ್ಷ ಮತ್ತು ಎರಡನೆ ವರ್ಷ ಶೇ. 20 ರಷ್ಟು ಕವರ್ ಮಾಡಿದರೆ ಸಾಕು ಎಂದು ಮಾಡಿದ್ದವು. ಆ ಮೇಲೆ 3—4—5 ನೇ ವರ್ಷಗಳಲ್ಲಿ ಶೇ. 65 ರವರೆಗೂ ಹೋಗುತ್ತೇವೆಂದು ಅಂದು ಕೊಂಡೆವು. ಆದರೆ ಈಗ ಮೊದಲನೇ ವರ್ಷದಲ್ಲಿ ಕೆಲಸ ನಡೆದಿರುವುದನ್ನು ನೋಡಿದರೆ ಎರಡು ವರ್ಷಗಳಲ್ಲಿ ಶೇ. 20 ರಷ್ಟು ಕವರ್ ಆಗಬೇಕಾದ್ದು ಮೊದಲನೇ ವರ್ಷದಲ್ಲಿ ಕವರ್ ಆಗಿದೆ. 1963–64 ನೇ ಸಾಲಿನೊಳಗೆ ಶೇ. 60 ಭಾಗದಷ್ಟು ಕವರ್ ಮಾಡಿ 3-4 ನೇ ವರ್ಷದಲ್ಲಿಯೇ ನೂರಕ್ಕೆ ನೂರರಷ್ಟು ಕವರ್ ಮಾಡುವ ಒಂದು ಯೋಜನೆಯನ್ನು ಇಟ್ಟುಕೊಂಡಿದ್ದೇವೆ. ನನಗೆ ಆ ಒಂದು ನಂಬಿಕೆ ಇದೆ. ಏಕೆಂದರೆ ಸ್ಟೇಟ್ ಲೆವಲ್‌ನೊಳಗೆ ಒಂದು ಕೊ-ಆರ್ಡಿನೇಷನ್ ಕಮಿಟಿ ಇದೆ. ಜಿಲ್ಲಾ ಲೆವಲ್‌ನಲ್ಲಿ ಒಂದು ಕೊ-ಆರ್ಡಿನೇಷನ್ ಕಮಿಟಿ ಇದೆ. ಇದರಲ್ಲಿ ಜಿಲ್ಲಾ ಮತ್ತು ತಾಲ್ಲೂಕ್ ಬೋರ್ಡ್ ಅಧ್ಯಕ್ಷರು, ಸದಸ್ಯರು ಇದ್ದಾರೆ. ಅಸೆಂಬ್ಲಿ ಮತ್ತು ಕೌನ್ಸಿಲ್ಲಿನ ಮಾನ್ಯ ಸದಸ್ಯರುಗಳು ಅದಕ್ಕೆ ಪರ್ಮನೆಂಟ್ invitees ಆಗಿದ್ದಾರೆ. ಬಹುಶಃ ಅನೇಕ ಸಂದರ್ಭಗಳಲ್ಲಿ ಅವರು ಸಲಹೆ ಕೊಡಬಹುದು. ಅವರ ಸಲಹೆ ತೆಗೆದುಕೊಂಡು ಅದರ ಬೆಳವಣಿಗೆಯಾಗುವಂತೆ ಮಾಡಬೇಕು ಎಂಬುದಾಗಿ ನಾನು ಹೇಳ ಬಯಸುತ್ತೇನೆ ಇನ್ನು ನಾವು ಮೊದಲನೆ ವರ್ಷದಲ್ಲಿದ್ದೇವೆ. ಈಗಾಗಲೇ ಎಷ್ಟೋ ಈ ಬಗ್ಗೆ ಕೆಲವು ಅಡ್ಡಿ ಆತಂಕಗಳು ಬಂದಿವೆ. ಸರ್ವೆ ಸಾಧಾರಣವಾಗಿ ಅಲ್ಲಿ 10 ಬ್ಲಾಕುಗಳು ಆಗಿವೆ. ಪ್ರತಿಯೊಂದಕ್ಕೂ ಟ್ರಾಕ್ಟರುಗಳನ್ನು ಒದಗಿಸಬೇಕಾಗಿತ್ತು. ಆದರೂ ತಕ್ಷಣ ಒದಗಿಸಲಿಕ್ಕಾಗಲಿಲ್ಲ ಕಾರ್ಯತಃ ಪ್ರಾರಂಭ ಮಾಡಿದ್ದು 62 ನೇ ಇಸವಿಯಲ್ಲಿ. ಅದೇನೂ ಉತ್ಪ್ರೇಕ್ಷೆ ಅಲ್ಲ. ಆ ರೀತಿ ಮಾತನಾಡುವುದು ಸರಿಯಲ್ಲ. ಆಗಲೇ 10 ಟ್ರ್ಯಾಕ್ಟರುಗಳನ್ನು ತೆಗೆದುಕೊಂಡು ಒಂದೊಂದು ತಾಲ್ಲೂಕಿನ ಬ್ಲಾಕಿಗೂ ಬಾಡಿಗೆ ರೂಪವಾಗಿ ಕೊಡುವುದಕ್ಕೆ ವ್ಯವಸ್ಥೆ ಮಾಡಲಾಗಿದೆ. ಇನ್ನು ಕೆಲವರು ವರ್ಕ್ ಷಾಪ್ ವಿಷಯವಾಗ ಹೇಳಿದರು. ಆದರೆ ಅವರು ಅದನ್ನು ನೋಡಿದ್ದು ಇಲ್ಲವೆಂದು ಮಾತ್ರ ಹೇಳಿದರು. ಆ ಒಂದು ವರ್ಕ್ ಷಾಪನ್ನು ಡಿಸೆಂಬರ್‌ನೊಳಗೆ ಇಲ್ಲಿ ಸ್ಥಾಪನೆಮಾಡಬೇಕೆಂದು ಒಂದು ಸರಕಾರೀ ಆಜ್ಞೆಯಾಗಿದೆ. ಆದರೆ ಇಂಡಿಯಾ ಸರ್ಕಾರದ ನೆರವು ಮತ್ತು ತಜ್ಞರ ಅಭಿಪ್ರಾಯವನ್ನು ಪಡೆಯಲು ಅದು ಸ್ವಲ್ಪ ನಿಧಾನವಾಗಿದೆ. ಇಂಜಿನಿಯರುಗಳ ಸಹ ವರ್ಗವಾಗಿದೆ. ಅವರು ಈಗ ಚಾರ್ಜ್ ತೆಗೆದುಕೊಂಡಿದ್ದಾರೆ. ವರ್ಕ್ ಷಾಪ್ ಸ್ಥಾಪನೆಯ ಮುಖ್ಯೋದ್ದೇಶ ಏನೆಂದರೆ ಟ್ರ್ಯಾಕ್ಟರುಗಳ ಸರ್ವಿಸ್ ಮಾಡುವುದು, ಡಿಜೈನ್ ಮಾಡಿ ಯಾವ್ಯಾವ ಪ್ರದೇಶಗಳಿಗೆ ಯಾವ್ಯಾವ ಉಪಕರಣಗಳು ಬೇಕು ಅವನ್ನೆಲ್ಲಾ ಅಲ್ಲಿನ ಲೋಕಲ್ ಆರ್ಟಿಸಾನುಗಳಿಗೆ ಕೊಟ್ಟು ಅವರಿಗೆ ಚೆನ್ನಾಗಿ ತರಪೇತು ಕೊಡುವುದು ಆಗಿದೆ. ಆ ದೃಷ್ಟಿಯಲ್ಲಿ ಸರ್ಕಾರ ಈ ಪ್ರೋಗ್ರಾಂ ಅನ್ನು ಹಾಕಿಕೊಂಡಿದೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದಷ್ಟು ಅಲ್ಲಿ ಅಷ್ಟು ಅನ್ಯಾಯವಾಗಿಲ್ಲ. ನಾವೇನು ಸರಿಯಾದ

(ಶ್ರೀ ಜಿ. ನಾರಾಯಣಗೌಡ)

ರೀತಿಯಲ್ಲಿ ನಿರೀಕ್ಷಣೆ ಮಾಡಿದ್ದೆವೋ ಆ ಮಟ್ಟದಲ್ಲಿ ಕೆಲಸ ಮಾಡಿವೆ. ಮುಂದೆ ಇನ್ನೆರಡು ಮೂರು ವರ್ಷಗಳೊಳಗೆ ಹೆಚ್ಚಿನ ಪ್ರಗತಿ ದಾರಿಯೊಳಗೆ ಹೋಗುವ ಹಾಗೆ ಮಾಡುವುದು ಆಗುತ್ತದೆ. ಇಷ್ಟು ಮಾತ್ರ ನಾನು ಹೇಳುತ್ತೇನೆ. ನನ್ನ ಮಾನ್ಯ ಮಿತ್ರರು ಒಂದೆರಡು ಸಲಹೆಗಳನ್ನು ಮಾಡಿದರೆ ಅದರ ಸಲುವಾಗಿ ಒಂದೆರಡು ವಿಷಯಗಳು ಮಾತನಾಡುತ್ತೇನೆ.

ಒಬ್ಬ ಮಾನ್ಯ ಸದಸ್ಯರು.—ಈ ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ಈ ಪ್ಯಾಕೇಜ್ ಡೀಲ್ ಯೋಜನೆ ಇದೆಯೇ ?

ಶ್ರೀ ಜಿ. ನಾರಾಯಣಗೌಡ.—ಸೌತ್ ಕೆನಾರಕ್ಕೆ ಬೇಸಾಯವನ್ನು intensify ಮಾಡುವುದ ಕ್ಕೋಸ್ಕರ ಈ ಒಂದು ಯೋಜನೆಯನ್ನು ಕೇಳಿಕೊಂಡಿದ್ದೇವೆ. ಆ ಒಂದು ವಿಷಯದಲ್ಲಿ ಅವರು ಪರಿ ಶೀಲನೆ ಮಾಡುತ್ತಿದ್ದಾರೆ. ಸೌತ್ ಕೆನರಾ ಅಷ್ಟೆ ಅಲ್ಲ. ಶಿವಮೊಗ್ಗ ಮತ್ತು ಮೈಸೂರುಗಳಲ್ಲೂ ಸಹಿತ ಬತ್ತ ಹೆಚ್ಚಾಗಿ ಬೆಳೆಯುವ ಯೋಜನೆಯನ್ನು ಸಹ ಇಟ್ಟುಕೊಂಡಿದ್ದೇವೆ. ಆ ಬಗ್ಗೆ ಇಂಡಿಯಾ ಸರ್ಕಾರದ ನೆರವನ್ನು ಸಹ ಕೇಳಿದ್ದೇವೆ. ಅದು ಬಂದಾಗ ಆ ಯೋಜನೆ ತೆಗೆದುಕೊಳ್ಳಲು ಸಾಧ್ಯ ವಾಗಬಹುದು.

ಇನ್ನು ಟ್ರ್ಯಾಕ್ಟರುಗಳ ವಿಷಯದಲ್ಲಿ ಒಂದು ಸಲಹೆ ಬಂತು. ನಮ್ಮ ದೇಶದೊಳಗೆ ದೊಡ್ಡ ದೊಡ್ಡ ಟ್ರ್ಯಾಕ್ಟರುಗಳನ್ನು ಕೊಂಡುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದು ಪ್ರಯೋಜನವಿಲ್ಲ. ಅದ ಕ್ಕೋಸ್ಕರವಾಗಿ ಚಿಕ್ಕಚಿಕ್ಕ ಟ್ರ್ಯಾಕ್ಟರುಗಳನ್ನು ತಯಾರಿಸಿಕೊಡುವುದು ಒಳ್ಳೆಯದು ಎಂದು ಕೆಲವರು ಅಭಿಪ್ರಾಯಪಟ್ಟರು. ಇದರಲ್ಲಿ ನನಗೇನೂ ಭಿನ್ನಾಭಿಪ್ರಾಯವಿಲ್ಲ. ಅವುಗಳನ್ನು ಜಾಗ್ರತೆಯಾಗಿ ತಯಾ ರುಮಾಡಿಸಬಹುದೆಂದು ನಾನು ಅಂದುಕೊಂಡಿದ್ದೇನೆ. ಆದರೆ ಆ ಕಾರ್ಯ ಅದಷ್ಟು ಬೇಗನೆ ಆಗದೇ ಇರಬಹುದು. ಆ ಬಗ್ಗೆ ಸರ್ಕಾರಕ್ಕೆ ತೀವ್ರಾಸಕ್ತಿ ಇದ್ದೇ ಇದೆ. ತೀವ್ರ ಗಮನವೂ ಸಳೆದಿದ್ದಾರೆ. ಆದರೆ ಆ ಕಾರ್ಯ ಎಷ್ಟು ಬೇಗನೆ ಆಗುತ್ತದೆ ಎಂದು ಹೇಳುವುದಕ್ಕೆ ಈಗ ಸಾಧ್ಯವಿಲ್ಲ.

ಇಷ್ಟು ಮಾತ್ರ ಹೇಳಿ ನಾನು ನನ್ನ ಇಲಾಖೆ ಬಗ್ಗೆ ಏನು ಬೇಡಿಕೆಗಳನ್ನು ಮಾನ್ಯ ಸಭೆಯ ಮುಂದೆ ಇಟ್ಟಿದ್ದೇನೋ ಅದಕ್ಕೆ ಮಾನ್ಯ ಸದಸ್ಯರೆಲ್ಲರೂ ಸರ್ವಾನುಮತದಿಂದ ಬೆಂಬಲ ಕೊಡಬೇ ಕೆಂದು ಬೇಡಿಕೊಳ್ಳುತ್ತೇನೆ.

ಶ್ರೀ ಎ. ಎಂ. ದೇವ್.—ಪಂಪ್‌ಸೆಟ್‌ಗಳು ಮುಂತಾದ ಸೌಲಭ್ಯಗಳು ನನ್ನಂಥ ಶಾಸನ ಸಭೆಯ ಸದಸ್ಯರಿಗೂ, ಅನುಕೂಲಸ್ಥರಿಗೂ ಸಿಕ್ಕಬಹುದು, ಬಡವರಿಗೆ ಸಿಕ್ಕುವುದಿಲ್ಲ. ಭೂಸುಧಾರಣೆ ಜಾರಿಗೆ ಬಂದ ಹೊರತು ಬಡವರಿಗೆ ಈ ಸೌಲಭ್ಯಗಳು ಸಿಕ್ಕುವುದಿಲ್ಲ. ಈ ವಿಚಾರವಾಗಿ ಮಂತ್ರಿಗಳು ಏನನ್ನೂ ಹೇಳಲಿಲ್ಲ. ಈ ದೃಷ್ಟಿಯಿಂದ ನೀವು (ಸರ್ಕಾರ) ಪಾಪಮಾಡುತ್ತಿದ್ದೀರಿ, ಇದರಲ್ಲಿ ಪಾಲು ಗೊಳ್ಳುವುದಕ್ಕೆ ನನಗೆ ಇಷ್ಟವಿಲ್ಲ. ಇದನ್ನು ಪ್ರತಿಭಟಿಸುವುದಕ್ಕಾಗಿ ನಾನು ಸಭೆಯನ್ನು ಬಿಟ್ಟು ಹೋಗುತ್ತೇನೆ.

(ಸಭೆಯಿಂದ ಹೊರಗೆ ಹೋದರು).

ಶ್ರೀ ಬಿ. ರಾಚಯ್ಯ (ಅರಣ್ಯ ಮತ್ತು ಮೀನುಗಾರಿಕೆಯ ಮಂತ್ರಿಗಳು).—ಸ್ವಾಮಿ, ಈಗ ಎರಡು ದಿವಸಗಳಿಂದ ಮಾನ್ಯ ಸದಸ್ಯರು ಕೊಟ್ಟ ಸಲಹೆಗಳು ಮತ್ತು ಮಾಡಿದ ಟೀಕೆಗಳಿಗೆ ವ್ಯವ ಸಾಯ ಮತ್ತು ಪಶುಪಾಲನೆ ಇಲಾಖೆಗಳ ಮಂತ್ರಿಗಳು ಉತ್ತರಗಳನ್ನು ಕೊಟ್ಟಿದ್ದಾರೆ. ಈ ಎರಡು ಇಲಾಖೆಗಳ ಜೊತೆಗೆ ಮೀನುಗಾರಿಕೆಯ ಅಭಿವೃದ್ಧಿಗೆ ಸಂಬಂಧಪಟ್ಟ ಹಾಗೆ ಮಾನ್ಯ ಸದಸ್ಯರು ಕೆಲವು ಉಪಯುಕ್ತ ಸಲಹೆಗಳನ್ನು ಕೊಟ್ಟಿದ್ದಾರೆ. ಅಲ್ಲದೆ ಬಹಳ ಕಾಲದಿಂದ ಟೀಕೆಗೊಳಗಾಗಿದ್ದ ಅರಣ್ಯ ಇಲಾಖೆಯ ಬಗ್ಗೆ ಈಗ ಟೀಕೆಗಳು ಸ್ವಲ್ಪ ಕಡಮೆಯಾಗಿವೆಯೆಂದು ಸದಸ್ಯರು ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ನಾನು ಅವರಿಗೆ ಅತ್ಯಂತ ಸಂತೋಷದಿಂದ ನನ್ನ ಧನ್ಯವಾದಗಳನ್ನು ರ್ಪಿಸುತ್ತೇನೆ. ಈ ಉಪಯುಕ್ತ ಇಲಾಖೆಗಳಿಗೆ ಸಂಬಂಧಪಟ್ಟಂತೆ ಚರ್ಚೆಮಾಡಲು ಎಲ್ಲ ಸದಸ್ಯರಿಗೂ ಕಾಲಾವಕಾಶವಿಲ್ಲದಿದ್ದುದರಿಂದ ಒಂದು ಮಾತು ಹೇಳಬೇಕಾಗಿದೆ. ನನ್ನ ಇಲಾಖೆಗಳಿಗೆ ಸಂಬಂಧ ಪಟ್ಟಂತೆ ಅನೇಕ ಸದಸ್ಯರು ತಮ್ಮ ಖೋತಾ ನಿರ್ಣಯಗಳನ್ನು ಕಳುಹಿಸಿದ್ದಾರೆ. ಅವರು ಈ ಬಗ್ಗೆ ಸಭೆಯಲ್ಲಿ ಮಾತನಾಡದಿದ್ದರೂ, ಅವರ ಖೋತಾ ನಿರ್ಣಯಗಳಿಗೆ ನಾನು ಉತ್ತರ ಕೊಡುವುದರಿಂದ ಬಹುಶಃ ಅವರು ತೃಪ್ತಿಗೊಳ್ಳುವರೆಂದು ನಂಬಿದ್ದೇನೆ. ಮತ್ಸ್ಯ ಪರಿಪಾಲನೆ ಕೆಲಸದಲ್ಲಿ ಬಹಳ ಅನುಭವ ಪಡೆದಿರುವ ಮಾನ್ಯ ಸದಸ್ಯರಾದ ಶ್ರೀಮಾನ್ ಮಧ್ವರಾಜ್ ಅವರು ಈ ಸಭೆಯ ಮಾನ್ಯ ಸದಸ್ಯರೆಲ್ಲರಿಗೂ ಮನವರಿಕೆಯಾಗುವ ರೀತಿಯಲ್ಲಿ ಅನೇಕ ವಿಷಯಗಳನ್ನು ತಿಳಿಸಿದ್ದಾರೆ. ಒಟ್ಟಿನಲ್ಲಿ ಅವರು ಕೊನೆಯದಾಗಿ ಹೇಳಿದ್ದೆಂದರೆ, ಸಂಸ್ಥಾನದಲ್ಲಿ ಸುಮಾರು 200 ಮೈಲಿ ಸಮುದ್ರತೀರವಿದ್ದು,

ಭಾರತ ಕರಾವಳಿಯ ಹದಿನೈದನೆಯ ಒಂದು ಭಾಗದಷ್ಟು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟ ಹಾಗಿದ್ದರೂ ಕೂಡ ಹಿಂದೂದೇಶದಲ್ಲಿ ಹಿಡಿಯುವ ಮೀನುಗಳಲ್ಲಿ ನಮ್ಮದು ಆರರಲ್ಲಿ ಒಂದು ಭಾಗವಿದ್ದರೂ ಕೂಡ, ಈ ಇಲಾಖೆಗೆ ಸಾಕಷ್ಟು ಹಣವನ್ನೊದಗಿಸಿಲ್ಲ, ಈಗ ಒದಗಿಸಿರುವ ಹಣ ಸಾಲದೆಂದು ಹೇಳಿದ್ದಾರೆ. ಆ ಮಾತನ್ನು ಒಪ್ಪಿಕೊಳ್ಳುತ್ತೇನೆ. ಆದುದರಿಂದಲೇ ಈ ಮೂರನೆಯ ಯೋಜನೆಯಲ್ಲಿ ಮೀನುಗಾರಿಕೆಯ ಅಭಿವೃದ್ಧಿಗಾಗಿ ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿಗಳನ್ನೊದಗಿಸಿದ್ದರೂ ಈ ಇಲಾಖೆಯ ಮುಖ್ಯಾಧಿಕಾರಿಗಳು ಇದು ಸಾಲುವುದಿಲ್ಲವೆಂದು ಹೇಳಿ ಕೇರಳ, ಬೊಂಬಾಯಿ ಮುಂತಾದ ಮೀನುಗಾರಿಕೆಯಲ್ಲಿ ಹೆಚ್ಚಿನ ಅಭಿವೃದ್ಧಿ ಪಡೆದಿರುವ ಇತರ ಪ್ರಾಂತಗಳಲ್ಲಿ ಹೆಚ್ಚಿನ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸಿದ್ದಾರೆ, ಇಲ್ಲಿ ಕೊಟ್ಟಿರುವುದು ಕಡಮೆ ಎಂದು ಹೇಳಿದುದರಿಂದ 3 ಕೋಟಿ 52 ಲಕ್ಷ ರೂಪಾಯಿಗೆ ಅಂದಾಜನ್ನು ತಯಾರು ಮಾಡಿಸಿ ಮಂಜೂರು ಮಾಡಿ, ಇಂಡಿಯಾ ಸರ್ಕಾರದವರು ಇದಕ್ಕೆ ನೆರವನ್ನು ಕೊಡಬೇಕೆಂದು ಈ ವರ್ಷ ಸತತವಾಗಿ ಪ್ರಯತ್ನ ಮಾಡುತ್ತಿದ್ದೇವೆ. ಕೇಂದ್ರ ಸರ್ಕಾರದವರು ಮೂರನೆಯ ಪಂಚವಾರ್ಷಿಕ ಯೋಜನೆಗೆ ಏನು ಹಣವನ್ನೊದಗಿಸಿದ್ದಾರೋ ಅದನ್ನನ್ನೂ ಎರಡು ವರ್ಷಗಳೊಳಗೆ ಖರ್ಚು ಮಾಡಿದರೆ, ನಾವು ಯೋಜನೆಯನ್ನಿಟ್ಟಿದ್ದೇವೋ ಅದಕ್ಕೆ ಬೇಕಾದ ಹೆಚ್ಚು ಹಣವನ್ನು ಒದಗಿಸುತ್ತೇವೆಂದು ಹೇಳಿದ್ದಾರೆ. ಈ ಬಗ್ಗೆ ಪತ್ರವ್ಯವಹಾರ ಮಾಡಿದ್ದೇವೆ. ಈ ವರ್ಷ ಮತ್ಸ್ಯ ಪರಿಪಾಲನೆಗಾಗಿ 1962-63ರಲ್ಲಿ ಎಷ್ಟು ಹಣವನ್ನೊದಗಿಸಿದ್ದೇವೋ ಅದಕ್ಕಿಂತ 21 ಲಕ್ಷ ರೂಪಾಯಿ, ಎಂದರೆ 43 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಇದೇ ರೀತಿ ಹೆಚ್ಚು ಮಾಡಿದರೆ 3 ಕೋಟಿ 52 ಲಕ್ಷ ರೂಪಾಯಿನ ಯೋಜನೆ ತೃಪ್ತಿಕರವಾಗಿ ಪರಿಪೂರ್ಣವಾಗುತ್ತದೆಂಬ ನಂಬಿಕೆ ಇದೆ. ಮುಖ್ಯವಾಗಿ ಸಮುದ್ರದಲ್ಲಿ ದೋಣಿಗಳಲ್ಲಿ ಹೋಗುವ ಜನರ ಕಷ್ಟವನ್ನು ಹೇಳುವುದಕ್ಕಾಗುವುದಿಲ್ಲ. ಇವರು ಸಾಮಾಜಿಕವಾಗಿಯೂ, ಆರ್ಥಿಕವಾಗಿಯೂ ಹಿಂದುಳಿದಿದ್ದಾರೆ. ಇಂತಹ ವ್ಯಕ್ತಿಗಳಿಗೆ ಇನ್ನೂ ಹೆಚ್ಚು ಉತ್ತೇಜನ ಕೊಡಬೇಕೆಂದು ಸರ್ಕಾರದವರು ಅವರಿಗೆ, ಶಿಕ್ಷಣ ಪಡೆದ ಬೆಸ್ತರಿಗೆ ಯಾಂತ್ರಿಕ ದೋಣಿಗಳನ್ನೊದಗಿಸಬೇಕೆಂದು ಮಂಗಳೂರು ಮತ್ತು ಕಾರವಾರಗಳಲ್ಲಿ ಎರಡು ಕೇಂದ್ರಗಳನ್ನು ತೆರೆದಿದ್ದಾರೆ. ಏಕ ಕಾಲದಲ್ಲಿ 8 ಯಾಂತ್ರಿಕ ದೋಣಿಗಳನ್ನು ಕಟ್ಟುವುದಕ್ಕೆ ವ್ಯವಸ್ಥೆಯಿದೆ. ಈ ವರ್ಷ ಒಂದೊಂದು ಕಡೆ 16 ರಷ್ಟು ಕಟ್ಟಬೇಕೆಂದು ಪ್ರಯತ್ನ ನಡೆಯುತ್ತಿದೆ. ಇದೂ ಅಲ್ಲದೆ ಖಾಸಗಿ ಸಹಕಾರ ಸಂಸ್ಥೆಗಳವರು ಮುಂದೆ ಬಂದಿದ್ದಾರೆ, ಅವರಿಗೂ 10 ಯಾಂತ್ರಿಕ ದೋಣಿಗಳನ್ನು ಕಟ್ಟಿಸಬೇಕೆಂದು ಸರ್ಕಾರದವರು ಮಂಜೂರಾತಿಯನ್ನು ಈಗಾಗಲೇ ನೀಡಿದ್ದಾರೆ. ಇಷ್ಟಾದರೂ ಈ ದೇಶದಲ್ಲಿ ಸುಮಾರು ಒಂದು ಲಕ್ಷ ಜನ ಮೀನುಗಾರಿಕೆ ವೃತ್ತಿಯನ್ನವಲಂಬಿಸಿಕೊಂಡಿರುವ ಜನರಲ್ಲಿ 20 ಸಾವಿರ ಜನರು ಯಾವಾಗಲೂ ಮೀನು ಹಿಡಿಯುವವರಿದ್ದಾರೆ. ಇವರಿಗೆ ನಾಲ್ಕು ಸಾವಿರದಷ್ಟು ಯಾಂತ್ರಿಕ ದೋಣಿಗಳನ್ನು ಕೊಡಬೇಕಾಗುತ್ತದೆ. ಎರಡು ರೀತಿಯ ದೋಣಿಗಳಿವೆ. 16,500 ರೂಪಾಯಿ, 32,000 ರೂಪಾಯಿ ಬೆಲೆ ಬೀಳುತ್ತದೆ. ಇದರಲ್ಲಿ ಮೂರನೆಯ ಒಂದು ಭಾಗ ಮುಫತ್ತಾಗಿ ಕೊಟ್ಟು ಮಿಕ್ಕ ಹಣವನ್ನು ಸಾಲವಾಗಿ ಕೊಟ್ಟು ವಸೂಲು ಮಾಡತಕ್ಕ ವ್ಯವಸ್ಥೆಯನ್ನು ಇಲಾಖೆಯಲ್ಲಿ ಮಾಡಿಕೊಂಡಿದ್ದಾರೆ. ಈ ದೃಷ್ಟಿಯಿಂದ ಯಾಂತ್ರಿಕ ಉಪಕರಣಗಳನ್ನೊದಗಿಸಬೇಕೆಂದಿಟ್ಟುಕೊಂಡಿದ್ದೇವೆ. ದೋಣಿಗಳನ್ನು ಕಟ್ಟತಕ್ಕ ಜನರು ಮುಂದೆ ಬಂದರೆ ಹೆಚ್ಚಿನ ರೀತಿಯ ಸಹಾಯ ಮಾಡಲು ಸರ್ಕಾರ ಸಿದ್ಧ. ಇದಕ್ಕೆ ಬೇಕಾದ ಯಂತ್ರಗಳು ಮತ್ತು ಕೆಲವು ಭಾಗಗಳು ನಮ್ಮ ದೇಶದಲ್ಲಿ ಸಿಕ್ಕುತ್ತಿಲ್ಲ. ಈ ಸಬಂಧವಾಗಿ ಪತ್ರವ್ಯವಹಾರ ನಡೆಸುತ್ತಿದ್ದೇವೆ. ಆದರೂ ಕಿರ್ಲೋಸ್ಕರ್ ಕಂಪೆನಿಯವರು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಈ ಯಂತ್ರಗಳನ್ನು ಕೊಡತಕ್ಕ ಪರಿಸ್ಥಿತಿ ಬಂದಿಲ್ಲ. ಆದುದರಿಂದ ಜರ್ಮನಿ, ನಾರ್ವೆ ದೇಶಗಳಿಂದ ಒದಗಿಸಿಕೊಳ್ಳಲು ಸಾಧ್ಯವೆ ಎಂಬ ಬಗ್ಗೆ ವ್ಯವಹಾರ ನಡೆಸಿ, ಸ್ಟೇಟ್ ಟ್ರೇಡಿಂಗ್ ಕಾರ್ಪೊರೇಷನ್ನವರು ಸುಮಾರು 26 ಇಂಜಿನುಗಳನ್ನು ಈ ವರ್ಷ ಒದಗಿಸಿದ್ದಾರೆ. ಇನ್ನೂ ಹೆಚ್ಚು ಬರಬಹುದು. ಅದು ಬಂದ ಪಕ್ಷಕ್ಕೆ ಈ ವರ್ಷ 28 ಕಟ್ಟಬೇಕೆಂದು ಹೇಳಿರುವುದನ್ನು ಹೆಚ್ಚು ಮಾಡುವುದಕ್ಕವಕಾಶವಿದೆ. ಯಾಂತ್ರಿಕ ದೋಣಿಗಳ ಜೊತೆಗೆ ಇದಕ್ಕೆ ಬೇಕಾದ ಬಲೆಗಳನ್ನೂ, ಇನ್ನೂ ಇತರ ಸಾಮಗ್ರಿಗಳನ್ನೂ ಒದಗಿಸಿಕೊಳ್ಳಬೇಕಾದರೆ ಹಣ ಬೇಕಾಗುತ್ತದೆ. ಇದನ್ನೂ ಸಾಲದ ರೂಪವಾಗಿ ಕೊಡುತ್ತಿದ್ದೇವೆ. ಇಷ್ಟಾದರೂ ಸಮುದ್ರಕ್ಕೆ ಒಂದು ತೊಟ್ಟು ಹಾಲು ಹಾಕಿದಹಾಗಾಗುತ್ತದೆ. ಈ ದೇಶದ ಆಹಾರ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಸಫಲರಾಗಿದ್ದೇವೆಂದು ಹೇಳುವಹಾಗಿಲ್ಲ. ಸುಮಾರು ಹತ್ತು ಸಾವಿರ ಚದರ ಮೈಲಿಯಲ್ಲಿ ಮೀನು ಹಿಡಿಯುವ ಅವಕಾಶವಿರುವ ಪ್ರದೇಶವಿದೆ. ಇದರಿಂದ ದೇಶದ ಆಹಾರ ಸಮಸ್ಯೆಯನ್ನು ಪರಿಹರಿಸುವುದರ ಜೊತೆಗೆ ಸಮಾಜದಲ್ಲಿ ಹಿಂದಿರುವ ಜನರಿಗೆ ಕೆಲಸವನ್ನು ಕೊಟ್ಟಂತಾಗುತ್ತದೆ. ಅಲ್ಲದೆ ಇದರಿಂದ ದೊರೆಯುವ ಮೀನುಗಳನ್ನು ನಮ್ಮ ಜನರಿಗೆ ಒದಗಿಸುವುದಲ್ಲದೆ ಪರದೇಶಗಳಿಗೆ ಕಳುಹಿಸಿ ಎರಡೂವರೆ ಕೋಟಿ ರೂಪಾಯಿನಷ್ಟು ವಿದೇಶವಿನಿಮಯ ದೊರಕಿಸಿಕೊಳ್ಳಬಹುದು. ಎಂದಮೇಲೆ ಇದರ ಪ್ರಾಮುಖ್ಯತೆ ಎಷ್ಟೆಂಬುದನ್ನು ತಿಳಿದುಕೊಳ್ಳಬಹುದು. ಇದು ಸಣ್ಣ ಇಲಾಖೆಯೆಂದು ಭಾವಿಸಿದರೆ ಅದು ತಪ್ಪು ಎನ್ನುವುದನ್ನು ತೋರಿಸುವ

(ಶ್ರೀ ಬಿ. ರಾಚಯ್ಯ)

ದೃಷ್ಟಿಯಿಂದ ಈ ದಿವಸ ಬೆಳಿಗ್ಗೆ ಈ ಇಲಾಖೆಯ ಕಾರ್ಯಚಟುವಟಿಕೆಯ ವಿವರಗಳನ್ನು ಅಂಕಿ ಅಂಶಗಳ ಮೂಲಕ ಮಾನ್ಯ ಸದಸ್ಯರಿಗೆ ಕೊಟ್ಟಿರುವುದು.

ಏಕೆಂದರೆ ಜಿ. ರಾಮೇಗೌಡರು ಮತ್ತು ಇತರರು ಖೋತಾ ನಿರ್ಣಯಗಳನ್ನು ಕಳುಹಿಸಿದ್ದಾರೆ. ಪ್ರಚಾರ ಹೆಚ್ಚಾಗಿಲ್ಲ, ಕಾರ್ಯ ಮಾಡುವುದು ಕಾಣುತ್ತಿಲ್ಲ ಎಂದು ಹೇಳಿರುವುದರಿಂದ ಸ್ವಲ್ಪ ಅಂಕಿ ಅಂಶಗಳನ್ನು ಕೊಡಬೇಕೆಂದಿದ್ದೇನೆ. ಅಧ್ಯಕ್ಷರ ಅಪ್ಪಣೆ ಬೇಡಿ ಅದನ್ನು ಮಾನ್ಯ ಸಭೆಗೆ ಒದಗಿಸಬೇಕೆಂದಿದ್ದೇನೆ. ಮೈಸೂರು ಸಂಸ್ಥಾನದಲ್ಲಿ ನಮಗೆ ಈ ಬಾಬಿಗೆ 1961-62ರಲ್ಲಿ 18 ಲಕ್ಷ ರೂಪಾಯಿಗಳನ್ನು ಮಾತ್ರ ಕೊಟ್ಟಿತ್ತು. ಆದರೆ 23 ಲಕ್ಷ 92 ಸಾವಿರ ರೂಪಾಯಿಗಳು ಖರ್ಚಾಗಿವೆ. 1962–63ರಲ್ಲಿ 21 ಲಕ್ಷ 50 ಸಾವಿರ ರೂಪಾಯಿಗಳಿತ್ತು. ಈ ವರ್ಷ 43 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದೆ. ಇದರಲ್ಲಿ ನಾನ್-ಪ್ಲಾನ್ಡ್ ಮತ್ತು ಪ್ಲಾನ್ಡ್ ಎಕ್ಸ್‌ಪೆಂಡಿಚರ್ ಸೇರಿ ಒಟ್ಟಿನಲ್ಲಿ ಈ ವರ್ಷ 50 ಲಕ್ಷ ರೂಪಾಯಿಗಳು ಈ ಇಲಾಖೆಯಲ್ಲಿ ಮಾರ್ಚಿ 15ರವರೆಗೆ ಖರ್ಚಾಗುತ್ತದೆ. ಈ ಇಲಾಖೆಯ ರೆವೆನ್ಯೂ 1956-57ರಲ್ಲಿ ಒಂದು ಲಕ್ಷ ಇದ್ದುದು 1962-63ರಲ್ಲಿ ಏಳು ಲಕ್ಷವಾಗಿವೆ. ಅದೇ ರೀತಿ ಮೀನುಗಳ ಉತ್ಪತ್ತಿ ಸಹ ಹೆಚ್ಚಿದೆ, ಈ ದಿವಸ ಒಂದು ಲಕ್ಷ ಹತ್ತು ಟನ್ ಉತ್ಪತ್ತಿಯಾಗಿದೆ, ಇನ್‌ಲ್ಯಾಂಡ್ ಫಿಷರೀ 23 ಸಾವಿರ ಟನ್ ದೊರೆತಿದೆ. ಇದುವರೆಗೆ ಸುಮಾರು 68 ಯಾಂತ್ರಿಕ ದೋಣಿಗಳನ್ನು ಕೊಟ್ಟಿದ್ದೇವೆ. 124 ಜನರಿಗೆ ಟ್ರೈನಿಂಗ್ ಕೊಡಲಾಗಿದೆ. ಮೊದಲು ಎರಡು ಕೇಂದ್ರಗಳಲ್ಲಿ 40 ಜನರಿಗೆ ಟ್ರೈನಿಂಗ್ ಕೊಡಲು ಅವಕಾಶವಿತ್ತು. ಅದನ್ನು ದ್ವಿಗುಣಗೊಳಿಸಿ 80 ಜನರಿಗೆ ಅವಕಾಶ ಮಾಡಿದ್ದೇವೆ ಹಿಡಿದ ಮೀನನ್ನು ಸುವ್ಯವಸ್ಥಿತ ರೀತಿಯಲ್ಲಿ ಸಂರಕ್ಷಣೆ ಮಾಡಿ, ಹದಗೊಳಿಸುವುದಕ್ಕೆ ಬೇಕಾಗಿರುವ ಮಂಜುಗಡ್ಡೆ ಮತ್ತು ರಕ್ಷಣೆ ಮಾಡುವ ವ್ಯವಸ್ಥೆ ಮುಂತಾದ್ದಕ್ಕೆ ಮಂಗಳೂರು, ಕುಂದಾಪುರ, ಕಾರವಾರ, ಕುಮಟ, ಭಟ್ಕಲ್, ಹುಬ್ಬಳ್ಳಿ ಮುಂತಾದ ಕಡೆ ಶೀತಳ ಗೃಹಗಳನ್ನು ಮತ್ತು, ಮಂಜುಗಡ್ಡೆ ತಯಾರಿಸಲು ಬೇಕಾದ ವ್ಯವಸ್ಥೆಯನ್ನು ಮಾಡಲು ಈಗಾಗಲೆ ಕ್ರಮ ಕೈಕೊಂಡಿದೆ. ಇದಲ್ಲದೆ ಹಿಡಿದ ಮೀನನ್ನು ಸರಬರಾಯಿ ಮಾಡಲು ರಸ್ತೆಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಮೀನುಗಾರಿಕೆ ಇಲಾಖೆಗಳ ಸಹಕಾರದಿಂದ 47 ಲಕ್ಷ ರೂಪಾಯಿಗಳ ಅಂದಾಜಿನಲ್ಲಿ ಮಾಡುತ್ತಿದ್ದೇವೆ. 8 ಇನ್‌ಸುಲೇಟೆಡ್ ವ್ಯಾನ್ಸ್ ಇವೆ, ಮೂರು ಚಕ್ರಗಳುಳ್ಳ ಗಾಡಿಯಿಂದ ಮಾರುಕಟ್ಟೆಗೆ ಸಾಗಾಣಿಕೆ ಮಾಡುವುದಕ್ಕೆ ವ್ಯವಸ್ಥೆ ಮಾಡಿದೆ. ಸಮುದ್ರ ತೀರದಲ್ಲಿ ಒಂದು ವ್ಯವಸ್ಥೆ ಮಾಡಿರುವುದರ ಜೊತೆಗೆ ಅಲ್ಲಿರುವ ಫಿಷಿಂಗ್ ಹಾರ್ಬರ್ ವಿಷಯದಲ್ಲಿ ಹೆಚ್ಚು ಗಮನ ಕೊಟ್ಟು F.A.O. ಎಕ್ಸ್‌ಪರ್ಟ್ ಸಲಹೆ ಪ್ರಕಾರ ನಾಲ್ಕು ಕಡೆ ಬಂದರುಗಳನ್ನು ಕಟ್ಟಿಸಲು ಪ್ರಯತ್ನ ಮಾಡಿದೆ. ಎರಡು ಕಡೆ ಈ ಕಾರ್ಯ ಈಗಾಗಲೇ ಮುಗಿದಿದೆ. ಅಂದಮೇಲೆ ಈ ಇಲಾಖೆಯಲ್ಲಿ ಬಂದರುಗಳ ಅಭಿವೃದ್ಧಿಗೆ ಮತ್ತು ಇತರ ಮೀನುಗಾರಿಕೆಗೆ ಸಂಬಂಧಪಟ್ಟ ವಿಷಯಗಳಿಗೆ ಎಷ್ಟು ಕೊಟ್ಟಿತ್ತೋ ಅದರ ಎರಡರಷ್ಟು ಖರ್ಚಾಗಿದೆ. ಇನ್‌ಲ್ಯಾಂಡ್ ಫಿಷರೀಸ್ ಅಂದರೆ ಒಳನಾಡಿನ ಮೀನುಗಾರಿಕೆ ಅಭಿವೃದ್ಧಿಗೆ 16 ಕಡೆ ಫಿಷ್ ಫಾರಂಗಳನ್ನು ತೆರೆದಿದೆ. ಇದರಲ್ಲಿ ಬಹಳ ಮುಖ್ಯವಾಗಿ ತುಂಗಭದ್ರ ಜಲಾಶಯದ ಬಳಿ 14 ಎಕರೆಗಳ ಪ್ರದೇಶದಲ್ಲಿ ಮೀನುಗಳ ನರ್ಸರಿ ಮಾಡಲು ಫಾರಂ ಮಾಡಿದೆ. ಹೀಗೆ ವಾಣೀವಿಲಾಸ ಸಾಗರ, ಕೃಷ್ಣರಾಜಸಾಗರ, ಮಾರ್ಕೋನಹಳ್ಳಿ ಪ್ರಾಜೆಕ್ಟ್, ಹೆಸರುಘಟ್ಟ ಮುಂತಾದ 16 ಕಡೆ ಇಂಥ ಫಾರಂ ಮಾಡಿ ಉಪಯುಕ್ತವಾದ ಕೆಲವು ಮೀನಿನ ಮರಿಗಳನ್ನು ಕಲ್ಕತ್ತ, ಕೊಚಿನ್ ಮುಂತಾದ ಪ್ರದೇಶಗಳಿಂದ ತರಿಸಿ ಕೆರೆಗಳಲ್ಲಿ ಬಿಡಲು ಸುಮಾರು 17 ಸಾವಿರ ದೊಡ್ಡ ಕೆರೆಗಳಲ್ಲಿ, 30 ಸಾವಿರ ಸಣ್ಣ ಕೆರೆಗಳಲ್ಲಿ ಸಾಕಲು ಒಂದು ಯೋಜನೆ ಬಹಳ ತೀವ್ರವಾಗಿ ತಯಾರಾಗುತ್ತಿದೆ. ನಾನ್‌ವೆಜಿಟೇರಿಯನ್ಸ್‌ಗೆ ಮೊಟ್ಟೆ, ಹಾಲು, ಮಾಂಸಗಳ ಮಧ್ಯೆ ಮೀನನ್ನಿಡಬೇಕೆಂಬ ಆಸೆಯಿರುವುದರಿಂದ ಮೀನುಗಾರಿಕೆ ಬಾಬಿಗಾಗಿ ಹೆಚ್ಚು ಹಣ ಒದಗಿಸಬೇಕೆಂದು ಒಂದು ಹೆಚ್ಚಿನ ರೀತಿಯಲ್ಲಿ ಒದಗಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಮಧ್ವರಾಜ್ ಮತ್ತು ಇತರರು ಕೆಲವರು ಮೀನುಗಾರಿಕೆ ವಿಚಾರದಲ್ಲಿ ಹೆಚ್ಚಿನ ಆಸಕ್ತಿ ವಹಿಸಿರುವುದರಿಂದ ಹೆಚ್ಚಿನ ವಿಚಾರವನ್ನು ಇದುವರೆಗೆ ತಿಳಿಸಬೇಕಾಯಿತು.

ಇನ್ನು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದೆರಡು ಮಾತನ್ನು ಹೇಳಬೇಕೆಂಬ ಇಚ್ಛೆಯಿದೆ. ಮುಖ್ಯವಾಗಿ ಈ ಆಯವ್ಯಯ ಅಂದಾಜಿನ ಮೇಲೆ ಚರ್ಚೆ ಮಾಡುವಾಗ ಪ್ರಸ್ತಾಪಿಸಿರುವ ವಿಷಯಗಳಿಗೆ ಸಮಾಧಾನ ನೀಡಲು ಅರಣ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಒಂದು ವಿಸ್ತಾರವಾದ ಚಿತ್ರವನ್ನು ಮಾನ್ಯ ಸದಸ್ಯರ ಮುಂದೆ ಇಟ್ಟರೆ ಅವರಿಗೆ ಸಮಾಧಾನವಾಗಬಹುದು. ಖೋತಾ ನಿರ್ಣಯ ಕಳುಹಿಸಿರುವುದೂ ಸಹ ಹೆಚ್ಚಾಗಿರುವುದರಿಂದ ಅದನ್ನು ಕಳುಹಿಸಿರುವವರಿಗೂ ಸಹ ಸರಿಯಾದ ಸಮಜಾಯಿಷಿ ಕೊಡುವುದು ನನ್ನ ಕರ್ತವ್ಯ. ಆದ ದರಿಂದ ಈ ದಿವಸ ಈ ಇಲಾಖೆಯಲ್ಲಿ ಎಷ್ಟು ಕಾಡನ್ನು ಬೆಳೆಸಬೇಕೆಂದಿದೆಯೆಂಬುದನ್ನು ಹೇಳುತ್ತೇನೆ. ಸಾಮಾನ್ಯವಾಗಿ 13,575 ಚದರ ಮೈಲಿ ಪ್ರದೇಶ

ದಲ್ಲಿ ಕರ್ನಾಟಕವಾದ ಮೇಲೆ ವನಸಂಪತ್ತು ನೆಲೆಸಿದೆ. ಅದರಲ್ಲಿ 1,300 ಎಕರೆ ಚಿಲ್ಲರೆ ಎವರ್‌ಗ್ರೀನ್ ಫಾರೆಸ್ಟಿದೆ.

ಈ ಒಂದು ಬೇಡಿಕೆಯ ಮೇಲೆ ಮಾತನಾಡಿದ ಮಹನೀಯರು ಅರಣ್ಯ ಸಂಪತ್ತು ಈ ದೇಶದಲ್ಲಿ ಎಷ್ಟಿರಬೇಕಾಗಿತ್ತೋ ಅಷ್ಟಿಲ್ಲದೆ ಬಹಳ ಮಟ್ಟಿಗೆ ಕ್ಷೀಣವಾಗುತ್ತಿದೆ ಎಂದು ಆರೋಪಿಸಿದರು. ಕೃಷ್ಣ ರಾಜಪೇಟೆ ನಂಜೇಗೌಡರು, ಚಿಕ್ಕಮಗಳೂರಿನ ಸುಬ್ಬಮ್ಮನವರು, ಡಿ. ಎಂ. ಸಿದ್ದಯ್ಯನವರು ಮತ್ತು ಇತರರು ಟೀಕಿಸಿದ್ದಾರೆ. ಬಹುಶಃ ತಮಗೆ ತಿಳಿದ ಹಾಗೆ ವೆಂಕಟೇಗೌಡರು ಒಂದು ಚಿತ್ರ ವನ್ನು ತಮ್ಮ ಮುಂದಿಟ್ಟರು. ಈ ಇಲಾಖೆಯ ಉತ್ಪತ್ತಿ ಸುಮಾರು 8,04,76,829 ರೂಪಾಯಿಗಳು ಆದರೆ ಖರ್ಚು ಮಾಡುತ್ತಿರುವುದು ಸುಮಾರು ಶೇಕಡ 17ರಷ್ಟು, ಇದು ಬಹಳ ಜಾಸ್ತಿಯಾಯಿತು, ಬೇರೆ ಇಲಾಖೆಗಳಲ್ಲಿ ಇಷ್ಟು ಖರ್ಚಾಗುತ್ತಿಲ್ಲ ಎಂದು ಹೇಳಿದ್ದಾರೆ. ಅವರಿಗೆ ಸಮಾಧಾನ ಮಾಡಲು ಕೆಲವು ಅಂಕಿ ಅಂಶಗಳನ್ನು ಕೊಡಬೇಕೆಂದು ನಾನು ಇಚ್ಛೆಪಡುತ್ತೇನೆ. ಸಾಮಾನ್ಯವಾಗಿ ಈ ಇಲಾಖೆ ಕೇವಲ ಬರೀ ಕಲೆಕ್ಷನ್ ಮಾಡುವ ಇಲಾಖೆಯಲ್ಲ. ಅರಣ್ಯ ಸಂಪತ್ತನ್ನು ಉಳಿಸಿ ಬೆಳೆಸ ಬೇಕಾಗಿದೆ, ಉತ್ಪತ್ತಿಯಿಲ್ಲದಿರುವ ಕಾಡನ್ನು ಕಡಿದು ಒಳ್ಳೆಯ ಉತ್ಪನ್ನ ಬರುವ ಗಿಡ ಹಾಕಿ ಬೆಳೆಸುವುದು ನಮ್ಮ ದೇಶದಲ್ಲಿ ಅಗತ್ಯವಾಗಿರುವುದರಿಂದ, ಒಳ್ಳೆಯ ಟಿಂಬರ್ ಒದಗಿಸುವುದು, ರೈಲ್ವೆ ಇಲಾಖೆಗೆ ಬೇಕಾದ ಸ್ಲೀಪರ್ ಒದಗಿಸುವುದು, ಅನೇಕ ಸಾಮಿಲ್ಸ್ ನಡೆಸಬೇಕಾಗಿರುವುದು, ಈ ಇಲಾಖೆಯಲ್ಲಿ ಕನ್ಸರ್ವೆನ್ಸಿ ಮತ್ತು ವರ್ಕಿಂಗ್ ಪ್ಲಾನ್ ಸ್ಕೀಮ್ಸ್ ಎಲ್ಲಾ ನಡೆಸಬೇಕಾಗಿರುವುದ ರಿಂದ ಈಗ ಖರ್ಚು ಮಾಡುತ್ತಿರುವ ಹಣ ಹೆಚ್ಚಲ್ಲ ಎಂಬುದು ನನ್ನ ಭಾವನೆ.

ವರ್ಷಂಪ್ರತಿ 1957-58ರಲ್ಲಿ ಸುಮಾರು 28·9 ಶೇಕಡ ಖರ್ಚಾಗುತ್ತಾ ಇತ್ತು.
1958-59ರಲ್ಲಿ ಸುಮಾರು 24·27 ಶೇಕಡ ಖರ್ಚಾಗುತ್ತಾ ಇತ್ತು.
1959-60ರಲ್ಲಿ ಸುಮಾರು 20·9 ಶೇಕಡ ಖರ್ಚಾಗುತ್ತಾ ಇತ್ತು.
1960-61ರಲ್ಲಿ ಸುಮಾರು 20·13 ಶೇಕಡ ಖರ್ಚಾಗುತ್ತಾ ಇತ್ತು.
1961-62ರಲ್ಲಿ ಸುಮಾರು 17·36 ಶೇಕಡ ಖರ್ಚಾಗುತ್ತಾ ಇತ್ತು.
1962-63ರಲ್ಲಿ ಸುಮಾರು 13·26 ಶೇಕಡ ಖರ್ಚಾಗುತ್ತಾ ಇತ್ತು.

6-00 P.M.

ಸಿಬ್ಬಂದಿಗೆ, ಅಧಿಕಾರಿಗಳ ಸಂಬಳ ಲೆಕ್ಕ ಹಾಕಿದರೆ ಕೇವಲ ಶೇಕಡ 7 ಇದೆ. ಅವರು ಹೇಳಿದಹಾಗೆ. ಆದ್ದರಿಂದ ಈ ಇಲಾಖೆಯಲ್ಲಿ ಅದಕ್ಕೆ ಹೆಚ್ಚು ಖರ್ಚಾಗುತ್ತಾ ಇಲ್ಲ. ಕಾರಣವೇನೆಂದರೆ ಈ ದೇಶದಲ್ಲಿ ಇಷ್ಟೊಂದು ಕಾಡು ಇರುವಾಗ, ಅದನ್ನು ಬೆಳೆಸಬೇಕಾಗಿದೆ, ಇರುವುದನ್ನು ಸಂರಕ್ಷಣೆ ಮಾಡಬೇಕಾಗಿದೆ. ಈ ಕಾರ್ಯದಲ್ಲಿ ಸಾಮಾನ್ಯವಾಗಿ ಪ್ರತಿಯೊಂದುಕಡೆಯೂ ನೋಡುತ್ತಾ ಇದ್ದೇನೆ. 1,000 ಎಕರೆ ಕಾಡು ಇರುವ ಪ್ರದೇಶದಲ್ಲಿ ಇಬ್ಬರು ಗಾರ್ಡ್ಸ್, ಇಬ್ಬರು ವಾಚ್‌ಮನ್ ಇರುವ ಪರಿಸ್ಥಿತಿ ಇರುವಾಗ ಅತ್ಯಂತ ಸುಖವಾಗಿ ಹೊರತಕ್ಕ ವಾಹನಗಳ ಮುಖಾಂತರ ಮತ್ತು ಬುದ್ಧಿವಂತರಾದ ಜನ ಕಾಡಿನ ಬಹಳ ಪ್ರಾಮುಖ್ಯವಾದ ಗಂಧದ ಮರ ಮತ್ತು ಕರೀಮರ, ಸಾಗುವಾನಿ ಮರಗಳನ್ನು ಸಾಗಿಸುವುದರಲ್ಲಿ ತೊಡಗಿರುವವರನ್ನು ಹಿಡಿಯಬೇಕಾದರೆ ಈ ಇಲಾಖೆ ಯಲ್ಲಿರತಕ್ಕ ಸಿಬ್ಬಂದಿವರ್ಗ ಏನೇನೂ ಸಾಲದು ಎಂದು ನನ್ನ ಭಾವನೆ. ಈ ಒಂದು ದೃಷ್ಟಿಯಿಂದ ಈ ಇಲಾಖೆಯಲ್ಲಿಮಟ್ಟಿಗೆ ಹೆಚ್ಚಿನ ರೀತಿಯಲ್ಲಿ ರೀ ಆರ್ಗನೈಸ್ ಮಾಡಿ ಎಷ್ಟುಸಾವಿರ ಎಕರೆಗೆ ಎಷ್ಟು ಜನ ಇರಬೇಕೆಂದು ವ್ಯವಸ್ಥಿತವಾದ ರೀತಿಯಲ್ಲಿ ಮಾಡಿದರೆ ಲಕ್ಷೋಪಲಕ್ಷ ರೂಪಾಯಿ ಬೆಲೆಬಾಳುವ ಮರಗಳನ್ನು ಕಾಡಿನಿಂದ ಸಾಗಾಣಿಕೆ ಏನು ಮಾಡುತ್ತಾರೆ ಎಂದು ಎ.ಜಿ.ಆರ್. ಸಮಿತಿಯವರು ಹೇಳಿದ್ದಾರೆ ಎಂಬುದಾಗಿ ಶ್ರೀಮಾನ್ ಸಿದ್ದಯ್ಯನವರು ತಿಳಿಸಿದರು. ಅದು ಬಹುಶಃ ಹೊಸದಾಗಿ ಬಂದಂಥ ಉದ್ಯಮವಾಗಿಲ್ಲ. ಅರಣ್ಯದಲ್ಲಿ ಅದು ನಾನು ತಿಳಿದಹಾಗೆ ಮೊದಲಿನಿಂದಲೂ ಇಂಥಾ ಆರೋಪಣೆ ಬರುತ್ತಾ ಇತ್ತು. ಸಾಧ್ಯವಾದಮಟ್ಟಿಗೂ ತಡೆಗಟ್ಟಲು ಸರ್ಕಾರದವರು ಪ್ರಯತ್ನ ಮಾಡಿದ್ದಾರೆ. ಇದರಲ್ಲಿ ಬಹಳ ಮುಖ್ಯವಾಗಿ ಕಳೆದ ಒಂದು ವರ್ಷದಲ್ಲಿ ಸುಮಾರು 8 ಸ್ಕ್ವಾಡ್ ಗಳನ್ನು ಏರ್ಪಾಡು ಮಾಡಿದ್ದೇವೆ. ಇದರಿಂದ ಗಂಧದ ಮರದ ಸಾಗಾಣಿಕೆ ಏನು ನಡೆಯುತ್ತಾ ಇತ್ತೋ ಅದು ಸ್ವಲ್ಪಮಟ್ಟಿಗೆ ಕಡಿಮೆಯಾಗುತ್ತಾ ಬಂದಿದೆ. ಆದರೆ ಪೂರ್ಣವಾಗಿ ನಿಂತಿದೆ ಎಂದು ನಾನಾದರೂ ತಿಳಿದುಕೊಳ್ಳುವುದಿಲ್ಲ. ಏಕೆಂದರೆ ಈ ಸಂಸ್ಥಾನದಲ್ಲಿ 5 ಭಾಗಗಳಿಂದ ಬಂದ ಭಾಗ ಗಳಿರುವುದರಿಂದ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಕಾನೂನು ಇದೆ. ಹಳೇ ಮೈಸೂರಿನಲ್ಲಿ ಗಂಧದಮರ ಬೆಳೆದದ್ದೆಲ್ಲಾ ಸರ್ಕಾರದ ಸ್ವತ್ತಾಗಿತ್ತು. ಕೊಳ್ಳೆಗಾಲ, ಕೊಡಗು

(ಶ್ರೀ ಬಿ. ರಾಚಯ್ಯ)

ಮತ್ತು ಉತ್ತರ ಕರ್ನಾಟಕದಿಂದ ಬಂದಿರತಕ್ಕ ಭಾಗಗಳಲ್ಲಿ ಯಾವ ರೈತನ ಜಮೀನಿನಲ್ಲಿ ಈ ಮರ ಬೆಳೆಯುತ್ತಾ ಇದೆ ಅದನ್ನು ಸರ್ಕಾರದ ಅಪ್ಪಣೆ ಪಡೆದು ಕತ್ತರಿಸಿ ಅದರಿಂದ ಬರತಕ್ಕ ಉತ್ಪನ್ನವನ್ನು ಅವರೇ ಪಡೆದುಕೊಳ್ಳುವುದಕ್ಕೆ ಅವಕಾಶವಿದೆ, ಇವನ್ನೆಲ್ಲಾ ಯಾವರೀತಿ ಸರಿಮಾಡಬೇಕೆಂದು ವಿಚಾರ ಮಾಡುತ್ತಾ ಇರುವ ಅಂಶ ಜಂಟಿ ಸೆಲೆಕ್ಟ್ ಕಮಿಟಿ ಮುಂದೆ ಇದೆ. ಚರ್ಚೆಯಾಗುತ್ತಾ ಇತ್ತು, ಆದ್ದರಿಂದ ಈ ಕಾನೂನನ್ನು ಏಕರೂಪತೆಗೆ ತಂದಾಗ ಎಲ್ಲಾ ಕಡೆಯಲ್ಲೂ ಕೂಡ ಗಂಧದ ಮರವನ್ನು ಯಾವರೀತಿ ಪಡೆದುಕೊಳ್ಳಬೇಕೆಂಬ ಅಂಶ ಜಂಟಿ ಸೆಲೆಕ್ಟ್ ಕಮಿಟಿಯಿಂದ ಬಂದಮೇಲೆ ಈ ಸಭೆಯ ಮುಂದೆ ಇಡುತ್ತೇವೆ. ಆದರೆ ಈಗ ಒಂದು ಮಾತು ತಿಳಿಸುವುದು ಏನೆಂದರೆ ಹಳೇ ಮೈಸೂರಿನಲ್ಲಿ ನಾಮಿನಲ್ ರಾಯಲ್ಟಿ ಕೊಡುತ್ತಾ ಇದ್ದೇವೆ. ಆ ದೃಷ್ಟಿಯಿಂದ ಅವರಿಗೆ ಇದರಮೇಲೆ ಯಾವ ಆಸಕ್ತಿಯೂ ಇಲ್ಲ ಮತ್ತು ಬೆಳೆಸುವುದಕ್ಕೂ ಸಹ ಉತ್ಸಾಹ ಇಲ್ಲ. ಅನೇಕ ಸಂದರ್ಭಗಳಲ್ಲಿ ಪ್ರೈವೇಟ್ ಲ್ಯಾಂಡ್‌ನಲ್ಲಿರತಕ್ಕ ಮರಗಳನ್ನು ಮಾರಾಟ ಮಾಡುತ್ತಾ ಇದ್ದಾರೆ, ಮತ್ತು ಅದೇರೀತಿ ರೆವಿನ್ಯೂ ಫಾರೆಸ್ಟ್‌ನಲ್ಲಿರುವುದೂ ಮಾಡುತ್ತಾ ಇದ್ದಾರೆ. ಅಮೃತ ಮಹಲ್ ಕಾವಲು ಇಂಥಾಕಡೆ ಈ ಮರಗಳನ್ನು ಬೆಳೆಯುತ್ತಾ ಇದ್ದಾರೆ. ಅದಕ್ಕೇ ಈ ದೇಶದಲ್ಲಿ ಅರಣ್ಯದಿಂದ ಅಷ್ಟು ಗಂಧದ ಮರ ಕಳ್ಳ ಸಾಗಾಣಿಕೆಯಾಗುತ್ತ ಇದೆ ಎಂದರೆ ತಪ್ಪಾಗುತ್ತದೆ. ಈ ದೃಷ್ಟಿಯಿಂದ ಕಳೆದ 1961ರಿಂದ ಎಲ್ಲಾ ಕಡೆಯೂ ಪ್ರೈವೇಟ್‌ಆಗಿ ಮರಗಳನ್ನು ಮಾರಾಟ ಮಾಡುವುದಾಗಲಿ ಅಥವಾ ಬೇರೆಯವರಿಗೆ ಇದನ್ನು ಕೊಡುವುದಕ್ಕೆ ಆಗಲೀ ಸರ್ಕಾರ ಅವಕಾಶ ಕೊಡದೇ ಮೈಸೂರು ಸಂಸ್ಥಾನದಲ್ಲಿ ಏನು ಗಂಧದ ಮರ ಉತ್ಪನ್ನವಾಗುತ್ತಾ ಇದೆ ಅದನ್ನು ಶಿವಮೊಗ್ಗದಲ್ಲಿರುವ ಮತ್ತು ಮೈಸೂರಿನಲ್ಲಿರುವ ಫ್ಯಾಕ್ಟರಿಗಳಿಗೆ ಕೊಡುತ್ತಾ ಇದ್ದೇವೆ. ವರ್ಷಕ್ಕೆ ಸುಮಾರು 2,400 ಟನ್‌ಗಳಷ್ಟು ಮರವನ್ನು ಒದಗಿಸುತ್ತಾ ಇದ್ದೇವೆ. ಇದರ ಮುಖಾಂತರ ಒಂದು ಕೋಟಿ ಚಿಲ್ಲರೆ ರೂಪಾಯಿನಷ್ಟು ಇಲಾಖೆಗೆ ಉತ್ಪನ್ನ ಬರುತ್ತಾ ಇದೆ. ಆದರೆ ಕಳ್ಳ ಸಾಗಾಣಿಕೆಯಿಂದ ಸಾಗಿಸತಕ್ಕ ಮರಗಳನ್ನು ಇತರಕಡೆ ಎಂದರೆ, ಉತ್ತರ ಪ್ರದೇಶ ಮತ್ತು ಕಲ್ಕತ್ತಾ, ಆಂಧ್ರ ಪ್ರದೇಶಗಳಲ್ಲಿ ಫ್ಯಾಕ್ಟರಿಗಳನ್ನು ಇಟ್ಟುಕೊಂಡಿದ್ದಾರೆ. ಆ ದೇಶಗಳಲ್ಲಿ ಹೆಚ್ಚು ಗಂಧದ ಮರ ಬೆಳೆಯುತ್ತಾ ಇಲ್ಲ. ಅದಕ್ಕಾಗಿಯೇ ಈ ಮರಗಳನ್ನು ಕಳ್ಳ ಸಾಗಾಣಿಕೆಯಿಂದ ಅಲ್ಲಿಗೆ ಸಾಗಿಸುತ್ತಾರೆ. ಇಂಟರ್‌ನಲ್ ಮಾರ್ಕೆಟ್‌ನಲ್ಲಿ ನಮ್ಮ ಮೈಸೂರು ಸಂಸ್ಥಾನದಲ್ಲಿ ಉತ್ಪನ್ನವಾದ ಗಂಧದ ಎಣ್ಣೆಯನ್ನು ತುಂಬಾ ಕಡಮೆ ದರದಲ್ಲಿ ಮಾರಾಟ ಮಾಡುವುದರಿಂದ, ಸಿಂಥಿಟಿಕ್ ಆಯಿಲ್ ತಯಾರು ಮಾಡುವುದರಿಂದ ಬೆಲೆ ಕಡಮೆಯಾಗುತ್ತಾ ಇದೆ. ಹೊರಗಡೆ ಗಂಧದ ಮರ ಹೆಚ್ಚು ಬೆಳೆಯದೇ ಇರುವುದರಿಂದ ಕದ್ದು ಸಾಗಾಣಿಕೆ ಮಾಡಿದ ಮರಗಳನ್ನು ಸುಲಭವಾಗಿ ಮಾರುವುದಕ್ಕೂ ಕೂಡ ಅವಕಾಶವಿತ್ತು. ಆದ್ದರಿಂದ ಸರ್ಕಾರದವರು ಈಗ ಒಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಸುಮಾರು 7,500 ರೂಪಾಯಿಗೆ ಒಂದು ಟನ್‌ನಂತೆ ಗಂಧದ ಫ್ಯಾಕ್ಟರಿಗಳಿಗೆ ಮರ ಕೊಡುತ್ತಾ ಇದ್ದಾರೆ. ಅದನ್ನು 5,500 ರೂಪಾಯಿಗಳಿಗೆ ಇಳಿಸಿದ್ದೇವೆ. ಇದೇರೀತಿಯಲ್ಲಿ ಊದುಬತ್ತಿ ಮಾಡುವವರು, ಗಂಧದ ಕಡ್ಡಿ ತಯಾರು ಮಾಡುವವರು ಯಾರಿದ್ದಾರೆ ಅವರೆಲ್ಲರಿಗೂ ಕೂಡ ಈ ಒಂದು ರಿಯಾಯಿತಿ ದರದಲ್ಲಿ ಅವರಿಗೆ ಅವಶ್ಯಕವಾಗಿರತಕ್ಕ ಗಂಧದ ಮರ ಏನಿದೆ ಅದನ್ನು ಕೊಡಬೇಕೆಂದು ಯೋಚನೆ ಮಾಡುತ್ತಾ ಇದ್ದೇವೆ. ಇದರ ಜೊತೆಗೆ ರಿಲಿಜಿಯಸ್ ಪರ್‌ಪಸ್‌ಗೆ ಇಷ್ಟು ಇಟ್ಟುಕೊಳ್ಳಬಹುದೆಂದು ಒಂದು ಅವಕಾಶವಿದೆ. ಈ ಮೊದಲು ಊದುಬತ್ತಿ ಮತ್ತು ರಿಲಿಜಿಯಸ್ ಪರ್‌ಪಸ್‌ಗೆ ಉಪಯೋಗವಾಗಲು ಕದ್ದು ಮಾರಾಟ ನಡೆಯುತ್ತಾ ಇತ್ತು. ಈರೀತಿ ದರವನ್ನು ಕಡಮೆಮಾಡಿ ಕೈಗಾರಿಕೆ ನಡೆಸುವಂತೆ ಅನುಕೂಲ ಮಾಡಿಕೊಡುತ್ತೇವೆ ಎಂದಮೇಲೆ ಅದೂಕೂಡ ಬಹಳಮಟ್ಟಿಗೆ ಕಡಿಮೆಯಾಗಿದೆ. ಇದಕ್ಕಿಂತಲೂ ಹೆಚ್ಚಾಗಿ ಮಾನ್ಯ ಮುಖ್ಯಮಂತ್ರಿಗಳು ಜೋನಲ್ ಕೌನ್ಸಿಲ್‌ನಲ್ಲಿ ಮದರಾಸು, ಆಂಧ್ರ ಮತ್ತು ಕೇರಳ ಪ್ರದೇಶದ ಮುಖ್ಯಮಂತ್ರಿ ಮತ್ತು ಸಂಬಂಧಪಟ್ಟ ಅರಣ್ಯ ಖಾತೆಯ ಮಂತ್ರಿಗಳ ಸಹಕಾರ ಕೇಳಿದ್ದಾರೆ, ಆದ್ದರಿಂದ ಕಳ್ಳ ಸಾಗಾಣಿಕೆಯಾಗುತ್ತಿದೆ ಎಂಬ ಅನುಮಾನ ತಮಗೆ ಏನಿದೆ ಅದು ಬಹುಶಃ ಇನ್ನು ನಾಲ್ಕಾರು ವರ್ಷಗಳಲ್ಲಿ ಪರಿಹಾರವಾಗಬೇಕೆಂಬ ದೃಷ್ಟಿಯಿಂದಲೇ ಈ ಚಿತ್ರವನ್ನು ತಮ್ಮ ಮುಂದೆ ಇಟ್ಟಿದ್ದೇನೆ. ಇದರ ಜೊತೆಗೆ ಈ ದೇಶದಲ್ಲಿ ಏನೊಂದು ಕಾಡನ್ನು ಬೆಳಸಬೇಕೆಂದು ಮೊದಲು ಹೇಳುತ್ತಾ ಇದ್ದೆವು. ಅದರ ಚಿತ್ರವನ್ನೂ ಕೂಡ ಕೊಟ್ಟಿದ್ದೇನೆ. ಕಳೆದ ಸಾಲಿನಲ್ಲಿ 39 ಸಾವಿರ ಎಕರೆಯಷ್ಟು ಟೀಕ್, ಯೂಕಾಲಿಪ್ಟಸ್ ಮತ್ತು ಇತರ ಮರಗಳನ್ನು ಬೆಳೆಸುತ್ತಾ ಇದ್ದರು. ಈಗ ಪ್ರತಿವರ್ಷವೂ ಕೂಡ 35 ಸಾವಿರ ಎಕರೆಯಷ್ಟು ಹೊಸ ಗಿಡಗಳನ್ನು ಹಾಕಿಸುವ ಪ್ರಯತ್ನ ಇರುವಾಗ, ದಟ್ಟವಾಗಿ ಬೆಳೆದಿರುವ ಮರಗಳೇನಿವೆ. ಅವನ್ನು ಎಲ್ಲಾ ಕಾಲದಲ್ಲೂ ದಟ್ಟವಾಗಿಯೇ ಇಟ್ಟಿರಬೇಕಾಗುತ್ತದೆ. ಅಲ್ಲದೆ ಯಾವುದು ಉಪಯುಕ್ತತೆಗೆ ಬರುವುದಿಲ್ಲ ಅವುಗಳನ್ನು ಇದ್ದಲು ಸುಡುವುದಕ್ಕೆ ಕೊಡುತ್ತೇವೆ. ಈ ಕಡೆ ದುಡ್ಡು ಬರುತ್ತದೆ.

ಆ ಕಡೆ ಗೊಬ್ಬರವೂ ಆಗುತ್ತದೆ, ಇನ್ನು ಹೆಚ್ಚು ಉಪಯುಕ್ತವಾದ ಗಿಡಗಳನ್ನು ಬೆಳೆಸಬೇಕೆಂಬ ದೃಷ್ಟಿಯಿಂದ ಕೆಲವುಕಡೆ ಇಲಾಖೆಯವರೇ ಬೆಂಕಿ ಹಚ್ಚಿ ಕೆಲವು ಗಿಡಗಳನ್ನು ಸುಡಬೇಕೆಂದು ತಿಳಿಸಿದ್ದೇನೆ. ಈ ರೀತಿ ದಟ್ಟವಾಗಿ ಕಾಡು ಬೆಳೆಸತಕ್ಕ ವ್ಯವಸ್ಥೆಕೂಡ ಇರುವುದರಿಂದ ಕಾಡಿನಿಂದ ಸಾಧಾರಣ 8⅓ ಕೋಟಿ ರೂಪಾಯಿಗಳ ವರಮಾನ ಬರುವುದಕ್ಕೆ ಸಾಧ್ಯವಿದೆ.

ಕಳೆದ ಸಾಲಿನಲ್ಲಿ ರೈಲ್ವೆಕಂಪೆನಿಯವರಿಗೆ 6 ಲಕ್ಷ ಸ್ಲೀಪರುಗಳನ್ನು ಸಪ್ಲೈ ಮಾಡಿದ್ದೇವೆ. ಈ ವರ್ಷ ಹನ್ನೊಂದು ಲಕ್ಷ ಸ್ಲೀಪರುಗಳನ್ನು ಸಪ್ಲೈಮಾಡಿ ನಮಗೆ ಒಂದು ಕೋಟಿ 16 ಲಕ್ಷ ರೂಪಾಯಿಗಳ ಹಣ ಬಂದಿದೆ. ಈಗ ಡಿಫೆನ್ಸ್ ಇಲಾಖೆಗೂ ಪೋಸ್ಟಲ್ ಡಿಪಾರ್ಟ್‌ಮೆಂಟಿಗೂ ಮತ್ತು ವಿದ್ಯುಚ್ಛಕ್ತಿ ಇಲಾಖೆಗೂ ಮರಗಳನ್ನು ಒದಗಿಸಲಾಗುತ್ತಿದೆ. ಹೀಗೆ ಎಲ್ಲೆಲ್ಲಿ ಮರಗಳು ದಟ್ಟವಾಗಿ ಬೆಳೆದಿರುತ್ತವೆಯೋ ಅಂಥ ಕಡೆಗಳಲ್ಲಿ ಅವುಗಳನ್ನು ಕತ್ತರಿಸಿ ಮಾರಾಟ ಮಾಡಲಾಗುತ್ತಿದೆ. ಆದರೆ ನಮ್ಮ ವರ್ಕಿಂಗ್ ಪ್ಲಾನಿನಪ್ರಕಾರ ಯಾರಿಗೆ ಈ ಮರಗಳನ್ನು ಸೃಷ್ಟಿಮಾಡಲು ಶಕ್ತಿಯಿದೆಯೋ ಅಂಥಾವರಿಗೆ ಈ ಮರಗಳನ್ನು ಕತ್ತರಿಸಲಿಕ್ಕೂ ಹಕ್ಕಿರುತ್ತೆಂದು ನಾನು ಭಾವಿಸಿದ್ದೇನೆ. ಈ ಒಂದು ಹಕ್ಕಿನ ಪ್ರಕಾರ ಅವರೀಗ ಈ ಕೆಲಸ ನಡೆಸುತ್ತಿದ್ದಾರೆ. ಅಷ್ಟೇ ಶಿವಾಯಿ ಈ ಕಾಡನ್ನೇ ನಾಶ ಮಾಡಬೇಕೆಂಬ ದೃಷ್ಟಿಯಿಂದ ಅವರು ಈ ಕೆಲಸವನ್ನು ಮಾಡುತ್ತಿಲ್ಲ. ಇಷ್ಟನ್ನು ಹೇಳಿದಮೇಲೆ ಇನ್ನು ವೈಯಕ್ತಿಕವಾಗಿ ಹೇಳುವುದಾರೆ ಶ್ರೀಮಾನ್ ರಾಜಗೋಪಾಲ್ ಅವರೂ ಮತ್ತು ಶ್ರೀ ಎಸ್. ಗೋಪಾಲಗೌಡರೂ ಅವರ ಖೋತಾ ಸೂಚನೆಗಳಲ್ಲಿ ಹೇಳಿರುವಂತೆ ಈ ಅರಣ್ಯಗಳಿಂದ ಕೈಗಾರಿಕಾಭಿವೃದ್ಧಿಗೆ ಏನು ಪ್ರಯತ್ನ ಮಾಡಲಾಗಿದೆಯೆಂದು ಕೇಳಿದ್ದಾರೆ. ಆದರೆ ಈಗಾಗಲೇ ಕೇಂದ್ರ ಸರ್ಕಾರದ ಆರ್ಥಿಕ ಹಾಗೂ ಎಕನಾಮಿಕ್ ರಿಸರ್ಚ್ ಆಫೀಸರೂ ಮತ್ತು ನಮ್ಮ ಇಲಾಖಾ ಅಧಿಕಾರಿಗಳೂ ಘಾಟ್ ಸೆಕ್ಷನ್ನಿನ್ನಲ್ಲಿರತಕ್ಕ ಕಾಡು ಪ್ರದೇಶದ ಸರ್ವೆ ಮಾಡಿದ್ದಾರೆ. ಈ ವನಸಂಪತ್ತನ್ನು ಬಳಸಿಕೊಂಡು ಕೈಗಾರಿಕಾಭಿವೃದ್ಧಿ ಮಾಡಲು ಹೆಚ್ಚಿನ ಪ್ರಯತ್ನ ನಡೆಸಬೇಕೆಂದು ಈಗಾಗಲೇ ನಾವು ನಮ್ಮ ಇಲಾಖಾ ಅಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಈಗಾಗಲೇ ನಮ್ಮಲ್ಲಿ ಎರಡು ಕಾಗದದ ಕಾರ್ಖಾನೆಗಳು ಕೆಲಸಮಾಡುತ್ತಿವೆ. ಸಾಧ್ಯದಲ್ಲೇ ಇನ್ನೂ ಮೂರು ಫ್ಯಾಕ್ಟರಿಗಳು ಬೆಳೆಯತಕ್ಕ ಸಂಭವಗಳಿವೆ. ಇನ್ನು ನಾವೀಗ ತೇಗ-ಹೊನ್ನೆ ಮರಗಳನ್ನು ಉಪಯೋಗ ಮಾಡುತ್ತಿರುವ ರೀತಿಯಲ್ಲೇ ಇತರ ಮರಗಳನ್ನು ಪ್ರೋಸೆಸ್ ಮಾಡಿ ಉಪಯೋಗಿಸಲು ಶಿವಮೊಗ್ಗ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಎರಡು ಸ್ಥಳಗಳಲ್ಲಿ ಸ್ಟ್ರಾಬೋರ್ಡ್ ಫ್ಯಾಕ್ಟರಿ ಹಾಗೂ ಚಿಪ್‌ಬೋರ್ಡ್ ಫ್ಯಾಕ್ಟರಿಗಳನ್ನು ಹಾಕಲು ಈಗಾಗಲೇ ಸರ್ಕಾರದವರು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದಾರೆ. ಹೀಗೆ ಯಾವತ್ತೂ ಈ ಅರಣ್ಯ ಸಂಪತ್ತನ್ನು ಹಾಳುಮಾಡದೆ ದೇಶದ ಸಂಪತ್ತನ್ನು ಹೆಚ್ಚುಮಾಡಬೇಕೆಂಬ ಆಸೆ ಸರ್ಕಾರದವರಿಗಿದೆ.

